
ಗೌರಿ ಲಂಕೇಶರ

ಲಂಕೇಶ್

ನವೆಂಬರ್ 22, 2006 ಬೆಲೆ ರೂ. 10/- ◆ ರಂಜನೆ ◆ ಬೋಧನೆ ◆ ಪ್ರಚೋದನೆ



ೌಡರಿಗೆ ಬಿಜೆಪಿ
ಟ್ಟಿಂಗ್



ೊರಂಗುಗೆ ಸ್ಕೆಚ್
ಂದಲ್ಲ-ಜೇಡರಳ್ಳಿ



ಾಸಕ ಸುಧಾಕರನ
ೋಟೇಟಿನ ಖಯಾಲಿ




ಲಕ್ಕಿ ಗರ್ಲ್!

ರಿಪಬ್ಲಿಕನ್ನರಾದರೇನು? ಡೆಮೊಕ್ರಾಟರಾದರೇನು? ನೆತ್ತರು ಹೀರುವ ಜಿಗಣೆಗಳೇ!

ಚಾರ್ವಾಕ

- ಶಿವಸುಂದರ್-

ಅಮೆರಿಕದ ಸಂಸತ್ತಿಗೆ ಚುನಾವಣೆಗಳು ನಡೆದು ಆಡಳಿತಾರೂಢ ಬುಷ್ ನೇತೃತ್ವದ ರಿಪಬ್ಲಿಕನ್ ಪಕ್ಷ ಸೋತು ಡೆಮೊಕ್ರಾಟರು ಅಧಿಕ ಸಂಖ್ಯೆಯಲ್ಲಿ ತಮ್ಮ ಅಧಿಪತ್ಯ ಸ್ಥಾಪಿಸಿದ್ದಾರೆ. ಇದು ಬುಷ್‌ನ ಇರಾಕ್ ಯುದ್ಧ ನೀತಿಯ ವಿರುದ್ಧ ಮತ್ತು ಇತರ ಆರ್ಥಿಕ ನೀತಿಗಳ ವಿರುದ್ಧ ಅಮೆರಿಕದ ಜನತೆ ಕೊಟ್ಟ ತೀರ್ಪೆಂದು ಎಲ್ಲ ವಿಶ್ಲೇಷಕರು ಏಕಾಭಿಪ್ರಾಯ ಪಡುತ್ತಿದ್ದಾರೆ. ಅಷ್ಟು ಮಾತ್ರವಲ್ಲ ಸೋತ ನಂತರ ಬುಷ್ ಸಹ ತನ್ನ ಇರಾಕ್ ನೀತಿಯ ಬಗ್ಗೆ ಯಾರು ಸಲಹೆ ಕೊಟ್ಟರೂ ತೆಗೆದುಕೊಳ್ಳಲು ಸಿದ್ಧನಿದ್ದೇನೆಂದು ಹೇಳಿದ್ದಾನೆ. ಅದೇನೇ ಇದ್ದರೂ ಡೆಮೊಕ್ರಾಟರ ಗೆಲುವು ಅಮೆರಿಕದ ಯುದ್ಧ ನೀತಿಯನ್ನಾಗಲೀ, ನಮ್ಮಂತ ಬಡದೇಶಗಳ ಮೇಲೆ ಮಾಡುತ್ತಿರುವ ಆರ್ಥಿಕವಾಗಿ ಆಕ್ರಮಣಕಾರಿಯಾದ ನೀತಿಗಳನ್ನಾಗಲೀ ಬದಲಾಯಿಸಬಲ್ಲದೆ? ಅಸಲು ಈ ಡೆಮೊಕ್ರಾಟರಿಗೂ ಮತ್ತು ರಿಪಬ್ಲಿಕನ್ನರಿಗೂ ಏನಾದರೂ ವ್ಯತ್ಯಾಸವಿದೆಯೆ?



ಡೆಮೊಕ್ರಾಟ್ ಕತ್ತೆ, ರಿಪಬ್ಲಿಕನ್ ಆನೆ ಎರಡೂ ಒಂದೇ

ರಿಪಬ್ಲಿಕನ್ ಮತ್ತು ಡೆಮೊಕ್ರಾಟ್ ಪಕ್ಷಗಳ ವ್ಯತ್ಯಾಸದ ಬಗ್ಗೆ ಬರೆಯುತ್ತಾ ಜೊಷುವಾ ಫ್ರಾಂಕ್ ಎಂಬ ಪತ್ರಕರ್ತ "ಒಂದು ಕೋಕ್ ಇದ್ದ ಹಾಗೆ ಮತ್ತೊಂದು ಪೆಪ್ಸಿ ಇದ್ದ ಹಾಗೆ" ಎಂದು ವ್ಯಂಗ್ಯವಾಡಿದ್ದಾರೆ. ಇದಕ್ಕೆ 40 ವರ್ಷಗಳಷ್ಟು ಮುಂಚೆ ಇಂಗ್ಲೆಂಡಿನ ಪ್ರಸಿದ್ಧ ಚಿಂತಕ ಜಾರ್ಜ್ ಬರ್ನಾಡ್ ಶಾರನ್ನು ಒಬ್ಬ ಪತ್ರಕರ್ತ "ರಷ್ಯ ಒಂದೇ ಪಕ್ಷವಿರುವ ದೇಶ, ಆದರೆ ಅಮೆರಿಕ ಹಾಗಲ್ಲ ಅಲ್ಲವೇ?" ಎಂದು ಕೇಳಿದನಂತೆ. ಅದಕ್ಕೆ ಶಾ ರವರು "ಅಮೆರಿಕ ಸಹಾ ಒಂದೇ ಪಕ್ಷವಿರುವ ದೇಶ. ಆದರೆ ಟಿಪಿಕಲ್ ಅಮೆರಿಕನ್ನರ ರೀತಿ ಇನ್ನೊಂದು ಎಕ್ಸಟ್ರಾ ಇಟ್ಟುಕೊಂಡಿದ್ದಾರಷ್ಟೆ" ಎಂದು ಉತ್ತರಿಸಿದರಂತೆ!

ಈಗ ಸೆನೆಟ್‌ಗೆ ಆಯ್ಕೆಯಾಗಿರುವ 29 ಡೆಮೊಕ್ರಾಟರಲ್ಲಿ 13 ಜನ ಡೆಮೊಕ್ರಾಟ್ ಪಕ್ಷದಲ್ಲಿದ್ದುಕೊಂಡೇ ರಿಪಬ್ಲಿಕನ್ನರು ಇರಾಕ್ ಮೇಲೆ ಮಾಡಿದ ಯುದ್ಧವನ್ನು ಬೆಂಬಲಿಸಿದವರು. ಈಗಲೂ ಆಯ್ಕೆ ಆದ ಮರುದಿನವೇ ರಿಪಬ್ಲಿಕನ್ನರ ಯುದ್ಧ ನೀತಿಯನ್ನು ಬೆಂಬಲಿಸುವುದಾಗಿ ಸ್ಪಷ್ಟವಾಗಿ ಹೇಳಿದ್ದಾರೆ. ಅಲ್ಲದೆ ರಿಪಬ್ಲಿಕನ್ನರ ಆರ್ಥಿಕ ನೀತಿಗಳಲ್ಲಿ ಯಾವುದೇ ಗಮನಾರ್ಹ ಬದಲಾವಣೆ ಇರುವುದಿಲ್ಲವೆಂದು ಘೋಷಿಸಿದ್ದಾರೆ.

ಅದಕ್ಕೇ ಮೊದಲೇ ಹೇಳಿದ್ದು: ಡೆಮೊಕ್ರಾಟರಾದರೇನು? ರಿಪಬ್ಲಿಕನ್ನರಾದರೇನು? ಎಲ್ಲರೂ ನಮ್ಮ ನೆತ್ತರನ್ನು ಹೀರುವ ಜಿಗಣೆಗಳೆ.

ಕೊನೆ ಮಾತು

ಇಂದಿನ ನಮ್ಮ ಯುವ ಜನಾಂಗಕ್ಕೆ ಚಿತ್ರನಟರು ಮತ್ತು ಕ್ರಿಕೆಟ್ ಆಟಗಾರರೇ ಆದರ್ಶ ಪುರುಷರು ಅಥವಾ ಆದರ್ಶ ನಾರಿಯರು. ಜಗತ್ತಿನಲ್ಲಿ ಹಸಿವಿನಿಂದ ಸಾಯುತ್ತಿರುವ ಅರ್ಧಕ್ಕಿಂತ ಹೆಚ್ಚು ಜನರು ಭಾರತೀಯರೇ ಆಗಿರುವಾಗ, ಅತಿ ಹೆಚ್ಚು ಸಂಖ್ಯೆಯಲ್ಲಿ ಬಾಲವೇಶ್ಯೆಯರನ್ನು, ಬಾಲ ಕಾರ್ಮಿಕರನ್ನು ಹೊಂದಿರುವ ದೇಶವಾಗಿರುವಾಗ, ಅತಿ ಹೆಚ್ಚು ರೈತರು ಆತ್ಮಹತೆಯನ್ನು ಮಾಡಿಕೊಳ್ಳುತ್ತಿರುವವರೂ ನಮ್ಮ ದೇಶದವರೇ ಆಗಿರುವಾಗ ಭಾರತದ ಈ ರೋಲ್ ಮಾಡೆಲ್‌ಗಳ ಸಾಮಾಜಿಕ ಕಾಳಜಿ ಎಷ್ಟು? ಸಾಮಾಜಿಕ ಪ್ರಜ್ಞೆಯೆಷ್ಟು? ಕೆಳಗೆ ಕೆಲವು ಉದಾಹರಣೆಗಳನ್ನು ನೀಡಿದ್ದೇವೆ:

ಶಾಪಿಂಗ್ ಮಾಡಬೇಕೆಂದರೆ ಲಂಡನ್, ದುಬೈ, ಸಿಂಗಪೂರ್‌ಗೆ ಹೋಗುತ್ತೇನೆನ್ನುವ ಚಿತ್ರನಟಿ ರಮ್ಯಾ.



ಹೇರ್ ಕಟಿಂಗ್ ಮಾಡಿಸಿಕೊಳ್ಳಲು ಪ್ರತಿ ತಿಂಗಳು ರಾಂಚಿಯಿಂದ ಬೆಂಗಳೂರಿಗೆ ಹಾರಿಬರುವ ಕ್ರಿಕೆಟಿಗ ದೋನಿ.

ಪುಸ್ತಕ ಓದುವ ಅಭ್ಯಾಸ ಖಂಡಿತಾ ಇಲ್ಲವೆಂದು ಹೆಮ್ಮೆಯಿಂದ ಹೇಳಿಕೊಳ್ಳುವ ಚಿತ್ರನಟ ಪುನೀತ್ ರಾಜಕುಮಾರ.



ದೇಶದ ರಾಜಕೀಯ ಬೋರಿಂಗ್ ಸಬ್ಜೆಕ್ಟ್ ಎನ್ನುವ ಏಷಿಯಾದ ಶ್ರೇಷ್ಠರಲ್ಲಿ ಒಬ್ಬನಾದ ಕ್ರಿಕೆಟಿಗ ಸಚಿನ್ ತೆಂಡೂಲ್ಕರ್.

No Comments



"ನನಗೆ ಪುಸ್ತಕಗಳನ್ನು ಓದುವ ಅಭ್ಯಾಸ ಖಂಡಿತಾ ಇಲ್ಲ"


-ಪುನೀತ್ ರಾಜ್‌ಕುಮಾರ್

"ಅಧಿಕಾರ ಕೊಟ್ಟರೋದು ಹಳ್ಳಿಗೆ ಹೋಗಿ ಮಲಗಕ್ಕೆ ಅಲ್ಲ"

-ಮಲ್ಲಿಕಾರ್ಜುನ ಖರ್ಗೆ

"ನನ್ನ ಗೆಲುವು ದೋಸ್ತಿ ಸರ್ಕಾರದ ಪತನಕ್ಕೆ ನಾಂದಿ"

-ಸಿದ್ಧರಾಮಯ್ಯ



"ಇಂಗ್ಲೆಂಡಿನಲ್ಲಾಗಲೀ, ಫ್ರಾನ್ಸ್‌ನಲ್ಲಾಗಲೀ ನಗರದಿಂದ 25 ಕಿ.ಮಿ. ದೂರ ಹೋದರೆ ಇಂಗ್ಲಿಷ್ ಇರಲ್ಲ, ನಮ್ಮಲ್ಲಿ ಮಾತ್ರ ಏಕೆ ಹೀಗೆ?"

ಜಿ.ಎಸ್. ಶಿವರುದ್ರಪ್ಪ

ನಂಬಿದ್ರೆ ನಂಬಿ ಬಿಟ್ರೆ ಬಿಡಿ:



"ದತ್ತಪೀಠ ಚಳವಳಿಯಲ್ಲಿ ಮುಂದಿರುವುದು ವಿ.ಎಚ್.ಪಿ.ಯೇ ಹೊರತು ಬಿ.ಜೆ.ಪಿ.ಯಲ್ಲ"

-ಸದಾನಂದಗೌಡ, ಬಿಜೆಪಿ ಅಧ್ಯಕ್ಷ

"ಭಾರತ ವೇಗವಿರುವ ಟೈಗರ್ ಎಕಾನಮಿ ಅಲ್ಲದಿರಬಹುದು, ಆದರೆ ಶಕ್ತಿ ಇರುವ ಎಲಿಫೆಂಟ್ ಎಕಾನಮಿಯಂತೂ ಹೌದು"



-ನಾರಾಯಣಮೂರ್ತಿ

"ನಮ್ಮ ರಾಜಕೀಯ ವ್ಯವಸ್ಥೆ ಬದಲಿಸಬೇಕೆಂಬುದು ನನ್ನ ಆಸೆ"



-ಚಿತ್ರ ನಟಿ ರಮ್ಯಾ

"ನನಗೆ ಬೂಕರ್ ಪ್ರಶಸ್ತಿ ಸಿಗಲು ಪರೋಕ್ಷವಾಗಿ ಬುಷ್ ಸಹಾ ಕಾರಣ"



-ಕಿರಣ್ ದೇಸಾಯಿ

"ಒಳ ಮೀಸಲು ವಿಷಯದಲ್ಲಿ ನಾನು ಪ್ರಾಮಾಣಿಕ"

-ದೇವೇಗೌಡ

ವಾರದ ಘೋಷಣೆ

ಇತ್ತೀಚೆಗೆ ಅಮೆರಿಕದಲ್ಲಿ ಸೆನೆಟ್‌ಗಾಗಿ ನಡೆದ ಚುನಾವಣೆಯಲ್ಲಿ ಬುಷ್ ನೇತೃತ್ವದ ರಿಪಬ್ಲಿಕನ್ನರು ಸೋತು ಕ್ಲಿಂಟನ್ ನೇತೃತ್ವದ ಡೆಮೊಕ್ರಾಟರು ಗೆದ್ದರು. ಈ ಬದಲಾವಣೆಯಿಂದ ಸಾಮಾನ್ಯ ಜನರ ಮಟ್ಟದಲ್ಲಿ ಏನಾದರೂ ಬದಲಾವಣೆ ತರುತ್ತದೆಯೋ ಎಂಬ ಬಗ್ಗೆ ಜೋಷುವಾ ಫ್ರಾಂಕ್ ಎಂಬ ಚಿಂತಕ ಈ ರೀತಿ ಪ್ರತಿಕ್ರಿಯಿಸಿದ್ದಾರೆ:

"ಬೈಬೈ ಕೋಕ್, ಹಲೋ ಪೆಪ್ಸಿ..!"

ನಾರಾಯಣಮೂರ್ತಿ ಚೀನಾವನ್ನು ಹೊಗಳುವುದೇಕೆ?:

ಇನ್‌ಫೋಸಿಸ್ ನಾರಾಯಣ ಮೂರ್ತಿಗೆ ಚೀನಾವನ್ನು ಕಂಡರೆ ಅಚ್ಚುಮೆಚ್ಚು. ಇದಕ್ಕೆ ಕಾರಣ ಅವರು ಒಂದಾನೊಂದು ಕಾಲದಲ್ಲಿ ತಾತ್ಕಾಲಿಕವಾಗಿ ಕಮ್ಯುನಿಸ್ಟರಾಗಿದ್ದರು ಎಂಬುದಲ್ಲ, ಹೌದು, ಅವರು 70ರ ದಶಕದಲ್ಲಿ ಕಮ್ಯುನಿಸ್ಟರಾಗಿದ್ದರಂತೆ. ಆದರೆ ಒಮ್ಮೆ ಸರಿಯಾದ ದಾಖಲೆಗಳಿಲ್ಲದ ಕಾರಣಕ್ಕೆ ಅವರನ್ನು ಯುಗೋಸ್ಲಾವಿಯಾದ ಕಮ್ಯುನಿಸ್ಟರ ಸರ್ಕಾರ ಬಂಧಿಸಿತಂತೆ. ಇದರಿಂದ ಅವರಿಗೆ ಕಮ್ಯುನಿಸಂ ಬಗ್ಗೆ ಭ್ರಮನಿರಸನವಾಗಿ ಕ್ಯಾಪಿಟಲಿಸ್ಟರಾಗಿಬಿಟ್ಟರಂತೆ.

ಆದರೆ ನಾರಾಯಣ ಮೂರ್ತಿಗೆ, ಅಮೆರಿಕಾದಂತಹ ಪ್ರಜಾತಾಂತ್ರಿಕ ಮತ್ತು ಬಂಡವಾಳಶಾಹಿ ದೇಶ ಇರಾಕಿನಲ್ಲಿ 11 ಲಕ್ಷಕ್ಕೂ ಹೆಚ್ಚು ಜನರನ್ನು ಕೊಂದು ಹಾಕಿದ್ದರೂ, ಅಮೆರಿಕದ ಬಗ್ಗೆಯಾಗಲೀ, ಅದರ ಪ್ರಜಾಪ್ರಭುತ್ವದ ಬಗ್ಗೆಯಾಗಲೀ ಭ್ರಮನಿರಸನವಾಗುವುದಿಲ್ಲ, ಬಿಡಿ. ಆದರೂ ಇತ್ತೀಚೆಗೆ ಹಿಂದೆಂದಿಗಿಂತಲೂ ಹೆಚ್ಚಾಗಿ ಚೀನಾ ಹೊಗಳಿಕೆ ಮಾತ್ರವಲ್ಲದೆ ಭಾರತಕ್ಕೆ ಚೀನಾವೇ ಮಾರ್ಗದರ್ಶಿಯೆಂದೂ ನಾರಾಯಣ ಮೂರ್ತಿಗಳು ಪ್ರತಿಪಾದಿಸುತ್ತಿದ್ದಾರೆ. ಹಾಗಾದರೆ ಮೂರ್ತಿಗಳು ಮನಸ್ಸು ಬದಲಾಯಿಸಿ ಕಮ್ಯುನಿಸ್ಟರಾದರೋ ಅಥವಾ ಚೀನಾವೇ ಬದಲಾಗಿ ಹೋಯಿತೋ? ಏನಿದರ ಗುಟ್ಟು?

ಕೆಂಪು ಕ್ಯಾಪಿಟಲಿಸಂ, ನೀಲಿ ಕಮ್ಯುನಿಸಂ!

ವಾಸ್ತವವಾಗಿ ಚೀನಾ ದೇಶವು ಮಾವೋ ತ್ಸೆ ತುಂಗರ ನಿಧನಾನಂತರ ಅಧ್ಯಕ್ಷನಾದ ಡೆಂಗನ ನೇತೃತ್ವದಲ್ಲಿ ಆಚರಿಸುತ್ತಿರುವುದು ಕ್ಯಾಪಿಟಲಿಸಮ್ಮೇ ಹೊರತು ಕಮ್ಯುನಿಸಮಲ್ಲ. ಮಾವೋನ ನೇತೃತ್ವದಲ್ಲಿ ನಡೆದ ಚೀನಾ ಕ್ರಾಂತಿಯ ಸಂದರ್ಭದಲ್ಲಿ ಶ್ರೀಮಂತರಿಂದ ವಶಪಡಿಸಿಕೊಂಡಿದ್ದ ಎಲ್ಲಾ ಆಸ್ತಿಪಾಸ್ತಿಗಳನ್ನು 1980ರ ದಶಕದಲ್ಲಿ ಡೆಂಗನ ಸರಕಾರವು ಆಯಾ ಕುಟುಂಬಗಳನ್ನು ಹುಡುಕಿಕೊಂಡು ಹೋಗಿ ವಾಪಸ್ ಕೊಟ್ಟಿತು. ಆ ನಂತರ 'ಬೆಕ್ಕು ಕಪ್ಪದಾದರೇನು, ಬಿಳಿಯದಾದರೇನು, ಇಲಿ ಹಿಡಿದರೆ ಸಾಕು' ಎಂಬ ಅಪ್ಪಟ ಅನುಕೂಲಸಿಂಧು ತತ್ವವನ್ನು ಅನುಸರಿಸಿದೆ ಚೀನಾ. ಈಗ ಅಲ್ಲಿ ಅಭಿವೃದ್ಧಿಯಾದರೆ ಸಾಕು ಎಂಬ ನೆಪದಲ್ಲಿ ಅಪ್ಪಟ ಬಂಡವಾಳಶಾಹಿ ವ್ಯವಸ್ಥೆಯನ್ನು ಅನುಸರಿಸಲಾಗುತ್ತಿದೆ.

ಆದರೆ ಅಲ್ಲಿನ ರಾಜಕೀಯ ವ್ಯವಸ್ಥೆ ತಕ್ಕಹಾಗೆ ರಷ್ಯಾದಲ್ಲಿ ಆದಂತೆ 'ಪ್ರಜಾತಂತ್ರ' ಎಂಬ ಬಂಡವಾಳಶಾಹಿಗಳ ಪರೋಕ್ಷ ಸರ್ವಾಧಿಕಾರವಾಗಿ ಮಾರ್ಪಾಡಾಗದೆ ಕಮ್ಯುನಿಸಂ ಹೆಸರಲ್ಲೇ ಬಂಡವಾಳಶಾಹಿಯ ನೇರ ಸರ್ವಾಧಿಕಾರ ಮುಂದುವರೆದಿದೆ. ಆದ್ದರಿಂದಲೇ ಅದನ್ನು ಕೆಂಪು ಕ್ಯಾಪಿಟಲಿಸಂ ವ್ಯವಸ್ಥೆ ಎಂದು ಕರೆಯಬಹುದು. ಈ ಕಾರಣದಿಂದಲೇ 1990ರ ದಶಕದಲ್ಲಿ ಜಾಗತೀಕರಣ ನೀತಿಗಳು ಪ್ರಾರಂಭವಾದೊಡನೆ ಏಷಿಯಾದಲ್ಲೇ ಹೆಚ್ಚಿನ ಲಾಭ ಪಡೆದುಕೊಂಡಿದ್ದು ಚೀನಾ ದೇಶ. ಇದಕ್ಕಾಗಿ ಬಡವರ ಪರವಾಗಿದ್ದ ಎಲ್ಲಾ ಕಾನೂನುಗಳನ್ನು ಬದಲಾಯಿಸಿ ವಿದೇಶಿ ಹಣಹೂಡಿಕೆದಾರರಿಗೆ ಅತ್ಯಧಿಕ ಲಾಭ ಖಾತರಿ ಮಾಡುವ ನೀತಿಯನ್ನು ಜಾರಿಗೆ ತಂದಿತು.



ಇಂದು ಭಾರತದಲ್ಲಿ ಜಾರಿಗೆ ಬರುತ್ತಿರುವ ವಿಶೇಷ ಆರ್ಥಿಕ ವಲಯವೆಂಬ SEZ ನವ ವಿದೇಶಿ ವಸಾಹತುಗಳ ಕಲ್ಪನೆಯನ್ನು ಮೊದಲು ಜಾರಿಗೆ ತಂದಿದ್ದೇ ಚೀನಾ. ಅದೂ ಇಪ್ಪತ್ತು ವರ್ಷಗಳ ಹಿಂದೆ. ಈ ವಲಯಗಳಿಂದ ಚೀನಾ ಲಕ್ಷಾಂತರ ಕೋಟಿ ಹಣಹೂಡಿಕೆಯನ್ನು ಪಡೆಯಿತು. ಆದರೆ ಅದೇ ವೇಳೆಯಲ್ಲಿ ಚೀನಾ ಸಮಾಜದಲ್ಲಿ 1949ರ ಕ್ರಾಂತಿಯ ನಂತರ ಮೊಟ್ಟಮೊದಲ ಬಾರಿಗೆ ಬಡವ-ಶ್ರೀಮಂತರ ನಡುವಿನ ಅಂತರ ಇಡಿ ಏಷಿಯಾದಲ್ಲೇ ಅತಿ ಹೆಚ್ಚಿನದ್ದಾಗಿದೆ. ಇದರಿಂದ ಉಂಟಾಗುತ್ತಿರುವ ಸಾಮಾಜಿಕ ಸಂಕ್ಷೋಭೆಯನ್ನು ಹತ್ತಿಕ್ಕಲು ಕಮ್ಯುನಿಸ್ಟ್ ಹೆಸರಿನ ಚೀನಾ ಸರ್ಕಾರ ತನ್ನ ದಮನಕಾರಿ ಕಾನೂನು ಮತ್ತು ಪೊಲೀಸ್ ಬಲವನ್ನು ಬಳಸಿಕೊಳ್ಳುತ್ತಿದೆ. ನಮ್ಮ ನಾರಾಯಣಮೂರ್ತಿಗಳು ಭಾರತ ಅನುಸರಿಸಬೇಕೆಂದು ಬಯಸುತ್ತಿರುವುದು ಈ ಚೀನಾವನ್ನೇ!

ಗುಟ್ಟು ರಟ್ಟು

ಏಕೆಂದರೆ ಅವರು ಇತ್ತೀಚಿನ ದಿನಗಳಲ್ಲಿ ಚೀನಾ ಮಾಡಿದ ಅತ್ಯದ್ಭುತ ಸಾಧನೆಯೆಂದು ಹೊಗಳುತ್ತಿರುವುದು ಯಾವುದನ್ನೆಂದರೆ ಚೀನಾ ಸರ್ಕಾರ ಕಳೆದ ಐದು ವರ್ಷಗಳಲ್ಲಿ 15 ಕೋಟಿ ರೈತರನ್ನು ತಮ್ಮ ಭೂಮಿಗಳಿಂದ ಬಲವಂತವಾಗಿ ಒಕ್ಕಲೆಬ್ಬಿಸಿರುವುದನ್ನು; ಮತ್ತು ಅಲ್ಲಿ SEZ ಗಳ ಹೆಸರಲ್ಲಿ ಲಕ್ಷಾಂತರ ಹೆಕ್ಟೇರ್ ಕೃಷಿ ಭೂಮಿಯನ್ನು ವಿದೇಶಿ ಬಹುರಾಷ್ಟ್ರೀಯ ಕಂಪನಿಗಳಿಗೆ ಪರಭಾರೆ ಮಾಡಿರುವುದನ್ನು.

ಈಗ ಎಡಪಕ್ಷ ಬೆಂಬಲಿತ ಯು.ಪಿ.ಎ. ಸರ್ಕಾರವೂ ಎಲ್ಲೆಡೆ SEZ ಗಳನ್ನು ಸ್ಥಾಪಿಸಲು ರೈತರ ಕೃಷಿ ಭೂಮಿ ಕಸಿಯುತ್ತಿದೆ. ಅಲ್ಲದೆ ಪ್ರಧಾನಿಯಾದಿಯಾಗಿ ನಾರಾಯಣಮೂರ್ತಿಯ ತನಕ ಎಲ್ಲರೂ ಸಣ್ಣ ಹಾಗೂ ಅತಿ ಸಣ್ಣ ರೈತರು ಕೃಷಿ ಬಿಟ್ಟು ಹೊರಬರಬೇಕೆಂದು ಕರೆ ಕೊಡುತ್ತಿದ್ದಾರೆ. ಆದರೆ ಭಾರತದಲ್ಲಿ ಅದು ಅಷ್ಟು ಸುಲಭ ಸಾಧ್ಯವಲ್ಲ. ಆದ್ದರಿಂದಲೇ ನಾರಾಯಣಮೂರ್ತಿಗಳು ಚೀನಾ ಮಾಡಿದಂತೆ ಸಣ್ಣ ರೈತರನ್ನು ಬಲವಂತವಾಗಿ ಹೊರಗಟ್ಟಿ ಎಂದು ಪರೋಕ್ಷವಾಗಿ ಹೇಳುತ್ತಿದ್ದಾರೆ. ಇವತ್ತು ಪ.ಬಂಗಾಳದಲ್ಲಿ ಸಾಕ್ಷಾತ್ ಕಾಮ್ರೇಡುಗಳೆ ಸಿಂಗೂರಿನಲ್ಲಿ SEZ ಗಾಗಿ ರೈತರ ಜಮೀನು ಕಬಳಿಸಿ ಕಮ್ಯುನಿಸಮ್ಮಿನ ಮಾತು ಹೇಳುತ್ತಿದ್ದರೂ ಅಲ್ಲಿನ ರೈತರೇನು ಅವರ ಮಾತು ಕೇಳುತ್ತಿಲ್ಲ.

ಅದೇನೇ ಇರಲಿ, ನಾರಾಯಣಮೂರ್ತಿಗಳ ಕೆಂಪು ಚೀನಾದ ಮೇಲಿನ ಪ್ರೀತಿಯ ಹಿಂದೆ ಇರುವುದು ಮಾತ್ರ ಅಮೆರಿಕದ ನೀಲಿ ಮನಸ್ಸೆ! ಮತ್ತು ಅವರ ಪ್ರೀತಿ ಇರುವುದು ಕೆಂಪು ಚೀನಾದ ಮೇಲಲ್ಲ-ಕೆಂಪು ಬಣ್ಣದ ಕ್ಯಾಪಿಟಲಿಸ್ಟ್ ಚೀನಾದ ಮೇಲೆ! ಏಕೆಂದರೆ ನಾರಾಯಣಮೂರ್ತಿಗಳೇ ಹೇಳಿರುವಂತೆ ಅವರು "ಹೃದಯದಿಂದ ಕಮ್ಯುನಿಸ್ಟ್, ಮೆದುಳಿನಿಂದ ಕ್ಯಾಪಿಟಲಿಸ್ಟ್!"

ಇವತ್ತು ಹಿಂದೆಂದಿಗಿಂತಲೂ 'ನಾಯಕತ್ವ'ದ ಮಹತ್ವ ಹೆಚ್ಚಿದೆ. ಭಾರತದ ಐಟಿ-ಬಿಟಿ ಇಂಡಸ್ಟ್ರಿ ಬಗ್ಗೆ ನಮ್ಮ ಭಿನ್ನಾಭಿಪ್ರಾಯಗಳೇನೇ ಇರಲಿ, ಇವತ್ತು ಅದು ಜಾಗತಿಕವಾಗಿ ಚರ್ಚೆ ಆಗುತ್ತಿದೆ ಎಂದರೆ ಅದಕ್ಕೆ ಕಾರಣ: ಲೀಡರ್‌ಶಿಪ್... ಒಳ್ಳೆಯ ನಾಯಕನಾದವನು ಒಂದು ಕೆಲಸವನ್ನು ಹೇಗೆ ಮಾಡಬೇಕೆಂದು ವಿವರಿಸುತ್ತಾ ಕೂಡುವುದಿಲ್ಲ; ಬದಲಾಗಿ ಏನು ಮಾಡಬೇಕೆಂಬುದನ್ನು ಮಾತ್ರ ಹೇಳಿ, ಕೆಲಸಗಾರರಿಂದ ಅದ್ಭುತ ರಿಜಲ್ಟ್ ತೆಗೆಯುತ್ತಾನೆ.

ಈ ಸಲ 'ನಾಯಕತ್ವ' ಕುರಿತ ಸೂಕ್ತಿಗಳನ್ನು ನೀಡುತ್ತಿದ್ದೇವೆ, ಓದುಗಾ ನಾಯಕರೇ.....


-ಮಲ್ಲಿ

ಬೆರಳ್‌ಗೆ ಕೊರಳ್

"ಇನ್ನು ಕೆಲವೇ ವಾರಗಳಲ್ಲಿ ಇರಾಕಿನ ಮಾಜಿ ಅಧ್ಯಕ್ಷ ಸದ್ದಾಂ ಹುಸೇನ್ ಹೆಣವಾಗಿರುತ್ತಾನೆ. ಆತನ ಬದುಕಿನಲ್ಲಿ 'ಲಕ್' ಎಂಬುದೇನಾದರೂ ಉಳಿದಿದ್ದರೆ, ಆತ ಬಯಸಿದಂತೆ ಗಲ್ಲಿಗೇರುವ ಬದಲಾಗಿ, ಬಂದೂಕು ಗುಂಡೇಟುಗಳು ಎದುರಾಗಬಹುದೇ ಹೊರತು, ಸಾವಿನಿಂದ ಪಾರಾಗುವ ಸಾಧ್ಯತೆಗಳಿಲ್ಲ.

ಸದ್ದಾಂ ಹುಸೇನ್ ಓರ್ವ ಸರ್ವಾಧಿಕಾರಿ, ನಿಜ. ತನ್ನನ್ನು ಕೊಲ್ಲಲು ಸಂಚು ರೂಪಿಸಿದ್ದವರನ್ನು ಕೊಂದು ಹಾಕಿದ. ಸ್ವಾತಂತ್ರ್ಯ ಬಯಸಿದ ಕರ್ದ್ ಜನಾಂಗದವರ ಮೇಲೆ ಸಾಮೂಹಿಕ ಹತ್ಯೆ ನಡೆಸಿದ. ಎರಡು ದಶಕಗಳ ಕಾಲ ಪಕ್ಕದ ಇರಾನಿನೊಂದಿಗೆ ಯುದ್ಧ ಸಾರಿದ. ಎರಡು ಬಾರಿ ಕುವೈತ್ ಮೇಲೆ ದಂಡೆತ್ತಿ ಹೋದ. ತನ್ನ ದೇಶದಲ್ಲೇ ಪ್ರತಿರೋಧ, ಭಿನ್ನಮತ ಎಂಬುದನ್ನೆಲ್ಲ ವ್ಯವಸ್ಥಿತವಾಗಿ ಮಟ್ಟಹಾಕಿದ.

ಈತನ ಧಿಮಾಕು ಕಂಡು ಅಮೆರಿಕ ಕೆರಳಿತು. ಇವನನ್ನು ಹೇಗಾದರೂ ಮಟ್ಟ ಹಾಕಬೇಕೆಂದು ನಿರ್ಧರಿಸಿತು. ಅದಕ್ಕೆಂದು ಸಂಚು ರೂಪಿಸಿತು. ವಿಶ್ವಸಂಸ್ಥೆಯ ಮೇಲೆ ಒತ್ತಡ ತಂದು ಇರಾಕಿನ ಮೇಲೆ ಆರ್ಥಿಕ ನಿರ್ಬಂಧಗಳನ್ನು ಹೇರಿತು. ಸದ್ದಾಂ ನಾಲ್ಕು ಸಾವಿರ ಜನರನ್ನು ಕೊಂದಿದ್ದ ಎಂಬ ಕಾರಣಕ್ಕೆ ಅಮೆರಿಕ ಈ ಕ್ರಮ ತೆಗೆದುಕೊಂಡಿದ್ದರಿಂದ ಸತ್ತಿದ್ದು ಸುಮಾರು ಆರು ಲಕ್ಷ ಜನ



ಆದರೂ... ಸದ್ದಾಂ ವಿಲನ್, ಅಮೆರಿಕ ಹೀರೋ.

ಆರ್ಥಿಕ ನಿರ್ಬಂಧಗಳಿಂದ, ಅಂತರರಾಷ್ಟ್ರೀಯ ಖಂಡನೆಗಳಿಂದ ಸದ್ದಾಂ ಹುಸೇನನನ್ನು ಮಟ್ಟ ಹಾಕಲಾಗಲಿಲ್ಲ. ಆಗ ಇನ್ನೊಂದು ಸಂಚನ್ನು ರೂಪಿಸಿತು ಅಮೆರಿಕ. "ಸದ್ದಾಂ ಈ ಜಗತ್ತಿಗೇ ಅಪಾಯಕಾರಿ. ಆತನಲ್ಲಿ ಸಾಮೂಹಿಕ ಹತ್ಯೆ ನಡೆಸಬಲ್ಲ ಬಯೋಲಾಜಿಕಲ್ ಅಸ್ತ್ರಗಳಿಗೆ" ಎಂದು ಬೊಬ್ಬೆ ಹಾಕಿತು. ಕೊನೆಗೆ ಅದನ್ನೇ ಕಾರಣ ಮಾಡಿಕೊಂಡು ಇರಾಕಿನ ಮೇಲೆ ಯುದ್ಧ ಸಾರಿತು. ಆ ಯುದ್ಧದಲ್ಲಿ 2 ಸಾವಿರಕ್ಕೂ ಹೆಚ್ಚು ಅಮೆರಿಕದ ಸೈನಿಕರು ಸತ್ತರೆ, ಅಮೆರಿಕದ ಸೈನ್ಯಾದಳ ಎಸಗಿದ ಬಾಂಬ್ ದಾಳಿ, ನಡೆಸಿದ ಎನ್‌ಕೌಂಟರ್‌ಗಳಲ್ಲಿ ಆರು ಲಕ್ಷ ಅಮಾಯಕ ಇರಾಕಿಗಳೂ ಸಾವನ್ನಪ್ಪಿದರು. ಸ್ವತಃ ಸದ್ದಾಂನ ಇಬ್ಬರು ಪುತ್ರರು ರಕ್ತಸಿಕ್ತ ಸಾವನ್ನು ಕಂಡರು... ಆದರೆ ಸದ್ದಾಂ ಜೈಲು ಸೇರಿದ, ಅಮೆರಿಕ ವಿಜಯೋತ್ಸವವನ್ನು ಆಚರಿಸಿತು.

ಇದೆಲ್ಲ ಆದ ನಂತರ ಇರಾಕಿ ಜನರಿಗೆ ಬೇಕಿರದ, ಆದರೆ ಅಮೆರಿಕಕ್ಕೆ ಬೇಕಾದ ಸರ್ಕಾರವನ್ನು ಅಲ್ಲಿ ಸ್ಥಾಪಿಸಲಾಯಿತು. ಅದರೊಂದಿಗೆ ಸದ್ದಾಂ ಹುಸೇನನ ದುಷ್ಕೃತ್ಯಗಳನ್ನು, ಅಪರಾಧಗಳನ್ನು ವಿಚಾರಿಸಲು ಒಂದು ನ್ಯಾಯಾಲಯವನ್ನು ರಚಿಸಲಾಯಿತು. ಈ ನ್ಯಾಯಾಲಯ ಹೇಗೆ ಅಮೆರಿಕದ ಕೈಗೊಂಬೆ ಆಗಿತ್ತೆಂದರೆ, ಅದರ ನ್ಯಾಯಾಧೀಶರೊಬ್ಬರು "ನನ್ನ ಮೇಲೆ ಬರುತ್ತಿರುವ ಒತ್ತಡಗಳನ್ನು ತಾಳಲಾರೆ" ಎಂದು ರಾಜೀನಾಮೆ ಕೊಟ್ಟರು, ಮತ್ತೊಬ್ಬರು ತಮ್ಮ ಕರ್ತವ್ಯವನ್ನು ಗಂಭೀರವಾಗಿ ಪಾಲಿಸಿದ್ದರಿಂದ ಅವರನ್ನು ತೆಗೆದುಹಾಕಲಾಯಿತು. ಕೊನೆಗೆ ಬಂದ ನ್ಯಾಯಾಧೀಶರು ಆರೋಪಿಯ ವಕೀಲರು ಮಾತನಾಡುವುದಕ್ಕೆ ಅನುಮತಿ ನೀಡದೆ ಆತನ ವಿರೋಧಿ ವಕೀಲ ಭಾಷಣಗಳನ್ನು ಮಾಡುತ್ತಿದ್ದರೆ ತಲೆದೂಗುತ್ತಾ ಕೂತರು.


ಈ ಮಧ್ಯೆ, ಸದ್ದಾಂ ಹುಸೇನನ ಪರ ವಾದಿಸುತ್ತಿದ್ದ ವಕೀಲರ ಪೈಕಿ ಹತ್ತು ಜನರನ್ನು ಅಪಹರಿಸಿ ಕೊಂದು ಹಾಕಲಾಯಿತು. ಸದ್ದಾಂ ಪರ ಯಾರೂ ವಕಾಲತ್ತನ್ನು ವಹಿಸದಂತೆ ಆ ಮೂಲಕ ಎಚ್ಚರಿಕೆ ನೀಡಲಾಯಿತು.

ಇದಕ್ಕೆ ಸರಿಯಾಗಿ ಅಮೆರಿಕದಲ್ಲಿ ಜನಪ್ರತಿನಿಧಿ ಸಭೆಗೆ ಚುನಾವಣೆಗಳು ನಡೆಯಬೇಕಿತ್ತು. ಸೆಪ್ಟೆಂಬರ್ 11, 2000 ದಂದು ಅಮೆರಿಕದ ಮೇಲೆ ದಾಳಿ ಇಟ್ಟಿದ್ದ ಓಸಾಮಾ ಬಿನ್ ಲಾಡೆನ್‌ನನ್ನು ಹಿಡಿಯಲಾಗದೇ ಹೈರಾಣಾಗಿದ್ದ, ಸದ್ದಾಂ ಹತ್ತಿರ ಸಾಮೂಹಿಕ ವಿನಾಶಕಾರಿ ಅಸ್ತ್ರಗಳಿರಲಿಲ್ಲ ಎಂಬುದು ಸಾಬೀತಾಗಿ ಮುಖಭಂಗ ಅನುಭವಿಸಿದ್ದ, ಅದನ್ನೇ ಕಾರಣವಾಗಿಟ್ಟುಕೊಂಡು ಯುದ್ಧ ಸಾರಿ ಸಾವಿರಾರು ಅಮೆರಿಕನ್ ತರುಣರನ್ನು ಬಲಿ ಕೊಟ್ಟ ಆರೋಪದಿಂದ ಮುಕ್ತನಾಗಬೇಕಿದ್ದ ಅಧ್ಯಕ್ಷ ಜಾರ್ಜ್ ಬುಷ್‌ಗೆ ಚುನಾವಣೆಗಳಲ್ಲಿ ಗೆಲ್ಲಲು ಒಂದು ಬಲಿ ಬೇಕಿತ್ತು. ಆದ್ದರಿಂದಲೇ ಚುನಾವಣೆಗಳು ನವೆಂಬರ್ 7 ರಂದು ನಡೆಯಲಿದ್ದು, ನವೆಂಬರ್ 5 ರಂದು ಸದ್ದಾಂಗೆ ಮರಣದಂಡನೆ ಘೋಷಣೆ ಆಯಿತು. (ಆದರೆ ಇದರಿಂದ ಬುಷ್‌ಗೆ ಸಹಾಯವೇನೂ ಆಗಲಿಲ್ಲ. ಆತನ ರಿಪಬ್ಲಿಕ್ ಪಕ್ಷ ಸೋತಿತು. ಅದು ಬೇರೆ ಮಾತು).

ಸದ್ದಾಂ ಹುಸೇನ್ ಓರ್ವ ಕ್ರಿಮಿನಲ್, ನಿಜ. ಆತನಿಗೆ ಶಿಕ್ಷೆ ಆಗಬೇಕು ನಿಜ. ಆದರೆ ಆತನ ವಿಚಾರಣೆ ನಡೆಸಬೇಕಾದ್ದು, ಶಿಕ್ಷೆ ನೀಡಬೇಕಾದ್ದು ಇರಾಕಿನ ಜನ ಹಾಗೂ ನ್ಯಾಯಾಲಯವೇ ಹೊರತು ಅಮೆರಿಕದ ಕೈಗೊಂಬೆಯಾದ ನ್ಯಾಯಾಧೀಶರಲ್ಲ.

* * * * * * * * * *

ಸುಮಾರು ಎರಡು ವರ್ಷಗಳ ಹಿಂದೆ ನಾಗತಿಹಳ್ಳಿಯಲ್ಲಿ ಶಿವಸಂಚಾರ ತಂಡದವರು ಅರ್ಪಿಸಿದ ಕುವೆಂಪುರವರ 'ಬೆರಳ್‌ಗೆ ಕೊರಳ್' ನಾಟಕವನ್ನು ನೋಡಿದ್ದೆ. ಜಿ.ಎಸ್.ಎಸ್. ಶಿವರುದ್ರಪ್ಪನವರು 'ಕನ್ನಡೀ ಕರಿಸಿದ್ದ' ಬಸವಲಿಂಗಯ್ಯನವರು ನಿರ್ದೇಶಿಸಿದ್ದ ಆ ನಾಟಕ ಎಷ್ಟು ಅದ್ಭುತವಾಗಿತ್ತೆಂದರೆ ಅದನ್ನು ನೋಡಿ ನಮ್ಮ ಬಿ. ಚಂದ್ರೇಗೌಡರ ತಂಗಿ ಜಾನಕಿ "ಏಕಲವ್ಯನ ಕಥೆ ಹಿಂಗಾಯ್ತು ಅಂತ ಗೊತ್ತೇ ಇರಲಿಲ್ಲ" ಎಂದು ಹೇಳಿದ್ದರು. ಆಕೆ ಹೇಳಿದ್ದು ಏಕಲವ್ಯನಿಂದ ತೆಗೆದುಕೊಂಡ ಬೆರಳಿನ ಬಲಿ ಬಗ್ಗೆ ಅಲ್ಲ ಬದಲಾಗಿ ಪುರೋಹಿತಶಾಹಿಗಳು ಶೂದ್ರರ ವಿರುದ್ಧ ನಡೆಸಿದ್ದ ಪಿತೂರಿಯ ಬಗ್ಗೆ. ಶಿವಸಂಚಾರ ತಂಡದ ವೈಶಿಷ್ಟತೆಯೇ ಅದು.


ಪಂಡಿತಾರಾಧ್ಯ ಸ್ವಾಮಿಗಳು

ಸಾಣೆಹಳ್ಳಿ ಮಠದ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು ಹುಟ್ಟುಹಾಕಿರುವ 'ಶಿವಸಂಚಾರ' ತಂಡವು ಪ್ರತಿ ವರ್ಷ ಪ್ರಗತಿಪರ ಚಿಂತನೆಗಳನ್ನು ಹೊಂದಿರುವ, ಶೂದ್ರ ಪ್ರಜ್ಞೆಯನ್ನು ಬಡಿದೆಬ್ಬಿಸುವ ನಾಟಕಗಳನ್ನು ಆಯ್ಕೆ ಮಾಡಿಕೊಂಡು, ಅವುಗಳನ್ನು ಮೊದಲು ಸಾಣೆಹಳ್ಳಿಯಲ್ಲಿ ಆಡಿ, ಆನಂತರ ರಾಜ್ಯದ ಹಲವಾರು ಕಡೆ ಪ್ರದರ್ಶನಗಳನ್ನು ನೀಡುತ್ತದೆ. ಆ ನಾಟಕಗಳ ಆಯ್ಕೆ ಶ್ರೀ ಪಂಡಿತಾರಾಧ್ಯ ಸ್ವಾಮಿಗಳದ್ದೇ ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.

ಈ ಕಾರಣಕ್ಕಾಗಿಯೇ ಅವರು ಮಠಾಧೀಶರಾದರೂ ನಮ್ಮ ಇವತ್ತಿನ ಪ್ರಗತಿಪರ ಚಿಂತಕರಲ್ಲಿ

ಕಂಡಹಾಗೆ



ಪ್ರಮುಖರಾಗುತ್ತಾರೆ. ಇದನ್ನು ಇನ್ನೊಂದು ರೀತಿಯಲ್ಲೂ ನೋಡಬಹುದು. ಅವರು ಮಠಾಧೀಶರಾಗಿರುವುದರಿಂದಲೇ ಪ್ರಾಯಶಃ ಇನ್ನೂ ಹೆಚ್ಚು ಜನರಲ್ಲಿ ಪ್ರಗತಿಪರ ಮನೋಧರ್ಮವನ್ನು ಬೆಳೆಸಬಹುದು.

ಪ್ರತಿ ವರ್ಷ ಅವರು ಸಾಣೆಹಳ್ಳಿಯಲ್ಲಿ ನಡೆಸಿಕೊಂಡು ಬರುತ್ತಿರುವ ಒಂದು ವಾರದ ನಾಟಕೋತ್ಸವ ಈಗ ಎಷ್ಟು ಬೃಹದಾಕಾರವಾಗಿ ಬೆಳೆದಿದೆ ಎಂದರೆ, ಅದು ಸದ್ಯದಲ್ಲೇ ನಿನಾಸಂಗೂ ಸೆಡ್ಡು ಹೊಡೆದು ನಿಲ್ಲಬಹುದು. ಈ ವರ್ಷದ ಕಾರ್ಯಕ್ರಮದ ಆಹ್ವಾನಪತ್ರಿಕೆ ನೋಡಿದರೆ ಕರ್ನಾಟಕದ ಸಾಂಸ್ಕೃತಿಕ ಜಗತ್ತಿನ ಅರ್ಧ ಭಾಗವೇ ಸಾಣೆಹಳ್ಳಿಗೆ ಹಾಜರಾದಂತಿತ್ತು!

ಒಂದು ದಿನದ ಕಾರ್ಯಕ್ರಮಕ್ಕೆ ನನ್ನನ್ನು ಆಹ್ವಾನಿಸಿದ್ದರಿಂದ, ನಾನು, ಬಿ. ಚಂದ್ರೇಗೌಡ, ಬಿಳಿದಾಳೆ ಈಶ, ಹಲಗೂರು ಸತೀಶ್ ಮತ್ತು ರೇವಣ್ಣ ಹೋದೆವು. ಸಾಣೆಹಳ್ಳಿಯಂತಹ ಒಂದು ಪುಟ್ಟ ಹಳ್ಳಿಯಲ್ಲಿ ಶ್ರೀ ಪಂಡಿತಾರಾಧ್ಯ ಸ್ವಾಮಿಗಳು ಒಂದು ಕೋಟಿ ರೂಪಾಯಿಗಳನ್ನು ಸಂಗ್ರಹಿಸಿ ಕಟ್ಟಿರುವ ರಂಗಭೂಮಿಯನ್ನು ನೋಡಿ ಗೌಡರು ಮತ್ತು ಈಶ ದಂಗಾಗಿ ಹೋದರು. ಅದು ಅಷ್ಟು ಚೆನ್ನಾಗಿದೆ. ಹಾಗೆಯೇ ಕಳೆದ ವರ್ಷ ಅಗಲಿದ ಸಿಜಿಕೆರವರ ಸಮಾಧಿಯನ್ನೂ ಕಲಾತ್ಮಕವಾಗಿ, ಸರಳವಾಗಿ ಕಟ್ಟಿಸಿದ್ದಾರೆ ಸ್ವಾಮಿಗಳು.

ನಾವು ಸಾಣೆಹಳ್ಳಿ ತಲುಪಿದಾಗ ಮಳೆ ಸುರಿಯುತ್ತಿತ್ತು. "ಇವತ್ತಿನ ನಾಟಕ ನೋಡಲು ಜನ ಬಂದಿರುತ್ತಾರೋ, ಇಲ್ಲವೋ" ಎಂದುಕೊಂಡು ಹೋಗಿ ನೋಡಿದರೆ ಒಳಗಿನ ಸಭಾಂಗಣ ತುಂಬಿ ತುಳುಕುತ್ತಿತ್ತು. ಒಳಗೆ ಜಾಗವಿಲ್ಲದೆ ಹೊರಗೆ ನಿಂತಿದ್ದವರಿಗೆಂದು ವೇದಿಕೆ ಮೇಲೆ ನಡೆಯುತ್ತಿದ್ದನ್ನು ತೋರಿಸಲು ದೊಡ್ಡ ಪ್ರೊಜೆಕ್ಟರ್ ಸ್ಕ್ರೀನ್ ಕೂಡ ಹಾಕಿಸಿದ್ದರು.

ಶ್ರೀ ಪಂಡಿತಾರಾಧ್ಯ ಸ್ವಾಮಿಗಳ ಪ್ರಗತಿಪರ ಧೋರಣೆ ಬಗ್ಗೆ, ಶಿವಸಂಚಾರದ ನಾಟಕಗಳು ಯಾಕೆ ಇವತ್ತು ಮುಖ್ಯ ಎಂಬುದರ ಬಗ್ಗೆ ಮಾತನಾಡಿದ ನಾನು "ಸಾಣೆಹಳ್ಳಿಯನ್ನು ನೀನಾಸಂಗೆ ಪರ್ಯಾಯವಾಗಿ ಬೆಳೆಸುತ್ತಿದ್ದಾರೆಯೇ ಸ್ವಾಮಿಗಳು?" ಎಂದು ಕೇಳಿದೆ.

ತಮ್ಮ ಭಾಷಣದಲ್ಲಿ ಅದಕ್ಕೆ ಉತ್ತರಿಸಿದ ಶ್ರೀ ಪಂಡಿತಾರಾಧ್ಯ ಸ್ವಾಮಿಗಳು "ನೀನಾಸಂ ನಮಗೆ ಸ್ಫೂರ್ತಿ. ಆದರೆ ಅವರ ನಾಟಕಗಳಲ್ಲಿ ತಂತ್ರ ಇದ್ದರೆ, ನಮ್ಮ ನಾಟಕಗಳಲ್ಲಿ ತತ್ವ ಇರುತ್ತವೆ" ಎಂದರು. ಸುತ್ತಮುತ್ತಲಿನ ಹಳ್ಳಿಗಳಿಂದ ಎತ್ತಿನ ಗಾಡಿಗಳಲ್ಲಿ, ಟೆಂಪೋ ಟ್ರ್ಯಾಕ್ಸ್‌ಗಳಲ್ಲಿ ಬಂದ ಜನ ಶಿವಸಂಚಾರದ ನಾಟಕಗಳನ್ನು ನೋಡಿ ಆನಂದಿಸುತ್ತಿದ್ದಾರೆ ಮಾತ್ರವಲ್ಲ, ಅವುಗಳ ಮೂಲಕ ಪ್ರಗತಿಪರ ಧೋರಣೆಯನ್ನು ಮೈಗೂಡಿಸಿಕೊಳ್ಳುತ್ತಿದ್ದಾರೆ ಎಂಬುದೇ ಸಂತೋಷದ ವಿಷಯ.


* * * * * * * * * *

ಸ್ವತಃ ನಾಟಕಗಳನ್ನು ಬರೆದಿರುವ, ರಂಗಭೂಮಿ ಬಗ್ಗೆ ಅಪಾರ ಉತ್ಸಾಹ ಹೊಂದಿರುವ, ಒಂದು ರಂಗಮಂದಿರ, ರಂಗ ತಂಡವನ್ನು ಕಟ್ಟಿರುವ ಶ್ರೀ ಪಂಡಿತಾರಾಧ್ಯ ಸ್ವಾಮಿಗಳು ಯಾವ ರಂಗಕರ್ಮಿಗಿಂತಲೂ ಕಡಿಮೆ ಇಲ್ಲ. ನಮ್ಮ ಚಂದ್ರೇಗೌಡರಿಗೆ "ನಿಮ್ಮ 'ಕಟ್ಟೆಪುರಾಣ' ನಾಟಕ ನೋಡಿಲ್ಲ, ಒಮ್ಮೆ ಇಲ್ಲಿ ಆಡಿಸೋಣ" ಎಂದು ಸ್ವಾಮಿಗಳು ಹೇಳಿದಾಗ, ಸಂತೋಷಗೊಂಡ ಗೌಡರು "ಈಗ ಹೊಸ ಭಾಗಗಳನ್ನು ಸೇರಿಸಿದ್ದೇನೆ. ಸದ್ಯದಲ್ಲೇ ಮಂಡ್ಯದಲ್ಲಿ ಪ್ರದರ್ಶನ ಇದೆ", ಎಂದರು. ಅದನ್ನು ಕೇಳುತ್ತಿದ್ದಂತೆ "ಯಾರು ಆಡ್ತಾ ಇರೋದು? 'ನಮ್ಮ ಟೀಮಾ'?" ಎಂದು ವಿಚಾರಿಸಿದರು. ರಂಗಭೂಮಿ, ನಾಟಕ, ಇತ್ಯಾದಿ ಕುರಿತು ಅವರೊಂದಿಗೆ ಮಾತಾಡಿ ಹೊರಟ ನಂತರ ಅವರನ್ನು ಪ್ರಥಮ ಬಾರಿ ಭೇಟಿಯಾದ ಈಶ "ಸ್ವಾಮಿಗಳು ಎಲ್ಲಾ ವಿಚಾರಗಳನ್ನು ಚೆನ್ನಾಗಿ ತಿಳಿದುಕೊಂಡಿದ್ದಾರೆ ಮಾತ್ರವಲ್ಲ, ನಮ್ಮ ಬುದ್ಧಿಜೀವಿಗಳು ವೇದಿಕೆಗಳಿಗೆ ಸೀಮಿತವಾಗಿದ್ದರೆ, ಇವರು ಅದನ್ನೆಲ್ಲ ಕಾರ್ಯರೂಪಕ್ಕಿಳಿಸುತ್ತಿದ್ದಾರೆ" ಎಂದು ಅಚ್ಚರಿಪಟ್ಟರು.

* * * * * * * * * *

ನಾವು ಸಾಣೆಹಳ್ಳಿಗೆ ಹೋಗುತ್ತಿರುವ ವಿಚಾರ ಗೊತ್ತಾಗಿ ಅಜ್ಜಂಪುರದ ವೆಂಕಟೇಶ್ "ಅಕ್ಕ, ನನ್ನ ಮನೆಗೆ ಬರಲೇ ಬೇಕು" ಎಂದು ಹಠ ಹಿಡಿದ. "ಆಗಲ್ಲ, ಮಠದ ಕಾರ್ಯಕ್ರಮ ಮುಗಿದ ನಂತರ ನಾವು ಬೆಂಗಳೂರಿಗೆ ಹಿಂದಿರುಗಬೇಕು. ಇಲ್ಲಿ ಒಂದು ಮಹಾ ಕೆಲಸ ಇದೆ" ಅಂದರೂ ಆತ ಕೇಳಲಿಲ್ಲ. "ಅದೆಲ್ಲ ಗೊತ್ತಿಲ್ಲ, ಬರಲೇಬೇಕು. ಅಷ್ಟೇ ಅಲ್ಲ, ಮಠದ ವೆಜ್ ಊಟದ ಬದಲಾಗಿ ನನ್ನ ಮನೇಲಿ ನಾನ್ ವೆಜ್ ಊಟ ಮಾಡಬೇಕು" ಅಂತ ಒತ್ತಾಯ ಮಾಡಿದ.

ಅಜ್ಜಂಪುರ ನಮ್ಮ ಗೌಡರು 13 ವರ್ಷ ವಾಸಿಸಿದ ಸಣ್ಣ ಊರು. ವೆಂಕಟೇಶನ ಒತ್ತಾಯಕ್ಕೆ ಮಣಿದು ಹೊರಟೆವು. ಮಳೆಯಲ್ಲಿ ಕಿತ್ತು ಹೋಗಿರುವ ರಸ್ತೆಯಲ್ಲಿ ಅಜ್ಜಂಪುರ ಮುಟ್ಟುವಷ್ಟರಲ್ಲಿ ಸಾಕು, ಸಾಕಾಗಿತ್ತು. ಕಾರಿನಿಂದ ಇಳಿಯುತ್ತಿದ್ದಂತೆ "ವೆಂಕಟೇಶ್, ಇಷ್ಟೊಂದು ತಾಪತ್ರಯ ಕೊಟ್ಟಿರುವ ನಿನ್ನನ್ನು ಕೊಂದು ಹಾಕುತ್ತೇನೆ" ಎಂದು ತಮಾಷೆಯಾಗಿ ಗದರಿಸಿದೆ.


ಅಜ್ಜಂಪುರ ವೆಂಕಟೇಶ್

ಈ ವೆಂಕಟೇಶ್ ಉತ್ಸಾಹಿ ತರುಣ. ಇಪ್ಪತ್ತು ವರ್ಷಗಳ ಹಿಂದೆ ಒಂದು ಸ್ಥಳೀಯ ಪ್ರೆಸ್‌ನಲ್ಲಿ ಮೊಳೆ ಜೋಡಿಸುವ ಕೆಲಸಕ್ಕೆ ಸೇರಿದ್ದ ಈ ಹುಡುಗ ಆಗ ಪಡೆಯುತ್ತಿದ್ದ ಸಂಬಳ 75 ರೂಪಾಯಿಗಳು. ಕೆಲ ವರ್ಷಗಳ ನಂತರ ಬೆಂಗಳೂರಿಗೆ ಬಂದು ಕೆಲಸಕ್ಕೆ ಸೇರಿದಾಗ ಪಡೆಯುತ್ತಿದ್ದದ್ದು 700 ರೂಪಾಯಿಗಳು. ಆದರೂ ಕಷ್ಟಪಟ್ಟು ದುಡಿದು, ಹಣ ಕೂಡಿಸಿ, ಪ್ರೆಸ್‌ನ ಮಾಲೀಕರಿಂದ ಹನ್ನೊಂದು ಸಾವಿರ ರೂಪಾಯಿಗೆ ಒಂದು ಪುಟ್ಟ ಮೆಷಿನ್ ಖರೀದಿಸಿದ ವೆಂಕಟೇಶ್ ಅಜ್ಜಂಪುರಕ್ಕೆ ಹಿಂದಿರುಗಿದ.

ಇವತ್ತು ವೆಂಕಟೇಶ್ ಒಂದು ಪುಟ್ಟ ಸಾಮ್ರಾಜ್ಯವನ್ನೇ ಕಟ್ಟಿದ್ದಾನೆ. ವೆಂಕಟೇಶ್ ತನ್ನದೇ ಕಟ್ಟಡವನ್ನು ಹೊಂದಿದ್ದಾನಲ್ಲದೆ, ಅದರಲ್ಲಿ ಎರಡು ಬೇಬಿ ಆಫ್‌ಸೆಟ್ ಮೆಷಿನ್‌ಗಳು, ಮೂರು ಕಂಪ್ಯೂಟರ್‌ಗಳು, ಹತ್ತು ನೌಕರರು ಇದ್ದಾರೆ. ಪ್ರೆಸ್ ಮೇಲಿನ ಪುಟ್ಟ ಮನೆಯಲ್ಲಿ ಹೆಂಡತಿ ಮತ್ತು ಪುಟ್ಟ ಮಗಳಿದ್ದಾರೆ, ಮನೆ ಮುಂದೆ ಹೊಸ ಕಾರ್ ನಿಂತಿದೆ. ಕಷ್ಟಪಟ್ಟು ದುಡಿದರೆ ಸರಳ, ಸಂತೋಷ ಮತ್ತು ನೆಮ್ಮದಿಯ ಬದುಕನ್ನು ಕಾಣಬಹುದು ಎಂಬುದಕ್ಕೆ ವೆಂಕಟೇಶನೇ ಉದಾಹರಣೆ. ಈ ನನ್ನ ತಮ್ಮನಿಗೆ ಪ್ರೀತಿಯ ಶುಭಾಶಯಗಳು.

-ಗೌರಿ ಲಂಕೇಶ್

ಮುಂದಾಳತ್ವ ಎನ್ನುವುದು ನಿರ್ದೇಶನವಾಗುವ ಬದಲು ಭಾಗವಹಿಸುವಿಕೆಯಾಗಬೇಕು, ಪ್ರದರ್ಶನವಾಗುವ ಬದಲು ಸಮರ್ಥತೆಯಾಗಬೇಕು-ಮೇರಿ ಡಿ. ಪೂಲ್

ಪೆದ್ದಗುಂಡನ ಪುನರ್‌ಜನ್ಮ!



ಮೆಂಡಿ ಚಪ್ಪ ಪುಡಿಪುಡಿಯಾಗಿದೆ. ಮೇಲ್ದವಡೆಯ ಅಷ್ಟೂ ಹಲ್ಲು ಉದುರಿಬಿದ್ದಿವೆ. ಇನ್ನು ಮುಂದೆ ಆತ ಓದಲಾರ. ಚೆನ್ನಾಗಿ ನಗೆಯಲಾರ. ನಗಬೇಕೆಂದರೂ ಕೃತಕ ಹಲ್ಲು ಸೆಟ್ಟು ಜೋಡಿಸಿಕೊಳ್ಳಬೇಕು. ಸುಧಾರಿಸಿಕೊಳ್ಳ ಪುದಕ್ಕಿನ್ನೂ ಆರು ತಿಂಗಳು ಬೇಕು.

Of course ಪ್ರಾಣ ಉಳಿದದ್ದೇ ಹೆಚ್ಚು ಅನ್ನುವವನಿಗೆ ಒಂದು ಕಾಲು ಲ್ಯಾಪ್ಸ್ ಆಗಿದ್ದು ಹಲ್ಲು ಸೆಟ್ಟು ಉದುರಿಬಿದ್ದಿದ್ದು ಯಾವ ಲೆಕ್ಕ?

ಸದ್ಯ ವಿಕ್ಟೋರಿಯಾ ಆಸ್ಪತ್ರೆಯ ಜೈಲು ವಾರ್ಡಿನಲ್ಲಿ ಗಾಯಗೊಂಡು ಮಲಗಿದ್ದಾನೆ ಪೆದ್ದಗುಂಡ ಆಲಿಯಾಸ್ ವೆಂಟಕಸ್ವಾಮಿ. ಕಲಾಸಿಪಾಳ್ಯದ ಇನ್ಸ್‌ಪೆಕ್ಟರ್ ಉಮೇಶ್ ಕೈಯಲ್ಲಿ ಅರೆಜೀವವಾಗುವಷ್ಟು ಹೊಡೆತ ತಿಂದೂ ಅವನ ಮುಖದಲ್ಲಿ ಪಶ್ಚಾತ್ತಾಪವಿಲ್ಲ. ಆತ ಸಾವಿಗೆ ಸಜ್ಜಾಗಿದ್ದ.

ರಿವೇಂಜ್ ಕಿಲ್ಲಿಂಗ್ಸ್ 4

ರಾ. ಸೋಮನಾಥ್

ಪೊಲೀಸರ ಕೈಗೇನಾದರೂ ಸಿಕ್ಕಿಬಿದ್ದರೆ ತನ್ನ ಹೆಣ ಬೀಳುವುದು ಗ್ಯಾರಂಟಿ ಎಂಬುದು ಆತನಿಗೆ ಮನದಟ್ಟಾಗಿತ್ತು. ತನ್ನ ಹೆಣ ಕೆಡವಿದ ಪೊಲೀಸರಿಗೆ ಕಾಮಾಕ್ಷಿಪಾಳ್ಯದ ಗೋಪಾಲಯ್ಯ ಐದು ಲಕ್ಷ ಭಕ್ಷೀಸು ಘೋಷಿಸಿದ್ದಾನೆಂಬುದು ಆತನಿಗಷ್ಟೇ ಅಲ್ಲ, ಇಡೀ ಕಾಮಾಕ್ಷಿಪಾಳ್ಯಕ್ಕೇ ಗೊತ್ತಾಗಿತ್ತು.

ಆದರೆ ತಾನು ಪೊಲೀಸರ ಕೈಗೆ ಸಿಗುವುದಕ್ಕೂ ಮುನ್ನ ಗೋಪಾಲಯ್ಯ ಅಥವಾ ಕಡಬಗೆರೆಯ ಪಾಯ್ಸನ್ ರಾಮ; ಇಬ್ಬರಲ್ಲೊಬ್ಬರನ್ನು ತೆಗೆದೇ ಹೋಗ್ತೀನಿ ಎಂದಿದ್ದ. ಆತನ ಮಾರಕ ವ್ಯಕ್ತಿತ್ವವೇ ಹಾಗಿತ್ತು.

ವೆಂಕಟಸ್ವಾಮಿ ಪೆದ್ದಗುಂಡ ಆದ

ಒಬ್ಬ ನಿರ್ಗತಿಕ ಕೊಳೆಗೇರಿ ಬಾಲಕನನ್ನು ವ್ಯವಸ್ಥೆ ಹೇಗೆ ಅಪಾಯಕಾರಿ ಹಂತಕನನ್ನಾಗಿ ರೂಪಿಸುತ್ತದೆ ಎಂಬುದಕ್ಕೆ ಈ ಪೆದ್ದಗುಂಡ ಪಕ್ಕಾ ಉದಾಹರಣೆ. ಈತನ ಹುಟ್ಟು ಹೆಸರು ವೆಂಕಟಸ್ವಾಮಿ. ಜಾತಿಯಲ್ಲಿ ದಲಿತ. ತಂದೆ ಗುರುಸ್ವಾಮಿ ಯಾವುದೋ ಕಾಲಕ್ಕೆ ಆಂಧ್ರದಿಂದ ವಲಸೆ ಬಂದು ಬಸವೇಶ್ವರನಗರದ ಸುತ್ತಮುತ್ತ ಮೋರಿ ಕ್ಲೀನ್, ಗಾರೆ ಕೆಲಸ ಇತ್ಯಾದಿ ಮಾಡಿಕೊಂಡಿದ್ದ. ಕಾಂಗ್ರೆಸ್ ಮುಖಂಡ ಕಾಮಾಕ್ಷಿಪಾಳ್ಯದ ರಾಜಣ್ಣನ ಕೃಪೆಯಿಂದ ಕಮಲಾನಗರದ ಸಂಜಯ್‌ಗಾಂಧಿ ನಗರ ಸ್ಲಮ್ಮಿನಲ್ಲಿ ಗುಡಿಸಲೊಂದನ್ನು ಹಾಕಿಕೊಂಡಿದ್ದ. ಆತನ ಪತ್ನಿ ಸರೋಜಮ್ಮ ಯಾವುದೋ ಸರ್ಕಾರಿ ಕಚೇರಿಯಲ್ಲಿ ಸಫಾಯಿ ಕರ್ಮಚಾರಿ.

ಇಲ್ಲಿಗೆ ಹತ್ತು ವರ್ಷದ ಹಿಂದೆ ಕಮಲಾನಗರವೆಂದರೆ ದೊಡ್ಡದೊಂದು ಸ್ಲಮ್ಮಾಗಿತ್ತು. ಒಬ್ಬ ಅಕ್ಕ ಮತ್ತೊಬ್ಬ ಅಣ್ಣನನ್ನು ಬಿಟ್ಟರೆ ವೆಂಕಟಸ್ವಾಮಿಯೇ ಕೊನೆಯವನು. ಏಳನೇ ಕ್ಲಾಸಿನತನಕ ಕುರುಬರಹಳ್ಳಿಯ ಸರ್ಕಾರಿ ಪ್ರಾಥಮಿಕ ಶಾಲೆಗೆ ನಿಯತ್ತಾಗಿಯೇ ಹೋಗುತ್ತಿದ್ದ. ಎಂಟನೇ ಕ್ಲಾಸಿಗೆಂದು ಕಮಲಾನಗರದ ಚೇತನ ಸ್ಕೂಲಿಗೆ ಸೇರಿದವನು ಇದಕ್ಕಿದ್ದಂತೆ ಕ್ಲಾಸಿಗೆ ಚಕ್ಕರ್ ಹಾಕಿ ಪೋಕರಿ ಹುಡುಗರ ಜೊತೆ ಗೋಲಿ ಆಡಿಕೊಂಡಿರುತ್ತಿದ್ದ. ಓದು ಹಾಳಾಗಲಿ ಕೆಲಸಕ್ಕಾದರೂ ಹೋಗು ಎಂದು ಅಣ್ಣ ವೆಂಕಟೇಶನ ಜೊತೆ ಪ್ಲಂಬಿಂಗ್ ಕೆಲಸಕ್ಕೆಂದು ಕಳಿಸಿದರೆ ಒಂದು ವಾರಕ್ಕೇ ಅದನ್ನು ಫೋಟೋ ಫ್ರೇಮ್ ಮಾಡುವ ಬಡಗಿ ಕೆಲಸಕ್ಕೆ ಸೇರಿಕೊಂಡ. ಆದರೆ ಎರಡು ತಿಂಗಳಾದರೂ ಮನೆಗೆ ಬರಲಿಲ್ಲ. ಆದಾಗಿ ಎಷ್ಟೋ ದಿನಗಳ ನಂತರ ಗೊತ್ತಾಗಿದ್ದೇನೆಂದರೆ ವೆಂಕಟಸ್ವಾಮಿ ತನ್ನ ಮನೆಯಿದ್ದ ಸಂಜಯನಗರ ಎರಡನೇ ಕ್ರಾಸಿನ ಕೊನೇ ಮನೆಯ ಮಂಜು ಎಂಬ ಪರೋಡಿಯ ಜೊತೆ ಅಂಡಲೆಯುತ್ತಿದ್ದ.


ಈ ಮಂಜು ಗೋಪಾಲಯ್ಯನ ಕಡುವೈರಿ ಮಚ್ಚನ ಶಿಷ್ಯ. ಆ ಹೊತ್ತಿಗೆ ತಿಮ್ಮೇನಹಳ್ಳಿ ತಮ್ಮಯ್ಯನ ಪಡೆಯಲ್ಲಿದ್ದ ಮಚ್ಚ ಉರ್ಫ್ ಕೇಬಲ್ ಮಂಜನಿಗೆ ಸಣ್ಣಕ್ಕಿ ಬೈಲು, ವೃಷಭಾವತಿನಗರ ಸ್ಲಮ್ಮು, ನಲವತ್ತು ಕಣ್ ಬ್ರಿಡ್ಜು, 'ಡಿ' ಕ್ರಾಸ್ ಇತ್ಯಾದಿ ಏರಿಯಾಗಳ ಪಡ್ಡೆ ಹುಡುಗರನ್ನು ಕರೆದೊಯ್ದು ಬಟ್ಟೆ-ಷೂ ಕೊಡಿಸುವ ಖಯಾಲಿ. ಕಾಲಿಗೆ ನೆಟ್ಟಗೊಂದು ಚಪ್ಪಲಿ ಕೂಡ ಗತಿಯಿಲ್ಲದ ಸ್ಲಂ ಹುಡುಗರಿಗೆ ದುಬಾರಿಯ ಜೀನ್ಸು-ಶರ್ಟು ಮತ್ತು ಮಿಂಚುವ ಷೂ ಕೊಡಿಸಿ ಡಾಬಾಕ್ಕೆ ಕರೆದೊಯ್ದು ಕ್ವಾರ್ಟರ್ ವಿಸ್ಕಿ, ಪ್ಲೇಟ್ ಬಿರಿಯಾನಿ ಕೊಡಿಸಿಬಿಟ್ಟರೆ, ಗುರು ತೋರಿಸಿದವನನ್ನು ಚುಚ್ಚಿ ಬರುತ್ತಾರೆ.

ಇದು ಬೆಂಗಳೂರಿನ ಸ್ಲಮ್ಮುಗಳ ಲೇಟೆಸ್ಟ್ ಟ್ರೆಂಡು. ಹಾಗೇ ಮಂಜನ ಮೂಲಕ ಮಚ್ಚನಿಗೆ ಪರಿಚಿತನಾದ ವೆಂಕಟಸ್ವಾಮಿ ಪ್ರಾರಂಭದಲ್ಲಿ ಪೆದ್ದುಪೆದ್ದಾಗಿ ಕೆಲವೊಮ್ಮೆ ಹುಚ್ಚು ಹುಚ್ಚಾಗಿ ಆಡುತ್ತಿದ್ದ. ಹುಡುಗರು ಗೇಲಿಗೆ ಪೆದ್ದುಗುಂಡ ಅನ್ನುತ್ತಿದ್ದರು. ಜೊತೆಗಿದ್ದವರು ಯಾರನ್ನೇ ತೋರಿಸಿದರೂ ಹೊಡೆದು ಬರುತ್ತಿದ್ದ. ಅದು 2000 ದ ಆಗಸ್ಟ್ 8 ನೇ ತಾರೀಖು. ಕಮಲಾನಗರದ ಗ್ರೌಂಡಿನಲ್ಲಿ ಹುಡುಗರು ಕ್ರಿಕೆಟ್ ಆಡುತ್ತಿದ್ದರು. ಎರಡೂ ಟೀಮುಗಳ ಮಧ್ಯೆ ಶುರುವಾದ 'ಅಮ್ಮನ್ ಅಕ್ಕನ್' ಕ್ರಮೇಣ ಮಾರಾಮಾರಿಗೆ ತಿರುಗಿತು. ಆ ಪೈಕಿ ಒಂದು ಟೀಮು ಪೆದ್ದಗುಂಡನ ಗೆಳೆಯರದಾಗಿತ್ತು.

ಯಾವತ್ತು ಮಾರಾಮಾರಿ ಶುರುವಾಯಿತೋ ಪೆದ್ದಗುಂಡ ವಿಕೆಟ್ ಎತ್ತಿಕೊಂಡಿದ್ದೇ ಭಾಸ್ಕರ ಮತ್ತು ಅನಂತ ಎಂಬಿಬ್ಬರು ಹುಡುಗರನ್ನು ಚುಚ್ಚಿಬಿಟ್ಟ.

ಅದು ಆತನ ಮೊದಲ ಕ್ರೈಮು. ಬಸವೇಶ್ವರನಗರದ ಪೊಲೀಸರು ಪೆದ್ದಗುಂಡನನ್ನು ಹಿಡಿದು ಸಮಾ ರುಬ್ಬಿ ಜೈಲಿಗೆ ಹಾಕಿದರು. ಆ ಹೊತ್ತಿಗೆ ಜೈಲಲ್ಲಿದ್ದ ಮಚ್ಚನಿಗೆ ಇವನೇ ಬಟ್ಟೆ ತೊಳೆದುಕೊಡುತ್ತಿದ್ದ. ಜೊತೆಗೆ ಕ್ರೈಮ್ ಪ್ರಪಂಚದ ವರಸೆಗಳನ್ನೂ ಕಲಿತ. ಹೀಗೆ ಎರಡು ತಿಂಗಳು ಜೈಲು ಕಳೆದ ಪೆದ್ದಗುಂಡನನ್ನು ಜಾಮೀನಿನ ಮೇಲೆ ಹೊರತರಬೇಕೆಂದರೆ ಆತನ ತಾಯಿ ಹತ್ತು ಸಾವಿರ ರೂಪಾಯಿ ಸಾಲ ಮಾಡಬೇಕಾಯಿತು.

ಹೊರಬಂದವನು ಸುಧಾರಿಸುವ ಬದಲು ಇನ್ನಷ್ಟು ಎಕ್ಕುಟ್ಟಿದ್ದ. ಕಮಲಾನಗರದ ರೌಡಿ ಪುರುಷಿಗೂ ಆತನಿಗೂ ಠಕ್ಕರ್ ಶುರುವಾಗಿತ್ತು. ಮೂರ್‍ನಾಲ್ಕು ಬಾರಿ ಪುರುಷಿಯ ಹುಡುಗರಿಂದ ರಕ್ತ ಬರುವಂತೆ ಒದೆ ತಿಂದ. ಈ ಮಧ್ಯೆಯೇ ಮಚ್ಚನ ಗುರು ತಮ್ಮಯ್ಯನ ಕೊಲೆಯಾಗಿತ್ತು. ಕೊಂದ ತಿಮ್ಮೇನಹಳ್ಳಿ ಸೂರಿಗೆ ತಮ್ಮಯ್ಯನ ಬಗ್ಗೆ ಕ್ಲೂ ಕೊಟ್ಟಿದ್ದೇ ಬೈಲು ರವಿ ಎಂಬ ಗುಮಾನಿ ಮಚ್ಚನಿಗಿತ್ತು. ಅದು 2001 ರ ಜುಲೈ ಐದನೇ ತಾರೀಖು. ಗೋಪಾಲಯ್ಯನ ಪಕ್ಕಾ ಬಂಟನಾಗಿದ್ದ ಜೈಲು ರವಿ ಮಾಗಡಿ ರೋಡಿನ ವೀರೇಶ ಟಾಕೀಸಿನಲ್ಲಿ ಸಿನಿಮಾ ನೋಡುತ್ತಿದ್ದಾನೆ ಎಂಬ ಇನ್‌ಫರ್ಮೇಷನ್ ಮಚ್ಚನಿಗೆ ಸಿಕ್ಕಿತ್ತು. ಸಿನಿಮಾ ನೋಡಿ ಹೊರಬರುತ್ತಿದ್ದಂತೆ ಮಚ್ಚನ ಪಡೆ ಬೈಲು ರವಿಯನ್ನು ಕೊಚ್ಚಿ ಹಾಕಿತ್ತು.



ಪೆದ್ದಗುಂಡನ ಪತ್ನಿ ಶ್ವೇತಾ ಮಕ್ಕಳೊಂದಿಗೆ

ಆವತ್ತು ಬೈಲುರವಿಗೆ ಮೊದಲ ಮಚ್ಚೇಟು ಕೊಟ್ಟವನೇ ಪೆದ್ದಗುಂಡ. ಜೊತೆಗಿದ್ದವನು ಕೋತಿರಾಮ. ಲಕ್ಕಿಯ ಶಿಷ್ಯ ಕ್ಯಾಪ್ಟನ್ ರಾಜ, ಕೋಳಿ ಶಿವಾ, ದಿನೇಶ ಎಲ್ಲರೂ ಸೇರಿಕೊಂಡೇ ಬೈಲುರವಿಯನ್ನು ಮುಗಿಸಿದ್ದರು. ಕೊಲೆ ಕೇಸಿನಲ್ಲಿ ಮಚ್ಚನೂ ಜೈಲು ಪಾಲಾದ. ಒಂದು ವರ್ಷದ ಮೇಲೆ 8 ತಿಂಗಳುಗಳ ಕಾಲ ಜೈಲಲ್ಲೇ ಕಳೆದ ಪೆದ್ದಗುಂಡ ಹೊರಬಂದು ಕೆಲದಿನಗಳ ಕಾಲ ಸುಮ್ಮನಿದ್ದವನು 2003 ರ ಮೇ ಹತ್ತೊಂಬತ್ತರಂದು ಮತ್ತೆ ಮಚ್ಚು ಹಿಡಿದ. ಗೆಳೆಯ ದಿನೇಶನ ಮೇಲೆ ಹಲ್ಲೆ ನಡೆಸಿದ್ದ ಕುಮಾರನನ್ನು ಕತ್ತರಿಸಿಬಿಟ್ಟ. ಒಂದಷ್ಟು ದಿ... ಪೊಲೀಸರಿಂದ ತಲೆ ಮರೆಸಿಕೊಂಡಿದ್ದವನು ಜಾಮೀನ... ಮಾಡಿಸಿಕೊಂಡು ಬಂದು 2004 ರ ಫೆಬ್ರವರಿ 1... ರಂದು ಎಳುಮಲೈ ಜೊತೆ ಸೇರಿ ಜಗದೀಶನನ್ನು ಚುಚ್ಚಿ... ಅದಾಗಿ ಎಂಟನೇ ದಿನಕ್ಕೆ ಪೊಲೀಸರಿಗೆ ತನ್ನ ಬ... ಮಾಹಿತಿ ಕೊಡ್ತಾನೆ ಎಂದು ನಂಜಪ್ಪನನ್ನು ಚುಚ್ಚಿ... ಮತ್ತೆ ಜೈಲು ಬಿದ್ದ. ಹೊರಬಂದವನು ಮುರುಗ... ಜೊತೆ ಸೇರಿ ಪ್ರೇಮ್‌ನಗರದ ಮಂಜನನ್ನು ಹಿಡಿದು ಬಡಿದ. ಪೊಲೀಸರು ಹಿಡಿದು ಮತ್ತೆ ಜೈಲಿಗೆ ಹಾಕಿದ... ಹೊರಬಂದವನೇ ಕಾಮಾಕ್ಷಿಪಾಳ್ಯದ ಪೂಜಾ ಕಲ್ಯಾ... ಮಂಟಪದ ಬಳಿ ಶ್ರೀಕಾಂತನ ಮೇಲೆ ಹಲ್ಲೆ ನಡೆಸಿದ...

ಗೋಪಾಲಯ್ಯನ ಮೇಲೆ ಮಚ್ಚು ಮಸೆದ

ಆ ಹೊತ್ತಿಗಾಗಲೇ ಇಡೀ ಕಾಮಾಕ್ಷಿಪಾಳ್ಯ ಮಚ್ಚ... ಸಾಮ್ರಾಜ್ಯವಾಗಿಬಿಟ್ಟಿತ್ತು. ಮುಂಬರುವ ಪಾಲಿಕೆ ಚುನಾವ... ಯಲ್ಲಿ ಆತ ಗೆಲ್ಲುವುದು ಬಹುತೇಕ ಖಚಿತಗೊಂಡಿತ್ತು... ದಿಗಿಲಿಗೆ ಬಿದ್ದ ಗೋಪಾಲಯ್ಯ ಮಚ್ಚನ ಒಬ್ಬೊಬ್ಬರ... ಶಿಷ್ಯರ ಮೇಲೆ ಪೊಲೀಸರನ್ನು ಛೂ ಬಿಟ್ಟಿದ್ದ. ಮಚ್ಚ... ಯಾರೇ ಹುಡುಗರು ಕಂಡಿದ್ದೇ ತಡ ಪೊಲೀಸರು ಎಳೆದೊಯ್ದು ಸುಳ್ಳು ಕೇಸಿನಲ್ಲಿ ಜೈಲಿಗೆ ಹಾಕುತ್ತಿದ್ದರು. ಅದರಲ್ಲೂ ಪೀಣ್ಯದ ಇನ್ಸ್‌ಪೆಕ್ಟರ್ ಸುಬ್ಬಣ್ಣ ಮಚ್ಚನನ್ನು ಎಡಬಿಡದೇ ಕಾಡಿ ಆತನ ಜೊತೆಗಿದ್ದ ಹುಡುಗರನ್ನು ಹೊತ್ತೊಯ್ದು ಜೈಲಿಗೆ ದಬ್ಬುತ್ತಿದ್ದರು. ಇದೆಲ್ಲವೂ ಭಾ... ಅನಾಹುತವೊಂದಕ್ಕೆ ಮುನ್ಸೂಚನೆ ಎಂಬುದು ಮಚ್ಚನಿಗಾಗಲಿ, ಆತನ ಶಿಷ್ಯರಿಗಾಗಲಿ ಗೊತ್ತಾಗಲೇ ಇ...

2005 ಕ್ಕೆಲ್ಲಾ ಪೆದ್ದಗುಂಡನ ಹೆಸರು ಸಾಕಷ್ಟು ಬೆಳೆದಿತ್ತು... ತನ್ನ ಮನೆಯಿದ್ದ ರಸ್ತೆಯ ಕಾರ್ಪೋರೇಷನ್ ಕೊಳಾಯಿಯ ಪಕ್ಕ ಹತ್ತಾರು ಹುಡುಗರ ಜೊತೆ ಅಡ್ಡೆ ಹಾಕುತ್ತಿ... ಆತನ ಕಣ್ಣಿಗೆ ಹೇಗೋ ಆ ಹುಡುಗಿ ಬಿದ್ದುಬಿಟ್ಟಳು... ಆಕೆಯ ಹೆಸರು ಶ್ವೇತಾ. ಚಿಕ್ಕಮಗಳೂರಿನ ಮರಾಠಿಯ... ಹುಡುಗಿಯಾಗಿದ್ದ ಆಕೆ ತನ್ನ ಬುದ್ಧಿಮಾಂದ್ಯ ಅಕ್ಕನ ಹೆರಿಗೆಗೆಂದು ಕಮಲಾನಗರಕ್ಕೆ ಬಂದವಳು ನೀರಿಗೆಂದ...

"ಕೊರಂಗುಗೆ ಸ್ಕೆಚ್ ನಂದಲ್ಲ" -ಜೇಡರಹಳ್ಳಿ

ಆತನ ಒಳ್ಳೇದು ಕೆಟ್ಟದು ಎರಡೂ ನನಗೆ ಚೆನ್ನಾಗಿ ಗೊತ್ತು, 1993 ರ ವರೆಗೂ ಆತ ನನ್ನ ಜೊತೆಗೇ ಇದ್ದ. ಸರಿ ಹೋಗಲಿಲ್ಲ ಅಂದ್ರೆ ನನ್ನ ಪಾಡಿಗೆ ನಾನು ದೂರ ಆಗಿಬಿಡ್ತೀನಿ. ನನ್ನ ಬಗ್ಗೆ ಆತ ಯಾವತ್ತೂ ಕೆಟ್ಟದ್ದು ಮಾತಾಡಿಲ್ಲ, ಅವನ ವಿಷಯ ಕಟ್ಟಿಕೊಂಡು ನನಗೇನೂ ಆಗಬೇಕಾದ್ದಿಲ್ಲ, ಹೀಗಿರೋವಾಗ ನಾನ್ಯಾಕೆ ಹುಡುಗರನ್ನು ಬಿಟ್ಟು ಆತನ ಮೇಲೆ ಅಟ್ಯಾಕ್ ಮಾಡಿಸಲಿ. ಹಾಗೊಮ್ಮೆ ಮಾಡಿಸಿದ್ದೇ ಆಗಿದ್ರೆ ಅದು ಪೊಲೀಸರಿಗೆ ಗೊತ್ತಾಗಬೇಕಿತ್ತಲ್ಲ? ಬಿಡುತ್ತಿದ್ರಾ?

ಇದು ಜೇಕೆ ಅಲಿಯಾಸ್ ಜೇಡರಹಳ್ಳಿ ಕೃಷ್ಣಪ್ಪನ ಮಾತು.

ಮಚ್ಚನ ಹತ್ಯೆಯಲ್ಲಿ ಪೊಲೀಸರು ಗೋಪಾಲಯ್ಯನ ಜೊತೆ ಜೇಕೆಯನ್ನೂ ಸಿಲುಕಿಸಿದ್ದಾರೆ. ಮಚ್ಚನ ಶಿಷ್ಯ ಪೆದ್ದುಗುಂಡನ ಪಡೆಯಿಂದ ಹತನಾದ ತಿಮ್ಮೇನಹಳ್ಳಿ ಸೂರಿ ಕೂಡ ಜೇಕೆ ಶಿಷ್ಯನೇ ಎಂಬ ಮಾತಿದೆ. ಅದಕ್ಕೆ ಪ್ರತೀಕಾರವಾಗಿ ಜೇಕೆಯ ಹುಡುಗರು ಪೊಲೀಸ್ ಭದ್ರಕೋಟೆಯನ್ನೇ ಭೇದಿಸಿ ಕೊರಂಗು ಮೇಲೆ ದಾಳಿ ನಡೆಸಿಬಿಟ್ಟರೆ? ಏಕೆಂದರೆ ಕೊರಂಗು ಹತ್ಯಾಯತ್ನದಲ್ಲಿ ಕೇಳಿಬಂದ ಶಿವಮೊಗ್ಗ ನಾಗ ಕೊರಂಗು-ಸುನೀಲರ ಹೆಸರು ಕೇಳಿಬಂದರೆ ಮತ್ತೊಂದು ಕೊನೆಯಲ್ಲಿ ಗೋಪಾಲಯ್ಯ-ಜೇಕೆ ಹೆಸರಿದೆ. ಹಾಗೇ ಜೆಡಿಎಸ್-ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಮಚ್ಚನ ಕೊಲೆಯ ನಂತರ ಜೇಕೆ ರಾಜಕೀಯ ತೊರೆದು ಮತ್ತೆ ಫೀಲ್ಡಿಗಿಳಿದ ಬಗ್ಗೆಯೂ ವದಂತಿಗಳಿವೆ.

ಇಂಥ ಊಹಾಪೋಹಗಳಿಗೆಲ್ಲ ಸ್ವತಃ ಜೇಕೆಯೇ ಉತ್ತರ ಕೊಡಬೇಕಾಗಿತ್ತಾದರೂ ಮಚ್ಚನ ಹತ್ಯೆಯ ನಂತರ ಆತ ಯಾರ ಕಣ್ಣಿಗೂ ಬಿದ್ದಿಲ್ಲ ಮತ್ತು ಯಾವುದೇ ಪ್ರತಿಕ್ರಿಯೆಗೂ ಆತ ಸಿಗುತ್ತಿಲ್ಲ. ಪತ್ರಿಕೆ ಹೀಗಿದ್ದೂ ಆತನ ಬಾಯಿಬಿಡಿಸಲು ಈ ಮೂಲಕ ಪ್ರಯತ್ನಿಸಿದೆ. ಅದನ್ನು ಆತನ ಬಾಯಿಂದಲೇ ಕೇಳಬೇಕು.



ನೋಡಿ ತಿಮ್ಮೇನಹಳ್ಳಿ ಸೂರಿಯನ್ನಾಗಲೀ, ಗೋವಿಂದನನ್ನಾಗಲಿ ನಾನು ಯಾವತ್ತಿಗೂ ಹತ್ತಿರಕ್ಕೆ ಬಿಟ್ಟುಕೊಂಡವನಲ್ಲ. ತಮ್ಮಯ್ಯನ್ನ ತೆಗೀತೀವಿ ಅಂಥ ಅವರೇ ಬಂದು ಹೇಳಿಕೊಂಡಿದ್ದರು. ಬೇಡ್ರಪ್ಪಾ ನೀವೆಲ್ಲ ಒಂದೇ ಸಂಬಂಧಿಕರು. ಅಡ್ಜಸ್ಟ್ ಮಾಡ್ಕೊಂಡ್ ಹೋಗಿ ಅಂದಿದ್ದೆ. ತಮ್ಮಯ್ಯ ಕೂಡ ನನ್ನನ್ನು ಕಂಡರೆ ಗಾಡಿ ತಿರುಗಿಸಿಕೊಂಡು ಬಂದು ನಮಸ್ಕಾರ ಗುರು ಅಂತಿದ್ದ. ರಾಜಿ ಮಾಡ್ಕೊಳ್ಳೀ ಅಂತ ಅವನಿಗೂ ಬುದ್ಧಿ ಹೇಳಿದ್ದೆ. ಆದರೆ ಅಷ್ಟರಲ್ಲೇ ತಮ್ಮಯ್ಯನ ಹುಡುಗರು ಗೋವಿಂದನ ಕಡೆಯ ಅದ್ಯಾರೋ ಅರುಣ ಅನ್ನೋನ್ನ ಕೊಂದು ಬಿಟ್ರು.

ಹಾಗೂ ರಾಜಿಗೆ ಒತ್ತಾಯಿಸಿದರೆ ಗೋವಿಂದ ಸೂರಿ ಸೇರ್ಕೊಂಡು ಏನ್ ಗುರು ನಿನ್ನ ಮಾತಿಗೆ ಬೆಲೆ ಕೊಟ್ಟು ನಾವು ಕೊಲೆಯಾಗಬೇಕಾ? ಅಂತ ರೇಗಿಬಿಟ್ರು. ಹಾಳಾಗ್ ಹೋಗ್ರಪ್ಪಾ ಎಂದೆ. ಆದರೆ ಗ್ರಾಚಾರ ನೋಡಿ, ತಮ್ಮಯ್ಯನ ಕೊಲೆಯಾದಾಗ ನಾನು ಜೈಲಲ್ಲಿದ್ರೂ ಅದು ನನ್ನ ತಲೆಗೇ ಬಂತು.

ಇನ್ನು ಮಚ್ಚನ ವಿಷಯಕ್ಕೆ ಬರೋದಾದ್ರೆ ಅವನನ್ನು ನಾನು ಒಮ್ಮೆಯೂ ನೋಡೇ ಇಲ್ಲ. ಮಾಗಡಿ ಎಮ್ಮೆಲ್ಲೇ ಬಾಲಕೃಷ್ಣ ನನ್ನ ವಿರುದ್ಧ ಆತನನ್ನು ಮಾಗಡಿಗೆ ಕರೆತಂದು ನನ್ನ ಬಗ್ಗೆ ಒಳ್ಳೇದು ಬರೀತಿದ್ದ ಪ್ರಜಾವಾಣಿ ವರದಿಗಾರನ ಮೇಲೆ ಛೂ ಬಿಟ್ಟರು. ನನ್ನ ಮನೆಗೆ ಬೆಂಕಿ ಹಚ್ಚಿಸಿದ್ರು. ನನ್ನ ಹದಿನೈದು ಕಾರು ಸುಟ್ಟರು. ಹಾಗಿದ್ದೂ ಇನ್ನೂರು ಮುನ್ನೂರು ಹುಡುಗರ ಜೊತೆಗಿರುತ್ತಿದ್ದ ಆತನ ಎದಿರು ನಾವು ಮೂರೋ ನಾಲ್ಕೋ ಕಾರುಗಳಲ್ಲಿ ಹೋಗುತ್ತಿದ್ದೆವು. ಹಾಗೇನಾದ್ರೂ ನನ್ನ ವಿರುದ್ಧ ಆತನಿಗೆ ಜಿದ್ದಿದ್ದರೆ ಆಗ ಆತನ ಗ್ಯಾಂಗ್ ನಮ್ಮನ್ನು ಬಿಡುತ್ತಿತ್ತಾ? ಮಚ್ಚನಿಗೂ ಗೋಪಾಲಯ್ಯನಿಗೂ ಜಿದ್ದಿತ್ತು, ಅವರವರು ಹೊಡೆದಾಡಿಕೊಂಡ್ರೆ ಅದಕ್ಕೆ ನಾನು ಹೊಣೆನಾ?

ಏನು ಗ್ರಾಚಾರಾನೋ ಗೊತ್ತಿಲ್ಲ, ಮಚ್ಚನ ಕೊಲೆಗೆ ನಾನು ಹುಡುಗರನ್ನು ಬಿಟ್ಟು ಗೋಪಾಲಯ್ಯನ್ನ ಬೆಂಬಲಿಸಿದೆ ಅನ್ನೋ ಸಣ್ಣ ಗುಮಾನಿ ಕೊರಂಗು ತಲೆ ಹೊಕ್ಕಿರಬೇಕು. ಯಾರು ಆತನ ತಲೆ ಕೆಡಿಸಿದರೋ ಗೊತ್ತಿಲ್ಲ, ಆದರೆ ಹಾಗೇ ಆತ ಭಾವಿಸಿಕೊಳ್ಳುವುದಕ್ಕೂ ಮುನ್ನ ಸತ್ಯಾಸತ್ಯಯನ್ನು ಪರಿಶೀಲಿಸಬೇಕಿತ್ತು. ಮಚ್ಚನ ಕೊಲೆಯ ನಂತರ ಜಾನಿಯನ್ನು ಕರೆಸಿ ನಾನೇ ಹೇಳಿದ್ದೆ. ಗೋಪಾಲಯ್ಯನ ಕಡೆಯವರಿಗೂ ಮಚ್ಚನ ಕಡೆಯವರಿಗೂ ರಾಜಿ ಮಾಡಿಸಲು ಯತ್ನಿಸಿದ್ದೆ. ಆದರೆ ಯಾರು ಆತನನ್ನು ಹಿಂದಕ್ಕೆ ಎಳೆದರೋ ಗೊತ್ತಿಲ್ಲ, ಕ್ರಮೇಣ ಜಾನಿ ಸಂಪರ್ಕಿಸುವುದನ್ನೇ ಬಿಟ್ಟುಬಿಟ್ಟ. ನನ್ನ ಫೋನ್ ಕರೆಗಳನ್ನು ಕಟ್ ಮಾಡುತ್ತಿದ್ದ.



ಇದು ಸತ್ಯ. ಕೊರಂಗು ಮತ್ತು ಮುಲಾಮನ ಮಧ್ಯೆ ಯಾವ ಜಿದ್ದಿದೆಯೋ ನನಗೊತ್ತಿಲ್ಲ. ಸೂರಿ ಯಾವುದೋ ಕಾಲಕ್ಕೆ ನಮ್ಮ ಹುಡುಗ ನಾಯ್ಡುಗೆ ಪರಿಚಯವಿದ್ದಿರಬಹುದು. ಆದರೆ ಊರು ಕೊಳ್ಳೆ ಹೊಡಿ ಅಂತ ಆತನಿಗೆ ನಾವು ಹೇಳಿಕೊಟ್ಟಿರಲಿಲ್ಲ. ಸದ್ಯ ಸೂರಿ ಕೊಲೆಗೆ ಪ್ರತೀಕಾರ ಕೈಗೊಳ್ಳೋ ಪರಿಸ್ಥಿತಿಯಲ್ಲಿ ನಾನಂತೂ ಇಲ್ಲವೇ ಇಲ್ಲ. ನನ್ನ ಗುರಿಯೇನಿದ್ದರೂ ಮಾಗಡಿ. ಅಲ್ಲಿನ ಜನಕ್ಕೆ ಸೇವೆ ಮಾಡಿ ಮುಂದೊಮ್ಮೆ ವಿಧಾನಸಭೆಯಲ್ಲಿ ಜನರ ಪರ ಹೋರಾಟ ಮಾಡೋದು ನನ್ನ ಸದ್ಯದ ಗುರಿ. ಕೊರಂಗು ಮೇಲೆ ಏನು ದಾಳಿ ನಡೀತೋ ಅದರಲ್ಲಿ ಯಾರ ಪಾತ್ರವಿತ್ತೋ ಎಲ್ಲವೂ ಪೊಲೀಸರಿಗೆ ಗೊತ್ತಿದೆ. ಪೊಲೀಸರು ಪ್ರತಿಯೊಬ್ಬರ ಫೋನನ್ನು ಟ್ಯಾಪ್ ಮಾಡ್ತಿದ್ದಾರೆ.

ಹಾಗೊಮ್ಮೆ ನಾನೇ ಮಾಡಿಸಿದ್ರೆ, ಹಾಗಂಥ ಕೊರಂಗುಗಾಗಲಿ ಆತನ ಜೊತೆಗಿದ್ದವರಿಗಾಗಲಿ ನನ್ನ ಮೇಲೆ ಅನುಮಾನವಿದ್ದಿದ್ರೆ, ನನ್ನ ಮೇಲೇನೇ ದೂರು ಕೊಡುತ್ತಿದ್ರು. ಹಾಗೊಮ್ಮೆ ನಾನೇನಾದ್ರೂ ಅಪರಾಧದಲ್ಲಿ ಭಾಗಿಯಾಗಿದ್ರೆ ಈ ರೀತಿ ಓಪನ್ ಆಗಿ ತಿರುಗೋಕ್ಕಾಗ್ತಿತ್ತಾ? ನನಗೂ ಕೊರಂಗೂಗು ಯಾವ ವಿಷಯಕ್ಕೆ ಅಂತ ಜಿದ್ದಿರಲು ಸಾಧ್ಯ? ನಾನೇನು ಇಸ್ಪೀಟ್ ಕ್ಲಬ್ ನಡಿಸ್ತಿದ್ದೀನಾ? ಅಥವಾ ಕೊರಂಗು ಕಡೆಯವರು ಅಲ್ಲಿಗೆ ರೋಲ್‌ಕಾಲ್‌ಗೆ ಬಂದಿದ್ರಾ? ಇಲ್ವಲ್ಲ.....!


ರಾಜಕೀಯವಾಗಿ ನನ್ನನ್ನು ಮುಗಿಸಲು ಇಡೀ ವ್ಯವಸ್ಥೆ ಕಾಯುತ್ತಿರುವಾಗ ನಾನೇಕೆ ಮತ್ತೆ ಪಾಪಕ್ಕೆ ಕೈಹಾಕಲಿ? ನನ್ನ ಗುರಿ ಒಂದೇ. ಮಾಗಡಿಯನ್ನು ಕೆಂಪೇಗೌಡರ ನಾಡನ್ನಾಗಿ ಮಾಡೋದು. ಸಾಯಿಸೋ ಕೆಲಸ ನನಗ್ಯಾಕೆ ಬೇಕು?

ಇದು ಜೇಕೆ ಉವಾಚ.

ಕಠಿಣ ಕೆಲಸ ಮೊದಲು ಮಾಡಿ. ಸರಳ ಕೆಲಸಗಳು ತಮ್ಮಿಂದ ತಾವೇ ಆಗುತ್ತವೆ-ಡೇಲ್ ಕಾರ್ನೆಗಿ



ಬಿಜೆಪಿ ಅಧ್ಯಕ್ಷಗಾದಿಗೆ ಬೀದಿ ಜಗಳ




ಬಿಜೆಪಿಯಲ್ಲಿ ಜಿಲ್ಲೆ ಹಾಗೂ ರಾಜ್ಯ ಅಧ್ಯಕ್ಷಗಿರಿಯ ದೊಡ್ಡ ಗಲಾಟೆ ಶುರುವಾಗಿದೆ. ಇದನ್ನು ಬೀದಿ ಜಗಳ ಎನ್ನಬೇಕೋ? ಗ್ಯಾಂಗ್‌ವಾರ್ ಎನ್ನಬೇಕೋ, ಅಥವಾ ಯಡ್ಡಿ ಮತ್ತು ಅನಂತಕುಮಾರ್ ನಡುವಿನ ಶತಶತಮಾನಗಳ ಹಳೆಯ ಕಾಳಗ ಎನ್ನಬೇಕೋ ಗೊತ್ತಿಲ್ಲ. ಆದರೆ ಬಿಜೆಪಿಯಲ್ಲಿ ಈಗ ಮನಸ್ತಾಪದ ಕಾವು ದಿನದಿಂದ ದಿನಕ್ಕೆ ಏರುತ್ತಿದ್ದು ಇದು ಯಾವುದೇ ಹಂತದಲ್ಲಿ ಸ್ಫೋಟಗೊಳ್ಳುವ ಸಾಧ್ಯತೆ ಇದೆ.

ಆದರೆ ಬಿಜೆಪಿಯ ಒಳಜಗಳದ ಬಗ್ಗೆ ನಾವ್ಯಾಕೆ ತಲೆ ಕೆಡಿಸಿಕೊಳ್ಳಬೇಕು ಎಂದು ಜೆಡಿಎಸ್‌ನವರು ಈ ಬಾರಿ ಸುಮ್ಮನೆ ಕೂರುವ ಹಾಗಿಲ್ಲ. ಯಾಕೆಂದರೆ ಬಿಜೆಪಿಯಲ್ಲಿ ಎದ್ದಿರುವ ಅತೃಪ್ತಿಯ ಹೊಗೆ ಸಮ್ಮಿಶ್ರ ಸರ್ಕಾರವನ್ನೇ ಮುಗಿಸುವ ಸಾಧ್ಯತೆ ಇದೆ. ಹೀಗಾಗಿ ದೇವೇಗೌಡರು ಬಿಜೆಪಿಯ ಒಳಜಗಳವನ್ನು ಅತ್ಯಂತ ಸೂಕ್ಷ್ಮವಾಗಿ ಪರಿಶೀಲಿಸುವುದು ಮಾತ್ರವಲ್ಲ ತನ್ನ ಸಹಾಯಹಸ್ತವನ್ನು ಯಡಿಯೂರಪ್ಪನವರಿಗೆ ಚಾಚಿದ್ದಾರೆ.

ಬಿಜೆಪಿಯ ಈ ಗ್ಯಾಂಗ್‌ವಾರ್‌ಗೆ ಆ ಬಾರಿ ಹೊಸ ಪುಟ್ಟದೊಂದು ನೆಪ ಸಿಕ್ಕಿದೆ. ಅದೇನೆಂದರೆ ತಾತ್ಕಾಲಿಕವಾಗಿ ಬಿಜೆಪಿಯ ಅಧ್ಯಕ್ಷ ಸ್ಥಾನಕ್ಕೆ ನೇಮಕವಾಗಿದ್ದ ಸದಾನಂದಗೌಡರ ಟರ್ಮ್ ಮುಗಿಯುತ್ತಾ ಬಂದಿದೆ. ಸದಾನಂದಗೌಡರನ್ನೇ ಅಧ್ಯಕ್ಷರಾಗಿ ಮುಂದುವರಿಸಬೇಕು ಎಂದು ಯಡಿಯೂರಪ್ಪ ಬಣ ಹೈಕಮಾಂಡ್ ಬಳಿ ಕಾಲೂರಿ ಮನವಿ ಸಲ್ಲಿಸಿದೆ. ಹೀಗೆ ಮನವಿ ಸಲ್ಲಿಸಬೇಕೆಂದು ಯಡಿಯೂರಪ್ಪನವರಿಗೆ ವಿಪ್ ಕೊಟ್ಟಿದ್ದು ಯಾರು ಗೊತ್ತೇ? ಜೆಡಿಎಸ್‌ನ ಸೂಪರ್ ಹೈ ಕಮಾಂಡ್ ಆಗಿರುವ ದೇವೇಗೌಡರು. ಸದಾನಂದ ಗೌಡರಂಥ ಆರಕ್ಕೇರದ ಮೂರಕ್ಕಿಳಿಯದ ನಾಯಕ ಇದ್ದರೆ ಸಮ್ಮಿಶ್ರ ಸರ್ಕಾರಕ್ಕೆ ಯಾವುದೇ ತೊಂದರೆ ಇಲ್ಲ ಎಂಬುದು ದೇವೇಗೌಡರ ಮತ್ತು ಯಡಿಯೂರಪ್ಪನವರ ಲೆಕ್ಕಾಚಾರ.

ಆದರೆ ಸದಾನಂದಗೌಡರನ್ನು ಅಧ್ಯಕ್ಷರನ್ನಾಗಿ ಮುಂದುವರಿಸಿದ್ದೇ ಆದಲ್ಲಿ ಬಿಜೆಪಿ ರಾಜ್ಯದಲ್ಲಿ ಸರ್ವನಾಶವಾಗುತ್ತದೆ ಎಂದು ಅನಂತಕುಮಾರ್ ದೆಹಲಿಯಲ್ಲಿ ನಗಾರಿ ಬಾರಿಸಿದ್ದಾರೆ. ಹೀಗಾಗಿ ಗೌಡರನ್ನು ಬದಲಾಯಿಸಲೇಬೇಕು; ನಮ್ಮ ಗೌಡರನ್ನು ಜೆಡಿಎಸ್ ಪಕ್ಷದ ಗೌಡರು ರಿಮೋಟ್‌ಕಂಟ್ರೋಲ್‌ನಲ್ಲಿ ನಿಯಂತ್ರಿಸುತ್ತಿದ್ದಾರೆ ಎಂಬುದು ಅನಂತ್ ನೀಡಿರುವ ವರದಿಯ ಸಾರಾಂಶ.

'ಸದಾನಂದಗೌಡರು ರಾಜ್ಯಮಟ್ಟದ ನಾಯಕ ಅಲ್ಲವೇ ಅಲ್ಲ, ಇವರ ನಾಯಕತ್ವದಲ್ಲಿ ಪಕ್ಷದ ಸಂಘಟನೆ ಸಾಧ್ಯವಿಲ್ಲ' ಎಂಬುದು ಅನಂತ್ ಬಣದ ವಾದ. ಇದಕ್ಕಿಂತ ಮುಖ್ಯವಾಗಿ ಅನಂತ್ ಬಣ ಗೌಡರ ಮೇಲೆ ಮಹತ್ತರವಾದ ಆರೋಪ ಮಾಡುತ್ತಿದೆ. ಅದೇನೆಂದರೆ ಸರ್ಕಾರಿ ಸಂಸ್ಥೆಗಳಿಗೆ ನಾಮಕರಣ ಮಾಡುವ ವಿಷಯದಲ್ಲಿ ದತ್ತಮಾಲೆ ಆಚರಣೆ, ರಾಜ್ಯೋತ್ಸವ ಪ್ರಶಸ್ತಿ ಮತ್ತು ಮಂಗಳೂರಿನ ಕೋಮು ಗಲಭೆಯನ್ನು ಸಿಓಡಿಗೆ ಒಪ್ಪಿಸುವ ಸಂದರ್ಭದಲ್ಲೆಲ್ಲಾ ಕುಮಾರಸ್ವಾಮಿ ಬಿಜೆಪಿಯನ್ನು ನಿರ್ಲಕ್ಷಿಸಿದ್ದಾರೆ, ಅವಮಾನಿಸಿದ್ದಾರೆ. ಆದರೆ ಸದಾನಂದಗೌಡರಾಗಲಿ, ಯಡಿಯೂರಪ್ಪನವರಾಗಲಿ ಇದನ್ನು ಪ್ರಬಲವಾಗಿ ವಿರೋಧಿಸದೆ ನಾಮ್‌ಕೆ ವಾಸ್ತೆ ಪ್ರತಿಭಟಿಸಿದ್ದಾರೆ. ಹೀಗಾಗಿ ಯಡ್ಡಿ-ಗೌಡ ಕಾಂಬಿನೇಷನ್‌ನ ಬಿಜೆಪಿ ಕುಮಾರಸ್ವಾಮಿಯ ದಾಸ್ಯದಲ್ಲಿ ಮುಳುಗಿ ಹೋಗುವುದು ಗ್ಯಾರಂಟಿ ಎಂದು ಅನಂತ್ ಡೆಲ್ಲಿಯಲ್ಲಿ ತಮ್ಮ ವಾದ ಮಂಡಿಸಿದ್ದಾರೆ.



ಆದರೆ ಇಂತಹ ಕ್ಲಿಷ್ಟ ಪರಿಸ್ಥಿತಿಯಲ್ಲಿ ಅಧ್ಯಕ್ಷ ಪದವಿಯನ್ನು ಅಲಂಕರಿಸುವ ಆಸೆ ಅನಂತಕುಮಾರ್‌ಗೆ ಇಲ್ಲವೇ ಇಲ್ಲ. ಅದರ ಬದಲಿಗೆ ತನ್ನ ಶಿಷ್ಯರನ್ನು ಅಧ್ಯಕ್ಷ ಗಾದಿಗೇರಿಸಿ ಆ ಮೂಲಕ ಯಡಿಯೂರಪ್ಪ ಮತ್ತು ಕುಮಾರಸ್ವಾಮಿಗೆ ಕಿರಿಕಿರಿಯುಂಟುಮಾಡುವುದು ಅನಂತ್ ತಂತ್ರ. ಆದರೆ ಈಗ ಅಧ್ಯಕ್ಷರಾಗಿರುವ ರಾಜ್‌ನಾಥ್‌ಸಿಂಗ್‌ಗೆ ಅನಂತ್ ಕುಮಾರ್ ಬಗ್ಗೆ ಅಂತಹ ಒಳ್ಳೆಯ ಅಭಿಪ್ರಾಯ ಇಲ್ಲದಿರುವುದರಿಂದ ಈ ಬಾರಿ ಅನಂತ್ ಬೇಳೆ ಬೇಯುವ ಸಾಧ್ಯತೆ ಕಡಿಮೆ. ಅಷ್ಟೇ ಅಲ್ಲ, ಈಗ ಅನಂತ್ ಕುತಂತ್ರ ದೆಹಲಿ ನಾಯಕರಿಗೂ ತಿಳಿದಿರುವುದರಿಂದ ಇವರ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸ್ಥಾನಕ್ಕೂ ಕುತ್ತು ಬರುವ ಸಾಧ್ಯತೆಯಿದೆಯಂತೆ. ಅದರ ವಾಸನೆ ತಿಳಿದಿದ್ದರಿಂದಲೇ ದೆಹಲಿಯಲ್ಲಿ ಸ್ಥಾನ ಕಳೆದುಕೊಂಡರೂ ಪರವಾಗಿಲ್ಲ ರಾಜ್ಯದಲ್ಲಿ ಅಸ್ತಿತ್ವದಲ್ಲಿರಬೇಕು ಎಂಬ ಕಾರಣಕ್ಕಾಗಿ ಅನಂತ್ ಈ ಬಾರಿ ದೊಡ್ಡ ಪ್ರಮಾಣದಲ್ಲೇ ಬಂಡಾಯದ ಬಾವುಟವನ್ನು ಹಾರಿಸಿದ್ದಾರೆ.

ಏನೇ ಆದರೂ ಅನಂತ್‌ಗೆ ತಾನೇ ಅಧ್ಯಕ್ಷ ಪದವಿಯಲ್ಲಿ ಕುಳಿತುಕೊಳ್ಳುವ ಬದಲು ತನ್ನ ಶಿಷ್ಯಂದಿರಾದ ಕಾಗಿನೆಲೆ ವಿಶ್ವೇಶ್ವರ ಭಟ್, ಅರವಿಂದ ಲಿಂಬಾವಳಿ ಅಥವಾ ಆರ್. ಅಶೋಕ್ ಅವರನ್ನು ಪ್ರತಿಷ್ಠಾಪಿಸಬೇಕೆಂಬ ಆಸೆ. ಇದಕ್ಕೂ ಒಂದು ಕಾರಣವಿದೆ. ಮುಂದಿನ ಚುನಾವಣೆಯಲ್ಲಿ ಈಗಿರುವ 79 ಸ್ಥಾನ ಖಂಡಿತವಾಗಿಯೂ ಬಿಜೆಪಿಗೆ ಮತ್ತೆ ಸಿಗುವುದಿಲ್ಲ. ಹೀಗಾಗಿ ಅಧ್ಯಕ್ಷ ಸ್ಥಾನದಲ್ಲಿದ್ದು ಚುನಾವಣೆಗೆ ಹೋದಾಗ ಈಗಿರುವ 79ಕ್ಕಿಂತ ಕಡಿಮೆ ಸ್ಥಾನ ಗಳಿಸಿದರೆ ತನ್ನ ಇಮೇಜ್ ಕಡಿಮೆಯಾಗುತ್ತದೆ ಎಂಬುದು ಅನಂತ್ ಲೆಕ್ಕಾಚಾರ. ಕಳೆದ ಬಾರಿ ವಾಜಪೇಯಿಯವರ 'ವರ್ಚಸ್ಸು' ಮತ್ತು ರಾಮಕೃಷ್ಣ ಹೆಗಡೆಯವರ ಬೆಂಬಲಿಗರು ಪಕ್ಷಕ್ಕೆ ಸೇರಿದ್ದರಿಂದ ಅಷ್ಟೊಂದು ಸ್ಥಾನ ಗಳಿಸಲು ಸಾಧ್ಯವಾಯಿತು. ಈಗ ಈ ಬಾರಿ ಆಡಳಿತ ಪಕ್ಷದ ಪಾಲುದಾರರಾಗಿರುವುದರಿಂದ ಜನತೆ ಬಿಜೆಪಿಯನ್ನು ತಿರಸ್ಕರಿಸುತ್ತಾರೆ ಎಂಬ ಸತ್ಯ ಅನಂತ್‌ಗೆ ಗೊತ್ತಿದೆ. ಹೀಗಾಗಿ ತಾನೇ ಅಧ್ಯಕ್ಷ ಗಾದಿಯಲ್ಲಿ ಕುಳಿತುಕೊಳ್ಳುವ ಬದಲು ತನ್ನ ಶಿಷ್ಯನೊಬ್ಬನನ್ನು ಅಲ್ಲಿ ಪ್ರತಿಷ್ಠಾಪಿಸಲು ಎಲ್ಲ ರೀತಿಯ ಬಲೆಯನ್ನು ಹೆಣೆದಿದ್ದಾರೆ.

ಇದರ ಮೊದಲ ಹಂತವಾಗಿ ಚುನಾವಣಾಧಿಕಾರಿಯಾಗಿ ತನ್ನ ಬೆಂಬಲಿಗ ರಘುನಾಥ್ ಮಲ್ಕಾಪುರೆ ಅವರನ್ನು ಆಯ್ಕೆ ಮಾಡಿದ್ದಾರೆ. ವಾಸ್ತವವಾಗಿ ಚುನಾವಣಾಧಿಕಾರಿಯಾಗಿ ಮೈಸೂರಿನ ತೋಂಟದಾರ್ಯ ಅಥವಾ ಧಾರವಾಡದ ನಿಂಬಣ್ಣವರ್ ಅವರನ್ನು ನೇಮಿಸಬಹುದೆಂದು ಅಧ್ಯಕ್ಷ ಸದಾನಂದಗೌಡ ಸೂಚಿಸಿದ್ದರು. ಹೀಗೆ ರಾಜ್ಯದ ಅಧ್ಯಕ್ಷರು ಸೂಚಿಸಿದ ವ್ಯಕ್ತಿಯನ್ನೇ ಚುನಾವಣಾಧಿಕಾರಿಯನ್ನಾಗಿ ನೇಮಿಸುವುದು ಒಂದು ನಿಯಮ. ಆದರೆ ಇದೇ ಮೊದಲ ಬಾರಿ ಈ ನಿಯಮವನ್ನು ಉಲ್ಲಂಘಿಸಿ ಅನಂತ್ ಶಿಷ್ಯ ಚುನಾವಣಾಧಿಕಾರಿಯಾಗಿದ್ದಾರೆ. ಹೀಗಾಗಿ ಈ ಬಾರಿಯ ಅಧ್ಯಕ್ಷರ ಆಯ್ಕೆ ಸರ್ವಾನುಮತದಿಂದ ಆಗದಿದ್ದಲ್ಲಿ ಅನಂತ್ ಗ್ಯಾಂಗ್ ಚುನಾವಣಾಧಿಕಾರಿಯ ಸಹಾಯದಿಂದ ಮತಗಳನ್ನು ರಿಗ್ ಮಾಡುವುದು ಗ್ಯಾರಂಟಿ.

ಅನಂತ್-ಯಡಿಯೂರಪ್ಪ ನಡುವಿನ ಈ ಸಮರ ಭಾರತೀಯ ಜನತಾಪಕ್ಷ ವಲಯದಲ್ಲಿ ಕುತೂಹಲ ಮತ್ತು ತಳಮಳವನ್ನು ಸೃಷ್ಟಿಸಿದೆ. ಅದಕ್ಕಿಂತಲೂ ಹೆಚ್ಚಿನ ತಳಮಳ ದೇವೇಗೌಡ ಮತ್ತು ಕುಮಾರಸ್ವಾಮಿಗೆ ಆಗಿದೆ.

ಸಮ್ಮಿಶ್ರ ಸರ್ಕಾರದ ಪಾಲುದಾರ ಪಕ್ಷದ ಅಧ್ಯಕ್ಷ ಸ್ಥಾನವೆಂದರೆ ಅದೊಂದು ಕಬ್ಬಿಣದ ಕಡಲೆ ಇದ್ದಂತೆ. ಆ ಸ್ಥಾನದಲ್ಲಿರುವ ವ್ಯಕ್ತಿ ಸರ್ಕಾರದ ದಾಸನಾಗಬಾರದು, ಹಾಗೆಯೇ ಸರ್ಕಾರಕ್ಕೆ ಕಿರಿಕಿರಿಯನ್ನೂ ಮಾಡಬಾರದು. ಅಂತಹ ಸೂಕ್ಷ್ಮ ಮನಸ್ಸಿನ ವ್ಯಕ್ತಿ ಇದ್ದರೆ ಮಾತ್ರ ಸರ್ಕಾರ ಉಳಿಯಲು ಸಾಧ್ಯ. ಹಿಂದೊಮ್ಮೆ ಬೆಂಕಿ ಉಗುಳುವ ಎ.ಕೆ. ಸುಬ್ಬಯ್ಯ ಇದೇ ತರಹ ವಾಗ್ದಾಳಿ ಮಾಡಿ ರಾಮಕೃಷ್ಣ ಹೆಗಡೆ ಸರ್ಕಾರವನ್ನು ಇಕ್ಕಟ್ಟಿಗೆ ಸಿಕ್ಕಿಸಿದ್ದರು. ಕಾಂಗ್ರೆಸ್ ಮತ್ತು ಜೆಡಿಎಸ್ ಸರ್ಕಾರ ರಚಿಸಿದಾಗ ಜನಾರ್ದನ ಪೂಜಾರಿ ಈ ತರಹ ಆರ್ಭಟದಿಂದ ಸರ್ಕಾರವನ್ನು ಪೇಚಿಗೆ ತಂದಿದ್ದರು. ಹೀಗಾಗಿ ಇಂತಹ ಕ್ಲಿಷ್ಟ ಪರಿಸ್ಥಿತಿಯನ್ನು ಸದಾನಂದ ಗೌಡ ಸಮರ್ಪಕವಾಗಿ ನಿರ್ವಹಿಸುತ್ತಿದ್ದು ಬಹುತೇಕ ಎಲ್ಲ ಸದಸ್ಯರೂ ಅವರೇ ಮುಂದುವರಿಯಲಿ ಎಂಬ ಆಶಯ ವ್ಯಕ್ತಪಡಿಸಿದ್ದಾರೆ. ಹೀಗಾಗಿ ಜನಾರ್ದನ ರೆಡ್ಡಿ ಮೂಲಕ ಬಾಂಬ್ ಹಾಕಿಸಿ ಸಮ್ಮಿಶ್ರ ಸರ್ಕಾರವನ್ನು ಅಲುಗಾಡಿಸಲು ಪ್ರಯತ್ನಿಸಿದ ಅನಂತಕುಮಾರ್ ಈ ಬಾರಿ ಕೂಡ ವಿಫಲರಾಗುವಂತೆ ಕಾಣಿಸುತ್ತಿದೆ. ಅನಂತಕುಮಾರ್ ಅವರ ಈ 'ಎರಡನೇ ಬಾಂಬ್' ಠುಸ್ಸ್ ಆದಲ್ಲಿ ಭವಿಷ್ಯದಲ್ಲಿ ಕುಮಾರಸ್ವಾಮಿಯ ದಾರಿ ಸುಲಭವಾದಂತಾಗುತ್ತದೆ.

ಆದರೆ ಬಿಜೆಪಿ ನಾಯಕರುಗಳಿಗೆ ಹಾಗೂ ಕಾರ್ಯಕರ್ತರುಗಳಿಗೆ ಮಾತ್ರ ಸದಾನಂದ ಗೌಡರ ನಿರುತ್ಸಾಹದಾಯಕ ನಾಯಕತ್ವ ಈಗಾಗಲೇ ಹತಾಶೆ ಮೂಡಿಸಿದೆ.

-ಸದಾಶಿವ ಶೆಣೈ

◀

ಪ್ರತಿನಿತ್ಯ ಆ ಕೊಳಾಯಿಗೇ ಬರಬೇಕು. ಪೆದ್ದಗುಂಡ ಒಂದೇ ತಿಂಗಳಲ್ಲಿ ಆಕೆಯನ್ನು ಪಟಾಯಿಸಿಬಿಟ್ಟ. ಯಾರಿಗೂ ಗೊತ್ತಾಗದ ಹಾಗೆ ಧರ್ಮಸ್ಥಳಕ್ಕೆ ಕರೆದೊಯ್ದು ಮದುವೆಯಾದ. ಗೊಲ್ಲರಹಟ್ಟಿಯಲ್ಲಿ ಮನೆ ಮಾಡಿ ಆಕೆಯ ಜೊತೆ ಸೀಕ್ರೆಟ್ಟಾಗಿಯೇ ಸಂಸಾರ ಮಾಡುತ್ತಿದ್ದ. ಇದಾಗಿ ಕೆಲದಿನಕ್ಕೇ ಖಾಯಿಲೆ ಬಿದ್ದ ಆಕೆಯ ಅಕ್ಕ ತೀರಿಕೊಂಡಳು. ಬೆನ್ನಲ್ಲೇ ಆಕೆಯ ಮಗು ಕೂಡ ಸತ್ತು ಹೋಯಿತು.

ಇತ್ತ ಪೆದ್ದಗುಂಡ ಆಕೆಯನ್ನು ತನ್ನ ಮನೆಗೆ ಕರೆದೊಯ್ದರೆ ತಾಯಿ ಸೇರಿಸಲಿಲ್ಲ. ಇತ್ತ ಚಿಕ್ಕಮಗಳೂರಿಗೆ ಹೋದರೆ ಶ್ವೇತಾಳ ತಂದೆತಾಯಿ ಕೂಡ ಒಳಕ್ಕೆ ಬಿಟ್ಟುಕೊಂಡಿಲ್ಲ. ಒಂದಷ್ಟು ದಿನ ಗೊಲ್ಲರಹಟ್ಟಿಯಲ್ಲೇ ಮನೆ ಮಾಡಿಕೊಂಡಿದ್ದು ಕಮಲಾನಗರಕ್ಕೆ ಬಂದು ಹೋಗುತ್ತಿದ್ದ. ಮದುವೆಗೂ ಮುನ್ನ ಮತ್ತೆ ರೌಡಿಜಮ್ಮಿಗೆ ಇಳಿಯೋಲ್ಲ ಎಂದೇ ಶ್ವೇತಾಳನ್ನು ನಂಬಿಸಿದ್ದ. ಪ್ರಾರಂಭದಲ್ಲಿ ಸಿಟ್ಟಾಗಿದ್ದ ಆಕೆಯ ಅಪ್ಪ ಮತ್ತು ಕ್ರಮೇಣ ಪೆದ್ದಗುಂಡನಿಗೆಂದು ಒಂದು ಆಟೋ ಕೊಡಿಸಿಕೊಟ್ಟರು. ಮನಸ್ಸು ಮಾಡಿದ್ದರೆ ಪೆದ್ದಗುಂಡ ಅವತ್ತೇ ಗೂಂಡಾಗಿರಿಗೆ ಗುಡ್‌ಬೈ ಹೇಳಬಹುದಿತ್ತು.




ಸೂರಿ

ಬಹುಶಃ ಪೆದ್ದಗುಂಡ ಕೂಡ ರೌಡಿಸಂ ತೊರೆಯುವ ಬಗ್ಗೆ ಸೀರಿಯಸ್ಸಾಗೇ ಇದ್ದ. ಮಚ್ಚನಿಗೆ ತನ್ನ ದುಷ್ಮನ್ ಗೋಪಾಲಯ್ಯನನ್ನು ಕೊಲ್ಲುವುದಕ್ಕಿಂತ ಆತನನ್ನು ಚುನಾವಣೆಯಲ್ಲಿ ಸೋಲಿಸುವುದೇ ಗುರಿಯಾಗಿತ್ತು. ಅದಕ್ಕೆಂದು ಕಾಂಗ್ರೆಸ್ ನಾಯಕ ದೀಕ್ಷೆಯನ್ನು ಕಾಮಾಕ್ಷಿಪಾಳ್ಯಕ್ಕೆ ಕರೆದು ದೊಡ್ಡ ಸನ್ಮಾನವನ್ನೇ ಮಾಡಿದ್ದ. ಒಟ್ಟು ಕಾಮಾಕ್ಷಿಪಾಳ್ಯ ಮಚ್ಚನ ಪಾಲಾಯಿತೆಂದರೆ ಅದು ತನ್ನ ಸರ್ವನಾಶ ಎಂದೇ ಗೋಪಾಲಯ್ಯನ ಲೆಕ್ಕಾಚಾರವಾಗಿತ್ತು.

ಇದೇ ಹೊತ್ತಿಗೆ ಪಕ್ಕದ ಮಾಚೋಹಳ್ಳಿ ಗ್ರಾಮ ಪಂಚಾಯ್ತಿ ಚುನಾವಣೆ ಬಂತು. ಅದರ ಅಧ್ಯಕ್ಷನಾಗಲು ಹೊರಟಿದ್ದವನು ಕಡಬಗರೆಯ ಪಾಯ್ಸನ್ ರಾಮ. ಪ್ರಾರಂಭದಲ್ಲಿ ಮಚ್ಚನ ಶಿಷ್ಯನಾಗಿದ್ದ ಪಾಯ್ಸನ್ ರಾಮ ಯಾವತ್ತು ಪಂಚಾಯ್ತಿ ಚುನಾವಣೆಯಲ್ಲಿ ಮಚ್ಚ ಗೊಲ್ಲರಹಟ್ಟಿ ರಾಜಣ್ಣನನ್ನು ಬೆಂಬಲಿಸಿದನೋ ಸದ್ದಿಲ್ಲದೇ ಗೋಪಾಲಯ್ಯನ ಜೊತೆ ಕೈ ಜೋಡಿಸಿಬಿಟ್ಟ.

ಅಲ್ಲಿಗೆ ಮಚ್ಚನ ವಿರುದ್ಧ ಗೋಪಾಲಯ್ಯ, ಕಡಬಗರೆ ರಾಮ, ವೈನ್ಸ್ ಲೋಕಿ, ಗೂಳಿ ಬಸವ, ಮುಲಾಮ, ಭಾವೈಕ್ಯದ ಧರಣಿ, ತಿಮ್ಮೇನಹಳ್ಳಿ ಸೂರಿ ಮುಂತಾದವರ ಪಡೆಯೇ ಸಜ್ಜಾಗಿತ್ತು. ಹೇಗಿದ್ದರೂ ಕಾಮಾಕ್ಷಿಪಾಳ್ಯ ವಾರ್ಡ್ ಮಹಿಳಾ ಮೀಸಲಾಗಿಬಿಟ್ಟಿದೆ. ಅಲ್ಲಿಗೆ ತಾನಿನ್ನು ಕೌನ್ಸಿಲರ್ ಆಗುವುದು ಸಾಧ್ಯವಿಲ್ಲ. ಮುಂದೊಮ್ಮೆ ಉತ್ತರಹಳ್ಳಿ ವಿಧಾನಸಭಾ ಕ್ಷೇತ್ರ ಎರಡಾದರೆ ಈ ಪೈಕಿ ಒಂದಕ್ಕೆ ತಾನು ನಿಂತು ಎಮ್ಮೆಲ್ಲೆಯಾಗುವುದು ಗೋಪಾಲಯ್ಯನ ಹುನ್ನಾರ. ಆದರೆ ಅದಕ್ಕಾಗಲೇ ದಾಸರಹಳ್ಳಿ ನಗರಸಭೆಯ ಮಾಜಿ ಅಧ್ಯಕ್ಷ ಹನುಮಂತರಾಯಪ್ಪ ಕಣ್ಣು ಹಾಕಿದ್ದಾನೆ. ಆತನಿಗೂ ಮಚ್ಚನೇ ಬೆಂಗಾವಲು.




ಗೋಪಾಲಯ್ಯ

ಕಾಮಾಕ್ಷಿಪಾಳ್ಯ ಅಥವಾ ಉತ್ತರಹಳ್ಳಿಗಳಲ್ಲಿ ಯಾವುದೇ ಒಂದು ತನ್ನ ವಶವಾಗಬೇಕೆಂದರೂ ಮಚ್ಚ ಮುಗಿಯಲೇಬೇಕು. ಅವನನ್ನು ಮುಗಿಸಬೇಕೆಂದರೆ ಆತನ ಒಬ್ಬೊಬ್ಬನೇ ಶಿಷ್ಯರನ್ನು ಮೊದಲು ಜೈಲಿಗೆ ಹಾಕಿಸಬೇಕು. ಜೊತೆಗೆ ಮಚ್ಚ ಯಾವುದೇ ಮಾರಕ ಅಸ್ತ್ರ ಇಟ್ಟುಕೊಂಡು ತಿರುಗಾಡದಂತೆ ಮಾಡಬೇಕು. ಇದು ಗೋಪಾಲಯ್ಯನ ಕುತಂತ್ರ.

ಜೈಲು ಯಾತ್ರೆ

ಹಾಗೇ ಗೋಪಾಲಯ್ಯನಿಂದ ಬಾಗೀನ ಪಡೆದ ತಾವರೆಕೆರೆ ಪೊಲೀಸರು 2005ರ ಆಗಸ್ಟ್ ಹತ್ತರಂದು ಪೆದ್ದಗುಂಡನನ್ನು ಆತನ ಮನೆಯಿಂದ ಕರೆದೊಯ್ದು ಡಕಾಯಿತಿಗೆ ಹೊಂಚು ಹಾಕುತ್ತಿದ್ದ ಎಂದು ಕೇಸು ಹಾಕಿ ಜೈಲಿಗೆ ಹಾಕುತ್ತಾರೆ. ಆತ ಜೈಲಲ್ಲಿದ್ದಾಗಲೇ 2005ರ ನವೆಂಬರ್ 1ರಂದು ಗೋಪಾಲಯ್ಯ, ಕಡಬಗೆರೆ ರಾಮ, ಮುಲಾಮ ಸೇರಿಕೊಂಡು ಮಚ್ಚನನ್ನು ಮುಗಿಸುತ್ತಾರೆ. ಅಲ್ಲಿಗೆ ರೌಡಿಸಮ್ಮಿಗೆ ವಿದಾಯ ಹೇಳುವ ಮಚ್ಚನ ಸಮಸ್ತ ಶಿಷ್ಯರ ಕನಸು ನೀರು ಪಾಲಾಗುತ್ತದೆ.

ಬಹುಶಃ ಈ ಒಂದು ಘಟನೆಯೇ ಮುಂದೆ ಬೆಂಗಳೂರಿನ ಇಡೀ ಅಂಡರ್‌ವರ್ಲ್ಡ್ ಅನ್ನು ಇಬ್ಭಾಗ ಮಾಡಿ ಹಾಕುತ್ತದೆ. ಮಚ್ಚನ ಹತ್ಯೆಗೆ ಪ್ರತಿಕಾರವಾಗಿ ಕೋತಿರಾಮನ ಪಡೆ ಮಂಡ್ಯ ಕೃಷ್ಣನನ್ನು ಕೊಂದಾಗ ಪೆದ್ದಗುಂಡ ಇನ್ನೂ ಜೈಲಲ್ಲೇ ಇದ್ದ. ಇದಾಗಿದ್ದು ಡಿಸೆಂಬರ್ 1ಕ್ಕೆ ಆದರೆ ಪೊಲೀಸರು ಡಿಸೆಂಬರ್ ಐದರಂದು ಜೈಲಿಂದ ಹೊರಬರುತ್ತಿದ್ದಂತೆ ಮತ್ತೆ ಪೆದ್ದಗುಂಡನನ್ನು ಹಿಡಿದು ಮಂಡ್ಯ ಕೃಷ್ಣನ ಕೊಲೆ ಕೇಸಿನಲ್ಲಿ ಫಿಟ್ ಮಾಡುತ್ತಾರೆ.



ಇನ್ಸ್‌ಪೆಕ್ಟರ್ ಉಮೇಶ್

2006ರ ಜನವರಿಯ ಹೊತ್ತಿಗೆ ಆತ ಜೈಲಿಂದ ಹೊರಬರುವ ಹೊತ್ತಿಗೆ ಜೋಗಿ ಸಿನಿಮಾ ರಿಲೀಸ್ ಆಗಿತ್ತು, ಇಡೀ ಮಚ್ಚನ ಗ್ಯಾಂಗ್ ಜೈಲು ಸೇರಿತ್ತು, ಥೇಟ್ ಶಿವರಾಜ್‌ಕುಮಾರ್ ಥರ ಉದ್ದಕ್ಕೆ ಜುಟ್ಟು ಬಿಟ್ಟಕೊಂಡಿದ್ದ ಪೆದ್ದ ಗುಂಡ ಒಂದಷ್ಟು ದಿನ ಮಾಗಡಿಯಲ್ಲಿ ಮನೆ ಮಾಡಿಕೊಂಡಿದ್ದ. ಬಹುಶಃ ಮಚ್ಚನ ಹತ್ಯೆ ನಂತರವಾದರೂ ರೌಡಿಸಂ ಬಿಡುವುದು ಆತನ ಉದ್ದೇಶವಾಗಿತ್ತೇನೊ.

ಆದರೆ ಗೋಪಾಲಯ್ಯ ಮಾತ್ರ ಬೆನ್ನಬಿಡದ ಬೇತಾಳದಂತೆ ಕಾಟಕ್ಕಿಳಿದಿದ್ದ ಮಚ್ಚನ ಒಬ್ಬೊಬ್ಬರೇ ಶಿಷ್ಯರನ್ನು ವ್ಯವಸ್ಥಿತವಾಗಿ ಜೈಲುಪಾಲು ಮಾಡಿದ್ದು ಒಂದೆಡೆಯಾದರೆ ಮತ್ತೊಂದೆಡೆ ಪೆದ್ದಗುಂಡನಿಗೆಂದೇ ಗಡಿಪಾರು ಶಿಕ್ಷೆಯ ವ್ಯವಸ್ಥೆ ಮಾಡಿದ್ದ. 2006ರ ಜುಲೈ ಐದರಂದು ಕೋರ್ಟಿಗೆ ಬಂದಿದ್ದ ಆತನನ್ನು ಪೊಲೀಸರು ತಾವರೆಕೆರೆಯಿಂದ ಆಚೆ ಬಿಟ್ಟು ಬಂದಿದ್ದರು.

ಅಲ್ಲಿಗೆ ಪೆದ್ದಗುಂಡ ನಿರ್ಧರಿಸಿಬಿಟ್ಟ. ಒಂದೆಡೆ ಗೋಪಾಲಯ್ಯನ ಕಾಟ. ಮತ್ತೊಂದೆಡೆ ಪೊಲೀಸರ ಕಾಟ. ಹೇಗಿದ್ದರೂ ಸಾಯಲೇಬೇಕು. ಸಾಯುವ ಮುನ್ನ ಗೋಪಾಲಯ್ಯನನ್ನೋ ಕಡಬಗೆರೆ ರಾಮನನ್ನೋ ತೆಗೆದೇ ತೀರುತ್ತೇನೆ. ಹಾಗೆ ಹುಡುಗರ ಪಡೆ ಕಟ್ಟಿಕೊಂಡು ರೌಂಡಿಂಗ್ ಆರಂಭಿಸಿದ ಪೆದ್ದಗುಂಡನ ತಂಡಕ್ಕೆ ಅಚಾನಕ್ಕಾಗಿ ಸಿಕ್ಕವನು ತಿಮ್ಮೇನಹಳ್ಳಿ ಸೂರಿ.

ಸೂರಿ-ಟೋನಿಯನ್ನು ಒಟ್ಟೊಟ್ಟಿಗೇ ಕೊಂದವನಿಗೆ ತಾನಿನ್ನು ಬದುಕೋಲ್ಲ ಅನ್ನಿಸಿತ್ತೇನೊ. ಬಹುಶಃ ಒಬ್ಬನೇ ಸಿಕ್ಕಿದರೆ ಬದುಕಿರುತ್ತಿದ್ದನೇ ಇಲ್ಲವೋ? ಇನ್ಸ್‌ಪೆಕ್ಟರ್ ಉಮೇಶ್ ಎನ್‌ಕೌಂಟರ್‌ಗೆ ಸಜ್ಜಾಗಿಯೇ ಕಳೆದ ಎರಡು ತಿಂಗಳಿಂದ ಆತನ ಬೆನ್ನು ಹತ್ತಿದ್ದರು. ಆದರೆ ಪೆದ್ದಗುಂಡ 8 ಮಂದಿ ಹುಡುಗರ ಜೊತೆ ಸಿಕ್ಕಿಬಿದ್ದ. ಅದೇ ಕಾರಣಕ್ಕೆ ಬದುಕಿಬಿಟ್ಟ.

ಇದು ಆತನಿಗೆ ಪುನರ್‌ಜನ್ಮವಲ್ಲದೇ ಮತ್ತೇನು?

●

ಮುಂದಾಳುನ ಗುಣಮಟ್ಟವು ತನಗೆ ತಾನೇ ನಿಗದಿಗೊಳಿಸಿಕೊಳ್ಳುವ ಮಾದರಿಗಳಲ್ಲಿ ಪ್ರತಿಫಲಿತಗೊಳ್ಳುತ್ತದೆ-ರೆ ಕ್ರಾಕ್

ಸ್ತ್ರೀಸಗತಿ ಏನು ಅಂತ ನನಿಗೂ ಗೊತ್ತು ಕಣಕ್ಕ

ಬಯಲು ಸೀಮೆಯ ಕಟ್ಟೆ ಪುರಾಣ

"ಆವ್ಯಾವುದೊ ಊರಲ್ಲಿ ಸ್ತ್ರೀ ಸಗತಿ ಜನ ಸೇರಿಕಂಡು ಗಂಡುಸುರಿಗೆ ಚಚ್ಚಿ ಮಡಗಿದ್ದರಂತೆ, ನೋಡಿದ್ಯಂಗಿದೆ" ಎಂದ ಸೀರ ಭಯಮಿಶ್ರಿತ ದನಿಯಲ್ಲಿ.

"ಲೈಕ ಹಾಕು. ಇನ್ನಂತ ಯದಿಗಾತಿರವುರು?" ಎಂದ ಕಾಳಮಾವ.

"ಯಾವ್ದೊ ಊರಲ್ಲಿ ತಿಪ್ಪೆನಲ್ಲಿಲಿ ಕಣಮಾವ. ಯಾವನೋ ಪಾಟಸ್ಯೆಯಂತೋನು ದಿನಾ ಕುಡುದು ಬಂದು ಹೆಂಡತಿಗ್ವಡಿತಿದ್ನಂತೆ. ಅವತ್ತು ಆ ಹುಡುಗಿ ತಿರಿಗಿ ಅವುನಿಗೇ ವದದಳಂತೆ. ಗಂಡನಿಗೆ ವದಿತಿಯೇನೆ ಅಂತ ಗಂಡುಸರ್ಕಲ್ಲ ಆ ಹುಡುಗಿಗೆ ಬುದ್ಧಿ ಹೇಳ ಕ್ಕೋದ್ರು. ಆಗ ಸ್ತ್ರೀಸಗತಿ ಹೆಂಗಸರ್ಕಲ್ಲ ಸೇರಿಕಂಡು ಗಂಡುಸುರಿಗೆ ಇಟ್ಕಾಡಿಸಿಗಂಡು ಚಚ್ಚಿದರಂತೆ. ಈ ಗಂಡುಸ್ರು ಗಲ್ಲಿ ಬಿದ್ದು ಓಡಿದರಂತೆ" ಎಂದು ಜುಮ್ಮಿ ಬಿದ್ದು ಬಿದ್ದು ನಕ್ಕಳು.

"ಇಸಿಸಿ ನಗತಿಯಲ್ಲೆ ನೀನು?" ಎಂದ ಸೀರ.

"ಮಹಾ ಸೂರಾದಿ ಸೂರ್ರು. ಗಲ್ಲಿ ಬಿದ್ದೋಡಿದ್ರು ಅಂದ್ರೆ ನಗದೆ ಇನ್ನೇನು ಮಾಡ್ಬೋ ಮಾವ ನಾನು?" ಎಂದು ಜುಮ್ಮಿ ನೆನೆಸಿಕೊಂಡಂತೆಯೂ ನಗಾಡಿದಳು.

"ಅದೂ ಅವುರೋಡತಿರಲಿಲ್ಲ ಕಣೇ. ಈ ಗಂಡುಸ್ರೂ ಕುಡದಿದ್ರಂತೆ. ಯಾವಾಗ ಆ ಹುಡುಗಿಪರ ಹೆಂಗಸರ್ಕಲ್ಲ ಜ್ವತಿಯಾದ್ರೊ ಆಗ ಇವುರ ಕೈಯಿಗೆ ಸಿಕ್ಕಿದ್ರೆ ಗಿಬುರಿಬುಡ್ತರೆ ಅಂತ ಹೆದ್ರಿ ಕಂಡು ಯಾವುದೊ ಒಂದು ಓಡಿಬುಡತಂತೆ, ಆಗ ಉಳದೊರಿಗೂ ಹೆದ್ರಿ ಕಾಯ್ತು! ಅವುರು ಓಡಕ್ಕೆ ಸುರುಮಾಡಿದ್ರು. ಆಗ ಈ ಸ್ತ್ರೀಶಕ್ತಿ ಹೆಂಗಸರಿಗೆ ಏನೋ ಉಮೇದು ಬಂದು ಅವುರು ಓಡಿಸಿಗಂಡೋದರಂತೆ" ಎಂದು ಉಗ್ರಿ ಸಮಜಾಯಿಸಿ ನೀಡಿದ.

"ಅದೇನಾರ ಆಗ್ಲಿ, ಹೆಂಗಸುರು ಗಂಡುಸುರ ಓಡಿಸಿಗಂಡೋದ್ರು ಅನ್ನದ ಒಪ್ಪಿಗತಿಯೇನ್ನ?" ಎಂದ ಜುಮ್ಮಿ ದಿಗ್ವಿಜಯದ ದನಿಯಲ್ಲಿ ಹೇಳಿದಾಗ ಉಗ್ರಿ,

"ಒಪ್ಪಿಗಳದೆ ಇನ್ನೇನು ಮಾಡಕ್ಕಾದತೆ?" ಎಂದ.

"ಸ್ತ್ರೀಸಗತಿ ಜನ ಅಂದ್ರೆ ಅವುರ್‍ಯಾರೂ?" ಎಂದ ಕಾಳಮಾವ.

"ಅವುರು ಸೋನಿಗಾಂಧಿ ಕಡಿಯೋರು ಕಣಮಾವ. ಸಣ್ಣಪುಟ್ಟ ಚೀಟಿ ಹಾಯ್ಕಂಡು ಆ ದುಡ್ಡ ಬ್ಯಾಂಕಲ್ಲಿಡಿ. ಅದರ ಯರಡರಷ್ಟು ದುಡ್ಡ ನಾವು ಕೊಡ್ತಿವಿ ಅನ್ನದೊಂದು ಸ್ಕೀಂ ಬತ್ತು ಸರಕಾರದಿಂದ. ಸರಿ ಈ ಜಮ್ಮಿಯಂತ ಹೆಂಗುಸರ್ಕಲ್ಲ ಜ್ವತಿಯಾದ್ರು. ಈಗ ಅವುರದೆ ಒಂದು ದೊಡ್ಡ ಸೈನ್ಯ ಆಗ್ಯದೆ" ಎಂದ ಉಗ್ರಿ.


"ಏ; ತುಪ್ಪದ ಮಡದಲ್ಲಿ ಊರಲ್ಲಿ ಶರಾಪು ಮಾರಂಗಿಲ್ಲ, ಅಂಗೆ ಮಾಡ್ಯವುರೆ" ಎಂದ ಸೀರ.

"ಅದ್ವಳ್ಳಿ ಕ್ಯಲಸ ಬುಡು, ಅಂತವುನ್ಕಲ್ಲ ಮಾಡಿದ್ರೆ ಮೆಚ್ಚಲೇಬೇಕಾಯ್ತದೆ" ಎಂದ ಕಾಳಮಾವ.

"ಅಂಗೆ ನೋಡಿದ್ರೆ, ಈಚಗೆ ಯಲ್ಲಾ ಕುಟುಂಬಗಳು ಸ್ತ್ರೀಸಗತಿ ಕೈಗೆ ಸಿಕ್ಕತಾ ಅವೆ ಕಣ ಮಾವ. ನಮ್ಮೂರಲ್ಲೆ ಲೈಕ ಹಾಕಿದ್ರೆ, ಅರ್ದಕರ್ದ ಆಗ್ಲೆ ಅವುರ ಕೈಗೋಗ್ಯದೆ."

"ಹೋಗ್ಯದೆ ಅಂತ ದೂರೇಳಿದಂಗೆ ಹೇಳತಿಯಲ್ಲಾ, ಅವುರ ಕೈಗೋಗೋವತ್ತಿಗೆ ಸಂಸಾರ ಉಳದವೆ. ಇಲ್ದಿದ್ರೆ ಊರುಬುಟ್ಟು ಹೋಗವು" ಎಂದಳು ಜುಮ್ಮಿ.

"ಅದೇನೊ ನಿಜ. ಯಾವ ಸಂಸಾರ ಹೆಂಗಸ್ರು ಕೈಲದೆ ಅಂತ ಸಂಸಾರಗಳೆಯ ಮರಿಯಾದಿ ಉಳಿಸಿ ಗಂಡು ಬದುಕ್ತಾಯಿರವು" ಎಂದ ಉಗ್ರಿ.



"ನಮ್ಮನಿಯೊಳು ವಸಿ ದಿನ ಹಾರ್‍ಯಾಡಿದ್ಲು, ನಾನು ಅದಿಮಿಕ್ಯಂಡು ಕೂತುಗಳ್ಳಿ ಅಂದೆ ತ್ಯಪ್ಪಗಾದ್ಲು" ಎಂದ ಸೀರ.

"ಕೊಚ್ಚಗಳದ್ರಲ್ಲಿ ನಿನ್ನ ಬುಟ್ರೆ ಇನ್ನಾರಿದ್ದರು?" ಎಂದಳು ಜುಮ್ಮಿ.

"ಕೊಚ್ಚಗಳಕ್ಕೆ ನಾನೇನು ಬ್ಯಾರೆ ಊರಿನೋನೇನ್ಲೆ? ನೀನೆ ನೋಡ್ತಿಯಲ್ಲ, ನಮ್ಮನಿಯೋಳು ನನ್ನ ಮ್ಯಾಲೆ ಸವಾರಿ ಮಾಡಕ್ಕಾಗಿದ್ದತೆ?" ಎಂದ ಸೀರ.

"ಇಲ್ಲ ಬುಡು ನೀನ್ನೊಡಿದ್ರೆ ನಾಯಿ ಹ್ವಡಿಯೋ ಕೋಲಿದ್ದಂಗಿದ್ದಿ. ಮಣಭಾರದ ಲಕ್ಷ್ವ ಸವಾರಿ ಮಾಡಿದ್ರೆ ಉಳುದಿಯ ನೀನು?" ಎಂದು ಜುಮ್ಮಿ ನಕ್ಕಳು.

"ನಮ್ಮೂರಲ್ಲಿ ಸ್ತ್ರೀಸಗತಿ ಸಂಗ ಏಟದ್ವತೆ ಜುಮ್ಮಿ?"

"ಮೂರಿದ್ವೊ. ಅವು ಕಿತ್ತಾಡಿಕಂಡು ದೂರಾಗ್ಯವೆ. ಈಗ ತಿರಗ ಮಾಡಬೇಕು ಕಣಮಾವ."

"ಮಾಡ್ಕೆ, ಗಂಡ ಸತ್ತೋರನ್ಕಲ್ಲ ಸೇರಿಸಿಗಂಡು ಮಾಡು ಪಾಪ ಅವುಕಾರ ಒಂದಿದಾಗ್ಲಿ?"

"ಆಯ್ಯೋ ಗಂಡ ಸತ್ತೋರೇನು ವಸಿ ಜನಿದ್ದರೆ ಮಾವ. ನೂರ್‍ಯಂಬತ್ತು ಮನೆ ಊರಲ್ಲಿ ಯಂಬತ್ತು ಮನೆಲಿ ಗಂಡದಿರೇ ಇಲ್ಲ."

"ಪಾಪ, ಅನ್ಯಾಯ ಕಂಡ್ಕೆ."

"ಒಂದೊಂದು ಮನಿಗೆ ಗಂಡ ಸತ್ತೋರು ಏಟು ಜನವುರೆ ಅಂತಿ? ಸರಾಪು ಕುಡುದು ಆಯಿಸು ಮುಗುಸ್ತೆ ಹೋದೋರು ವಸಿಜನ, ಆಪ್ಫೆಂಟಾಗಿ ಸತ್ತೋರೆ ಹನ್ಯರಡ ಜನ, ಅಂಗೇ ಲೈಕ ಹಾಕಿದ್ರೆ ಒಂದೂರಾಯ್ತದೆ."

"ಅದರಲ್ಕಲ್ಲ ಸರಾಪು ಕುಡುದು ಉಳುದು ಬದುಕಿರೋನು ಅಂದ್ರೆ ಇವುನೆ ನೋಡು" ಎಂದ ಉಗ್ರಿ ಪಾಟಿಸ್ಸೆ ತೋರಿ ಹೇಳಿದ.

"ಯಾಕಪ್ಪ ನಾನು ಬದುಕಬಾರ್ದ?"

"ಬದುಕಯ್ಯ ಬದುಕು. ಅಂದ್ರೆ ನಮ್ಮ ಕಾಳಮಾವ ಬದುಕಿದ ನೋಡು .ಅದು ಬದುಕು. ನಮ್ಮವುನ್ಕಲ್ಲ ಬದುಕು ಅನ್ನಕಾದತೇನೊ?" ಎಂದ ಉಗ್ರಿ.

"ಮಿಸ್ಟರ್ ಉಗ್ರಿ, ಕಾಳದೊಡಪ್ಪನ ಬದುಕು ನಿನಿಗೆ ಸಾರ್ಥಕಾಗಿ ಕಾಣಬಹುದು, ಆದ್ರೆ ನನಿಗೆ ಅಂಗೆ ಕಾಣದಿಲ್ಲ, ಇರ್ಲಿ, ನೀವು ಸ್ತ್ರೀ ಶಕ್ತಿ ಬಗ್ಗೆ ಕಾಮೆಂಟ್ ಮಾಡ್ತಯಿದ್ರಿ. ವಾಟೀಸ್ ದಿ ಪ್ರಾಬ್ಲಮ್ಮು?"

"ಪ್ರಾಬ್ಲಮ್ಮೇನು ಇಲ್ಲ, ಇನ್ನಮ್ಯಾಲೆ ನಿನ್ನಂಥೋರು ಕಾಲಮಾಡದು ತುಂಬಾ ಕಷ್ಟ ಕಣೊ."

"ನನಿಗೇನೂ ಪ್ರಾಬ್ಲಮ್ಮಿಲ್ಲ ಕಣೊ ಉಗ್ರಿ, ಯಂತ ಸಿಚುಯೇಶನ್ನಿಗೂ ಹೊಂದಿಕತ್ತಿನಿ. ಪ್ರಾಬ್ಲಮ್ಮಿರದೆ ನಮ್ಮ ಕಾಳದ್ಯಡಪ್ಪನಿಗೆ, ಚಿಗಪ್ಪನಿಗೆ, ನಿನಿಗೆ."

"ಸ್ತ್ರೀ ಸಗತಿಯೋರು ಶರಾಪು ನಿಶೇದ ಮಾಡಿ... ಕಾನೂನಾದಂಗೆ ಆಯ್ತು ಅವುರಂತೆ, ಹೆಂಗಸರಿಗೆ ಸ್ವಂ... ಕೊಡದಂಗೆ ಕಾನೂನು ಬಂದದಲ್ಲ ಅದ್ನೂ ಕೈಗೆ ತಗು... ಅವುರಂತೆ ಕಣೊ."

"ಮಿಸ್ಟರ್ ಉಗ್ರಿ, ಇಂತವುನ್ಕಲ್ಲ ಹೇಳಿ ನ... ಹೆದರಸಕ್ಕೋಗಬ್ಯಾಡ. ಸ್ತ್ರೀ ಸಗತಿ ಕತೆ ಏನು ಅ... ನನಿಗೂ ಗೊತ್ತು."

"ಏನು ಗೊತ್ತು ಹೇಳ್ಳ?"

"ಪಾಪ ಅವುರದೇನು ತೆಪ್ಪಿಲ್ಲ ಕಣಕ್ಕ. ... ದೇವೇಗೌಡ ಅಂಡ್ ಸನ್ಸ್ ಸಬಿಗೆ ಜನ ಬರಕ್ಕುಲವ... ಅದ್ಕೆ ಸ್ತ್ರೀಸಗತಿ ಜನ ತಂದು ಸುರುದು ನಂ... ತುಂಬಿಕಂಡ್ಕೋಯ್ತಾ ಅವುರೆ. ಸ್ವಾಭಿಮಾನದ... ಬದುಕಬೇಕಾದ ಹೆಂಗಸರ ಬಟಾವಡೆ ಜನ ಮಾ... ಮಡುಗ್ತಾ ಅವುರೆ ಕಣಕ್ಕ ಈ ಬ್ಲಡಿಫೂಲ್ ಪಾದ... ಸನ್ನು."

"ನಿಜವೇನ್ಲ ನಿನೇಳ್ತಾಯಿರದು?"

"ನಿನ್ನಾಣೆ ಕಣಕ್ಕ. ಕಾಂಗ್ರೆಸ್ಸಿನೋರು ಸ್ವಾಭಿಮಾ... ಸ್ತ್ರೀಶಕ್ತಿ ಮಾಡಿದ್ರೆ ಈ ದೇವೇಗೌಡನ ಕಡಿಯೋ... ಅವುರ ಸಭೆ ಸಮಾರಂಭಕ್ಕೆ ಬಳಿಸಿಗಂಡು ಬಿಸಾಕ್ತ ಅವು... ಆದ್ರಿಂದ ಕೂಡ್ಕೆ ನೀವ್ಕಲ್ಲ ಸೇರಿ ಸ್ತ್ರೀಶಕ್ತಿ ಅಂದ್ರೇನು... ಆದೇನು ಮಾಡಬೇಕು ಅಂತ ಹೇಳಿಕೊಡ ಬೇಕು."

"ಅದು ಹಂಗೆ ಕಣೊ ಪಾಟಿಸ್ಸೆ. ಈ ಕುಮಾರಸ್ವಾ... ದುಡ್ಡ ತುಂಬಿಕಂಡು ಬಂದು ಇರುದೂ ಇರುದ... ಕೊಡ್ತನೆ ಅಂತ ಸುದ್ದಿ ಹಬ್ಬಿದೆ ನೋಡು, ಅದ್ಕೆ ಕಿವಿಕ... ಮೂಗರಕ ಹೆಂಗಸರ್ಕಲ್ಲ ಅವುನ ಸಬಿಗೆ ಓಡ್ತ... ಅವುರಿಗೂ ಪಾಪ ಸ್ತ್ರೀಸಗತಿಗೂ ಯಾವ ಸಂಬಂಧವ... ಇಲ್ಲ" ಎಂದ ಉಗ್ರಿ.

"ಮಿಸ್ಟರ್ ಉಗ್ರಿ, ನಿನ್ನ ಮಾತು ನಿಜ ಆಗಿ... ನನಿಗೂ ಸಂತೋಷ ಆಯ್ತದೆ. ಆದ್ರೆ ದೇವೇಗೌ... ಅಂಡ್ ಸನ್ಸ್ ಸ್ತ್ರೀಸಗತಿ ಮ್ಯಾಲೂ ಕಣ್ಣಾಕಿರದ ಒಪ್ಪಿ... ಬೇಕು ನೀನು."

"ಸ್ತ್ರೀಸಗತಿ ಹೆಂಗಸರ ತಗಂಡು ಏನು ಮಾಡ್ತಲ... ಅವುರು?"

"ಗಲಾಟ ಮಾಡುಸ್ತರೆ ಕಣಕ್ಕ, ಅವುರಿಗಾಗದೋ... ಸಬಿಗೆ ಕಳಿಸಿ ಬಾಸಣ ಮಾಡದಂಗೆ ಮಾಡ್ತ... ನೋಡೀಗಾಗ್ಲೆ ಕರ್ನಾಟಕದ ಅರಬರೆ ರೌಡಿಗಳನ್ನ... ಕರಿಸಿಗಂಡಿರೊ ಕುಮಾರಸ್ವಾಮಿ ಚಾಮುಂಡೇಶ್ವರಿ ಕ್ಷೇತ್ರ... ಕಳಿಸ್ಯವುನೆ. ಅವುರಾಗ್ಲೆ ಸಿದರಾಮಯ್ಯ ರೇವಣಸಿದ್ದಯ... ಕಾರಿಗೆ ಕಲ್ಲು ಬೀರ್ಯವುರೆ."

"ಅವು ಯಾವ್ವೊ ಪೊಲಿ ಬಡ್ಡೆತ್ತವು ಮಾಡಿರ... ಕ್ಯಲಸವ ದ್ಯಾವೇಗೌಡ, ಕುಮಾರಸ್ವಾಮಿ ತಲಗ್ಯಾಕ್ಲ ಕಟ್ಟತೀ..."

"ಇನ್ನೇನು ನಿನ್ನ ತಲಿಗೆ ಕಟ್ಟಲ್ವಡಪ್ಪ, ನೀನು ಬ... ಬತ್ತ ತೀರ ದ್ಯಾವೇಗೌಡನಂಗೆ ಆಯ್ತಾ ಇದ್ದಿ. ಅಂಗ... ಬ್ಯಾಡ, ಮನಿಸಿಗೆ ನೆಮ್ಮದಿ ಇರದಿಲ್ಲ. ನಮ್ಮ ಕಾ... ದ್ವಡಪ್ಪ ಆಗಿದ್ರೆ ಚನ್ನಾಗಿರತದೆ. ಮೈಂಡ್ ಇಟ್."

" !?"

-ಬಿ. ಚಂದ್ರೇಗೌ...

Zero Hour ಮುನ್ನಿ


1. ಧೋನಿ ಹೇರ್‌ಕಟಿಂಗ್ ಮಾಡಿಸಿಕೊಳ್ಳುವುದನ್ನು ನೋಡಲು ಸಾವಿರಾರು ಜನ ಸೇರಿದ್ದರಂತೆ?
   - a) ತಲೆ ಕೆಟ್ಟಿರಬೇಕು
   - b) ಐಶ್ವರ್ಯ ಬ್ಯೂಟಿಪಾರ್ಲರ್‌ಗೆ ಹೋದರೆ ಲಕ್ಷ ಜನ ಸೇರೋ ಕಾಲ ಬಿಡು ಇದು
   - c) ಉಪ್ಪಿಯ ಹೊಸ ಹೇರ್‌ಸ್ಟೈಲ್ ಮಾಡುವಾಗ ಒಬ್ಬರೇ ಇದ್ರಂತಲ್ಲ...
   - d) ಧೋನಿ ಧೋನಿ ಎಂದು ಹಾಡೋ ಉಪ್ಪಿನೂ ನೋಡೋಕೆ ಹೋಗಿದ್ನಂತೆ...



2. 'ಸಮಾಜಸೇವೆ ಮಾಡಲೆಂದೇ ಪುನರ್ಜನ್ಮ ಸಿಕ್ಕಿದೆ' ಎಂದಿದ್ದಾರೆ ಕೋರೆ?
   - a) ಸಮಾಜಸೇವೆ? ಕೆಎಲ್‌ಇ ಎಂಬ ಕಮರ್ಷಿಯಲ್ ಸ್ಟ್ರೀಟ್‌ನಲ್ವಾ?
   - b) ದೇವೇಗೌಡರು 'ಬಾ ಬಾ' ಅಂತಾ ಕರೆದಂಗಾಯ್ತಂತೆ... ಥಟ್ಟಂತ ಚೇತರಿಸಿಕೊಂಡು ಬದೋದೆ?
   - c) ಆತ ಈ ಸಮಾಜಕ್ಕೆ ಯಾವ ಸೇವೆ ಮಾಡುವುದು ಬೇಡ. ತನ್ನಷ್ಟಕ್ಕೆ ತಾನು ಆರಾಮವಾಗಿರಲಿ
   - d) ಸಮಾಜ ಸೇವೆ= ಕ್ಯಾಪಿಟೇಶನ್ ಎನ್ನುವುದು ಗೌಪ್ಯ ವಿಷಯ

3. ರಾಜ್ಯ ಬಿಜೆಪಿಯ ಸಚಿವರಿಗೆ ಮುಂಬೈನಲ್ಲಿ ಟ್ರೇನಿಂಗ್ ಅಂತೆ?
   - a) ಮಂಗಳೂರು ಗಲಭೆಯನ್ನು ಮುಂದುವರಿಸೋದು ಹೇಗೆ ಎಂದು ಹೇಳಿಕೊಡ್ತಾರೇನೋ?
   - b) ಟ್ರೇನಿಂಗ್‌ಗೆ ಫೀಜು ಏನು ಗೊತ್ತಾ? ಇಷ್ಟು ದಿನ ನುಂಗಿದ್ದರಲ್ಲಿ ಶೇ. 10. ಭಾಗ
   - c) ಟ್ರೇನಿಂಗ್‌ನಲ್ಲಿ ನರೇಂದ್ರ ಮೋದಿ ಪ್ರಾಕ್ಟಿಕಲ್ಸ್ ಹೇಳಿಕೊಡ್ತಾನಂತೆ
   - d) ನಾಗರಾಜ ಶೆಟ್ಟಿ ಎಂಬ ವಿಷದ ಹಾವು ಇನ್ನೇನು ಟ್ರೇನಿಂಗ್ ಪಡೆದು ಬರುತ್ತೊ?
4. ಡೆಮೊಕ್ರಾಟ್ ಹೊಡೆತದಿಂದ ಏನಾಗಬಹುದು?
   - a) ಬುಷ್ ಎಂಬ ಕೋತಿಗೆ ಕತ್ತೆ ಒದೆತ ಬಿದ್ದಿದೆ
   - b) ಕೋಕಾಕೋಲಾ ಬದಲು ಪೆಪ್ಸಿ ಆರಿಸಿದ್ದಾರಷ್ಟೇ
   - c) ಸದ್ದಾಂ ಶಾಪಕ್ಕೆ ಬುಷ್‌ಗೆ ಗೂಸಾ.....
   - d) ಬುಷ್ ಎಂಬ ಕೊಲೆಗಡುಕ ಕೋತಿಗೆ ಬುದ್ಧಿ ಬರುವುದಿಲ್ಲ ಬಿಡು
5. ಹೊಸ ಆರ್ಥಿಕ ಸಂಬಂಧಗಳಿಗಾಗಿ ಕಮ್ಯುನಿಸ್ಟರೂ ತಮ್ಮ ಸಿದ್ಧಾಂತ ಬದಲಿ ಮಾಡಿಕೊಳ್ಳಬೇಕು ಎನ್ನುತ್ತಾರೆ ಪ್ರಧಾನಿ. ಸ್ವಲ್ಪ ವಿವರಿಸ್ತಿರಾ?
   - a) ಇನ್ನೇನಿಲ್ಲ ಬಿಡು, ಬುಷ್ ಹತ್ತಿರ ಸಾಕಷ್ಟು ದುಡ್ಡು ಇದೆ, ಅಡ್ಜಸ್ಟ್ ಆಗಿ ಹೋಗೋಣ ಅಂತಿದಾರೆ
   - b) "ಸದ್ದಾಂಗೆ ನೇಣು ಹಾಕಿದರೆ ನಾವ್ಯಾಕೆ ತಲೆಕೆಡಿಸಿಕೊಳ್ಳೋದು... ಸದ್ದಾಂ ಏನೂ ನಮ್ಮಲ್ಲಿ ಬಂಡವಾಳ ಹೂಡ್ತಾನಾ..." ಎಂಬ ನಿಲುವು
   - c) IMF ಏಜಂಟರಿಂದ ಇನ್ನೇನು ನಿರೀಕ್ಷಿಸಲು ಸಾಧ್ಯ?
   - d) ತಲೆತುಂಬಾ FDI, FI, Sensex ತುಂಬಿರುವವರು ಹೀಗೇ ಮಾತಾಡೋದು ಬಿಡು

ರವಿ ಅಂಕಲ್,



ಥೂ ಥೂ ಥೂ... ಏನಿದೆಲ್ಲ?

ಅಮ್ಮನ್, ಅಕ್ಕನ್ ಅನಿಸಿಕೊಳ್ಳೋದು ಯಾಕ್ ಬೇಕಿತ್ತು ಅಂಕಲ್ಲು? ಪವ್ಯಾ, ಗಣ್ಯಾ ಅನ್ನೋ ಥರ್ಡ್‌ರೇಟ್‌ನವರ ಜೋಡಿ ಹೋದ್ರ ಇನ್ನೇನಾಕ್ಕೈತಿ? ಅವ್ರ ಬುದ್ಧಿ ಇಲ್ಲ.. ನಿನ್ ವಯಸ್ಸೇನು, ಆಕಾರ ಏನು? ಎಲ್ಲಾ ನೋಡಿ ಸಿನಿಮಾ ಮಾಡ್ಬೇಕು...

ಇಲ್ಲಿ ನಮ್ ಸುಮಾ ಟೀಚರ್ ಅದಾರ.. ಅವ್ರು ನಿನ್ ಫ್ಯಾನಂತ.. ಪ್ರೇಮಲೋಕ ಟ್ವೆಂಟಿಥ್ರೀ ಟೈಮ್ ನೋಡಿದ್ರಂತ... ಈಗವ್ರಿಗೆ ನನ್ನಷ... ದೊಡ್ಡ ಮಗಳು ಅದಾಳ... ಅಂದ್ರ ರಾಧಿಕಾ ವಯಸ್ಸಿನ್ಯಾಕಿ... ಅಂಥದ್ರಾಗ... ನೀ ರಾಧಿಕಾ ಜೊತಿ ಟಚಿಂಗ್ ಟಚಿಂಗ್ ಮಾಡಿದ್ರ ಯಾರು ನೋಡ್ತಾ... ಕಾಕಾ? ನೋಡು, ಅದ ನಮ್ ಅಮೀರ್‌ಖಾನ್ ಹ್ಯಂಗದಾನ... ಎಷ್ಟ... ಫಿಟ್ ಅದಾನ.....

ಒಂದ್ ಸಿನಿಮಾ ಲಾಸ್ ಆತು ಅಂತಾ ಇನ್ನೊಂದು ಕಡಿಮೆ ರೇಟಿ... ಮಾಡಾದು... ಹಿಂಗ ಮಾಡಿಕೊಂತ ಹೊಂಟರ ಮುಂದ ನೀ ಪುಕ್ಕಟ... ಸಿನಿಮಾ ಮಾಡ್ಬೇಕಾಗುತ್ತ ನೋಡು ಕಾಕಾ..... ಕಾಕಾ ಸ್ವಲ್ಪ ಹೊಟ್ಟ... ಇಳಿಸೋಪ.... ಮೂರರಾಗ ಇದ್ದಂಗ ಕಾಣ್ತೆಯಪಾ... ಒಂದಿಷ್ಟು ಹೇರ್... ಪ್ಲಾಂಟೇಷನ್ ಮಾಡಿಸ್ಕೋ ಕಾಕಾ....

ಬ್ಯಾಸರ ಆಗಿದ್ರ 'ಪ್ರೇಮಲೋಕ' ಸಿನಿಮಾ ನೋಡು, ಖುಷ... ಆಗುತ್ತ,

-ಮುನ್ನಿ, ಧಾರವಾ...

ಒಂದು 'ಗಾದಿ' ಮಾತು

ಭಜರಂಗಿ ಕೈಗೆ ತ್ರಿಶೂಲ ಕೊಟ್ಟರೆ ಊರ ತುಂಬಾ ರಕ್ತ ಹರಿಸಿತ್ತಂತೆ....

ಉತ್ತರಗಳು:

1) a, 2) d, 3) d, 4) a, 5) c

ನೀವು ಮಾಡಬಯಸದ್ದನ್ನು ಇತರರಿಗೆ ಮಾಡಲು ಹೇಳುವುದು ಯೋಗ್ಯವಲ್ಲ -ಎಲೆನೋರ್ ರೂಸ್‌ವೆಲ್ಟ್

ಸುಸ್ತುತ್ತ ಸುಸ್ತಾಯಿತು. ಒಂದು ತಿಂಗಳಾದರೂ ವಿರಾಮ ಬೇಕು. ಮುಂದಿನ ವಾರದ, ಅದರ ಮುಂದಿನ ವಾರದ, ಒಟ್ಟು ನಾಲ್ಕು ವಾರದ ಪ್ರವಾಸಗಳನ್ನೆಲ್ಲ ರದ್ದು ಮಾಡಿ... ಅಂದೆ. ಆದರೆ ನನ್ನ ಆಳದಲ್ಲಿ ಸಂತೋಷ ಕೂಡ ಆಗಿತ್ತು, ಜನರ ಕಣ್ಣಲ್ಲಿನ ಕಾತರ ನನ್ನನ್ನು ಮುಟ್ಟಿತ್ತು. ಮತ್ತೋಡು ಎಂಬ ಹಳ್ಳಿ. ಹೊಸದುರ್ಗದಲ್ಲಿ ಎರಡು ಸಭೆ. ಮಾಯಕೊಂಡ ಎಂಬ ಹಳ್ಳಿಯೂ ಅಲ್ಲದ ಪಟ್ಟಣವೂ ಅಲ್ಲದ ಊರಿನಲ್ಲಿ ಸಭೆ. ಮರುದಿನ ಜಗಳೂರಿನಲ್ಲಿ, ಗುಂಪುಗೂಡಿದ, ದಟ್ಟವಾಗಿ ನಿಂತ, ಕೂತ ಸಾವಿರಾರು ಜನ. ನನ್ನಿಂದ ಭೀಕರ ಭಾಷಣ, ರಾಜಕಾರಣಿಗಳ ಟೀಕೆ ನಿರೀಕ್ಷಿಸಿದ್ದವರು. ನನಗೆ ಆತಂಕ. ಅವರಲ್ಲಿ ಸಲ್ಲದ ಆಸೆ ಕೆರಳಿಸಿಬಿಟ್ಟೇನೆಂದು, ಹುಂಬತನದಿಂದ ಮಾತಾಡಿ ಮತ್ತೊಬ್ಬ ಪುಢಾರಿಯ ಸುಡಿಕಟ್ಟಿಗೆ ಬಲಿಯಾದೇನೆಂದು ಭಯ. ಪುಢಾರಿಯ ಗತ್ತು, ಮಾತಿನಲ್ಲೇ ಆತನ ಸುಳ್ಳು, ಮೋಸಗಳೆಲ್ಲ ಇವೆ. ಅಲ್ಲದೆ ವೇದಿಕೆಯಲ್ಲಿಯೇ ಈ ಮುಖವಾಡ ಕೂಡ ಅಡಕಗೊಂಡಿರುತ್ತದೆ. ವೇದಿಕೆಯ ಚೀರಾಟವನ್ನು ಆತ್ಮೀಯ ಮಾತುಕತೆಗೆ ಇಳಿಸದಿದ್ದರೆ ಸಲ್ಲದ ಆಶ್ವಾಸನೆ ಹೊರಡುತ್ತದೆ.

ನಮ್ಮ ಪ್ರಣಾಳಿಕೆಯ ಒಂದೆರಡು ಅಂಶ ವಿವರಿಸಿದೆ. ಕರ್ನಾಟಕದ ಹೊಸ ಸರ್ಕಾರಕ್ಕೆ ಬೇಕಾದ ಆರ್ಥಿಕ ನೆಲಗಟ್ಟಿನ ಮೇಲೆ ಕ್ರಿಯಾತ್ಮಕ, ನೈತಿಕ ಕೆಲಸಗಳೆಲ್ಲ ನಡೆಯಬೇಕಾಗಿರುವುದನ್ನು ಹೇಳಿದೆ. ಇನ್ನೂ ಕೇಳಬೇಕೆನ್ನುವ ಜನ. ನಿಲ್ಲಿಸ ಬೇಡಿ ಎಂದು ಹೇಳದಿದ್ದರೂ ತಮ್ಮ ಉಸಿರಿನ ಮೂಲಕವೇ ನನ್ನ ಹೃದಯಕ್ಕೆ ಇಂಗಿತ ತಲುಪಿಸುವ ಜನ. ಮೂರು ತಿಂಗಳಿಂದ ನೋಡಿದ್ದೇನೆ. ಅರ್ಧ ಗಂಟೆ ಮಾತಾಡಿದರೆ ಸಾಲದು, ಮುಕ್ಕಾಲುಗಂಟೆ ಮಾತಾಡಿದರೆ ಸಾಲದು, ಒಂದು ಗಂಟೆಯೂ ಸಾಲದು. ಅಧ್ಯಾಪಕನಾಗಿದ್ದ ನಾನು ಐವತ್ತು ನಿಮಿಷಕ್ಕೆ ಒಲಿದ ಜೀವ.




ಪಯಣದ ಒಂದು ಹಂತ

ಮಾತಾಡುತ್ತ ಆಡುತ್ತ ನೆನಪಾಗುತ್ತದೆ. ಚಕಿತನಾಗಿ ಕ್ಷಣ ಸುಮ್ಮನಾಗಿ ಹೇಳುತ್ತೇನೆ. ಇವೆಲ್ಲ ನೀವು ತಿಳಿಯಬೇಕಾದ ವಿಚಾರಗಳು, ಮಾನವಂತ ಸರ್ಕಾರ ರೂಢಿಸಬೇಕಾದ ಸಂಪತ್ತು, ಅದೆಲ್ಲ ಸರಿ. ಆದರೆ ರಾಜಕೀಯ ಇದರಿಂದ ಮಾತ್ರ ಆಗುವುದಿಲ್ಲ, ಅಂದರೆ ಜನಸಾಮಾನ್ಯರ ಬದುಕನ್ನು ನೇರಗೊಳಿಸಲು, ಉದ್ಯೋಗ ಕಲ್ಪಿಸಲು ಸಾವಿರ ಕೋಟಿಯಷ್ಟು ಹಣವನ್ನು ಮೊದಲು ರೂಢಿಸಬೇಕು. ಆದರೆ ಹಣದಿಂದಲೇ ರಾಜಕೀಯ, ನಿರ್ವಹಣೆ ಆಗುವಂತಿದ್ದರೆ ನಾಳೆಯೇ ರಾಜೀವಗಾಂಧಿ ಸಾವಿರ ಕೋಟಿಯನ್ನು ಕರ್ನಾಟಕಕ್ಕೆ ಕಳಿಸಬಲ್ಲರು. ಅದು ಏನೂ ಮಾಡುವುದಿಲ್ಲ. ರಾಜ್ಯದ ಬದುಕನ್ನು ತಿದ್ದಲು, ಇಲ್ಲಿ ಜನರನ್ನು ಸಂಘಟಿಸಿ ರಚನಾತ್ಮಕ ಕಾರ್ಯ ಸಾಧ್ಯವಾಗುವಂತೆ ಮಾಡಲು ಕಾರ್ಯಕರ್ತರು ಬೇಕು. ಕರ್ನಾಟಕದಲ್ಲಿ ಒಟ್ಟು ಕನಿಷ್ಠ ಸಾವಿರ ಜನ ಲಜ್ಜೆಯುಳ್ಳವರು, ಕಲ್ಪನೆಯುಳ್ಳವರು ಮಾನವೀಯತೆಯುಳ್ಳವರು ಒಂದು ರಾಜಕೀಯ ಪಕ್ಷದಲ್ಲಿದ್ದು ಕಾರ್ಯಪ್ರವೃತ್ತರಾಗದಿದ್ದರೆ ಏನೂ ಆಗುವುದಿಲ್ಲ. ಇವತ್ತಿನ ರಾಜಕೀಯದಲ್ಲಿ ಇನ್ನೂ ಹೆಚ್ಚಿನ ಗುಣದ ಅಗತ್ಯವಿದೆ. ಖಾಸಗಿ ಖದೀಮರು ಸರ್ಕಾರಕ್ಕಿಂತ ಬಲವಾಗಿದ್ದಾರೆ; ಒಂದು ಸರ್ಕಾರವನ್ನು ರಕ್ಷಿಸಲು ನೂರು ಕೋಟಿ ಹಣ ಖರ್ಚುಮಾಡಬಲ್ಲವರಾಗಿರುವಂತೆಯೇ ಅದೇ ಸರ್ಕಾರವನ್ನು ಬೀಳಿಸಲು ಅಷ್ಟೇ ಖರ್ಚು ಮಾಡಬಲ್ಲ ಶಕ್ತಿ ಪಡೆದಿದ್ದಾರೆ.

ಜನಪರ ಸರ್ಕಾರ ಎಂದು ಕೆಲಸ ಮಾಡಬೇಕಾದರೆ ಇವತ್ತು ಎಲ್ಲ ವಾಂಛಲ್ಯಗಳನ್ನು ಗೆದ್ದು ನಿಲ್ಲಬಲ್ಲ ಅವಧೂತರು ಬೇಕಾಗಿದ್ದಾರೆ; ಮನುಷ್ಯ ಜೀವನದ ಸಾರ್ಥಕ್ಯ ಮತ್ತು ಸುಖದ ಮೂಲಗಳನ್ನು ಅರಿತವರು ಬೇಕಾಗಿದ್ದಾರೆ, ನನ್ನ ಚಲನವಲನಗಳ ಮೂಲಕ ಈ ಜನರಿಗಾಗಿ ಹುಡುಕುತ್ತಿದ್ದೇನೆ; ನನ್ನ ಸಹಕಾರ್ಯಕರ್ತರೂ ಸಂಚಾಲಕರೂ ಅಷ್ಟೆ.

ಈ ಹುಡುಕಾಟದಲ್ಲಿ ಸೋತರೆ? ಇದು ಜನರ ಸೋಲೆನ್ನಿಸುವವರೆಗೆ ಹುಡುಕೋಣ. ನಾವು ಇದಕ್ಕಾಗಿ ಕೆಲಸ ಮಾಡಲಿಲ್ಲ ಎಂಬ ಅಳುಕು ಉಳಿಯಬಾರದು.

ಜಗಳೂರಲ್ಲಿ ಕೊನೆಯ ಭಾಷಣ ಮುಗಿಯುವಷ್ಟರಲ್ಲಿ ಕತ್ತಲಾಗಿತ್ತು, ಹತ್ತಿರದಿಂದ ನೋಡಲು ನೂಕುನುಗ್ಗಲು. ಕೋಣೆಗೆ ಹೋಗಿ ಮಲಗಿದೆ.



ಜುಲೈ 17, 1977

ಚಿತ್ರಕತೆ

ಸೆಡವು, ಪ್ರಶ್ನಬೃತೆ, ಬಿಕ್ಕಟ್ಟು... ಯಾವ ಪದವೂ tension ಎನ್ನುವುದನ್ನು ಹೇಳುವುದಿಲ್ಲ, ಮೊದಲ ರಾತ್ರಿಯ ಟೆನ್‌ಶನ್. ನಾನೊಂದು ಚಿತ್ರಕತೆ ರೂಪಿಸಬೇಕೆಂದಿದ್ದೆ, ಭಾರತದ ಮದುವೆಯ ಮಾತುಕತೆ, ಭಾವೀ ನಂಟರು, ಬೀಗರ ಓಡಾಟ, ತಾವು ಸ್ವೀಕರಿಸಬೇಕಾದ ಉಡುಗೊರೆ, ಅಂದರೆ ವರದಕ್ಷಿಣೆ; ಎಲ್ಲ ಸಜ್ಜನರಂತೆ ವ್ಯವಹಾರ. ಗೋತ್ರ, ನಕ್ಷತ್ರಗಳ ಚರ್ಚೆ. ಹಣದ ಮೊತ್ತಕ್ಕೆ ತಕ್ಕಂತೆ ಹೊಂದಾಣಿಕೆ ಮಾಡಿಕೊಳ್ಳುವ ಗೋತ್ರಗಳು, ನಕ್ಷತ್ರಗಳು, ರಾಶಿಗಳು, ಜಾತಕಗಳು. ಎಲ್ಲ ಸ್ನೇಹಮಯ ಲೇವಾದೇವಿ. ಇಲ್ಲಿ ಯಾರೂ ಖಳನಾಯಕರಲ್ಲ, ಮದುವೆ ಬಂದೇ ಬರುತ್ತದೆ; ಅಲ್ಲಿ ಸ್ವಲ್ಪ ಒತ್ತಡ ಶುರುವಾಗುತ್ತದೆ. ದಾಗೀನಿ ಹಾಕಬೇಕಾದಷ್ಟು ಹಾಕಿಲ್ಲ, ಹುಡುಗನ ಅಕ್ಕನ ಕಡೆಯವರಿಂದ ಕೂಗಾಟ. ಆಕೆಯನ್ನು ಸಮಾಧಾನಪಡಿಸುವ ಶೈಲಿಯಲ್ಲಿ ಹುಡುಗನ ತಂದೆ. ಹುಡುಗನ ಕಡೆಯ ಎಲ್ಲರದು ಹೆಮ್ಮೆ, ಅಹಂಕಾರದ ನಡವಳಿಕೆ. ಹುಡುಗಿಯ ಕಡೆಯವರಿಂದ ಸಹಕರಿಸಲು ಹೋರಾಟ-ನಡುವೆ ಪುರೋಹಿತ. ಎಲ್ಲರನ್ನು ಒಳ್ಳೆಯ ಮೂಡ್‌ನಲ್ಲಿಡಲು ಈತನ ವ್ಯವಹಾರಜ್ಞ ಮಾತುಗಳು; ಯಾರಿಗೂ ತಿಳಿಯದಿದ್ದರೂ ಎಲ್ಲರನ್ನೂ ತಲೆದೂಗಿಸುವ ಮಂತ್ರಗಳು, ಅಂದರೆ ಶ್ಲೋಕಗಳು.

ವಧುವಿನ, ವರನ ಆಳದ ಶೋಕವನ್ನು ಮರೆತ ಶ್ಲೋಕ. ಜೀವನದಲ್ಲಿ ಮೊತ್ತ ಮೊದಲ ಬಾರಿಗೆ ತನ್ನ ಬದುಕಿನ ಸಂಗಾತಿಯ ಸ್ಪರ್ಶ. ಈ ಮದುವೆ ಸಂದರ್ಭದ ಸ್ಪರ್ಶ ಇಬ್ಬರನ್ನೂ ಬೇರೆಬೇರೆಯಾಗಿಯೇ ಮಾಡಿವೆ. ಮದುವೆಯ ಗದ್ದಲ, ಲೇವಾದೇವಿ, ಮನಸ್ತಾಪವೆಲ್ಲ ವಿಷಾದದ ಅಲೆಯನ್ನೇ ಎಬ್ಬಿಸಿವೆ. ಆದರೆ ಮೊದಲ ರಾತ್ರಿ.... ಅತ್ಯಂತ ಖಾಸಗಿಯಾದ, ಅನ್ಯೋನ್ಯವಾದ ಕ್ಷಣ. ಮೇಲಿನ ಬಹಿರಂಗ ಹುಟ್ಟಿಸಲಾರದ ಈ ಅಂತರಂಗ ಕ್ಷಣ tension ಪನ್ನೀರು ಎಷ್ಟು ನೆರವಾಯಿತು, ಮಲ್ಲಿಗೆ ತನ್ನ ಕೋಮಲತೆ ಮತ್ತು ಕಂಪಿನಿಂದ ಎಷ್ಟು ನೆರವಾಯಿತು. ಯೌವನದ ಕಾತರ ಎಷ್ಟು ರಕ್ಷಿಸಿತು...



ಮಲ್ಲಿಗೆ....

ಮದುವೆಯ ವಿವರಗಳೇ ಎಂಥ ಸಿನಿಮಾ ನೀಡಬಲ್ಲವು!

ಹೆಣ್ಣು ಕಾಮದೇವತೆ ಆದರೆ ಗಂಡು?



ಶಿವಕುಮಾರ್, ಶೋರಾಪೂರ
ರಾಜಕಾರಣಿಗಳ ಮಿದುಳು ಎಲ್ಲಿರುತ್ತೆ?
* ಇದೆ ಅಂತಾ ಇನ್ನೂ ಸಾಬೀತಾಗಿಲ್ಲ.

ಇಂದಿರಾ ಶ್ರೀಧರ್, ದಾವಣಗೆರೆ
ಲಂಕೇಶರು ಸಾಹಿತ್ಯ ಕ್ಷೇತ್ರದಲ್ಲಿ ಮಹಾ ಮೇಧಾವಿಗಳಿದ್ದಾಗ್ಯೂ ಜ್ಞಾನಪೀಠ ಪ್ರಶಸ್ತಿ ಯಾಕೆ ಬರಲಿಲ್ಲ?
* ಕೊನೆ ಕ್ಷಣದವರೆಗೂ ಜ್ಞಾನವನ್ನು ವೃದ್ಧಿಸಿಕೊಳ್ಳುತ್ತಿದ್ದರಿಂದ.

ಬಸವರಾಜ್ ಬೆಸ್ತರ್, ಗುಲ್ಬರ್ಗಾ
ಅಂಬರೀಷ್ ರೀಲಿನಲ್ಲಿ ರೆಬೆಲ್, ರಾಜಕೀಯದಲ್ಲಿ?
* ಇತ್ತೀಚಿನವರೆಗೂ ಪೆಬೆಲ್ (pebble).


ಕೆ.ವಿ.ಶಿವಕುಮಾರ್, ಕಾಳೀಹುಂದಿ
ಸಂಪಾದಕರಿಗೂ, ಅತಿಥಿ ಸಂಪಾದಕರಿಗೂ ಇರುವ ವ್ಯತ್ಯಾಸವೇನು?
* ಸಂಪಾದಕನ ತಲೆ ಖಾಲಿ ಆದಾಗ, ಅತಿಥಿಯೇ ದೈವೋಭವ.

ಅಕ್ಷಯಕುಮಾರ್, ಶೋರಾಪೂರ
ಕರೆಂಟು ಇಲ್ಲದಿದ್ರೆ ಊರೆಲ್ಲಾ ಕತ್ತಲು, ಹುಡ್ಗೀರು ಇಲ್ಲದಿದ್ರೆ?
* ಹುಡುಗರೆಲ್ಲಾ ಸತ್ತರು.

ಡಿ.ಎಲ್.ನಾಗರಾಜ್, ಹರಪನಹಳ್ಳಿ
ಬುದ್ಧಿವಂತಿಕೆಯನ್ನು ಗುರುತಿಸಲು ಇರುವ ಮಾನದಂಡ ಯಾವುದು?
* "ಲಂಕೇಶ್"

ಡಿ.ಎಲ್. ಸುರೇಶ್, ಹರಪನಹಳ್ಳಿ
ಉಕ್ಕಿ ಬರುವ ಕನ್ನಡಪ್ರೇಮ ನವಂಬರ್ ತಿಂಗಳಿಗಷ್ಟೇ ಸೀಮಿತವಾ?
* ಒಂದು ದಿನಕ್ಕೆ ಸೀಮಿತವಾಗಿದ್ದು ಈ 30 ದಿನವೂ ಹರಿಯುತ್ತಲ್ಲಾ ಇದನ್ನ ಏನನ್ನಬೇಕು.

ಸುಫಿಯಾ ಬೇಗಂ, ದೇವದುರ್ಗ
ಪ್ರಾಣಿಹತ್ಯೆ ವಿರುದ್ಧ ಪ್ರತಿಭಟಿಸಲು ರೂಪದರ್ಶಿಗಳು ಬೆತ್ತಲೆ ಪೋಸ್ ನೀಡುವ ಉದ್ದೇಶವೇನಿರಬಹುದು?
* ಸತ್ಯ ಮಾತ್ರವಲ್ಲ, ಅನುಕಂಪವೂ ನಗ್ನವಾಗಿರುತ್ತದೆಂದು.



ಬಿ.ಎಂ.ಪರಶಿವಮೂರ್ತಿ, ಬೆಂಗಳೂರು
ಹೆಣ್ಣು ಮಕ್ಕಳನ್ನು ಹೆರುತ್ತಾಳೆ, ಗಂಡು?
* ಹೊರಸುತ್ತಾನೆ.

ಓದು ಸಿದ್ದೇಗೌಡ, ಕಬ್ಬೇಹಳ್ಳಿ
ಗುಡಿಸಲು ಕಂಡಲ್ಲಿ ಮಲಗುವ, ಭೂಮಿ ಕಂಡಲ್ಲಿ ನುಂಗುವ ಮನುಷ್ಯರೇನೆಂಬೆ ಲಂಕೇಶ್ವರಿ?
* ಕುಮಾರ 'ಕಂಟೀ'ರವ ಎಂಬೆ ಗೌಡಣ್ಣಾ.

ಎಸ್. ತಾರಾನಾಥ್, ಅಚ್ಚಪ್ಪನಕೊಪ್ಪಲು
ಶಂಕರಮೂರ್ತಿಯವರು ಹೋದ ಜನ್ಮದಲ್ಲಿ ಬ್ರಿಟಿಷರಾಗಿದ್ರಾ?
* ಇಲ್ಲ, ಅವರ ಗುಲಾಮರಾಗಿದ್ದರು.

ಎಂ.ಎಸ್. ಕಾರ್ತಿಕ್, ಕುಮಟಾ
ಸಜ್ಜನರ ಸಂಘ ಹೆಜ್ಜೇನು ಸವಿದಂತೆ, ಕೋಮುವಾದಿಗಳ ಸಂಘ?
* ವಿಷ ಕುಡಿದಂತೆ.

ಪಿ.ಎನ್.ಶ್ರೀವತ್ಸ, ಬೆಂಗಳೂರು
ಮಲಗಿಕೊಳ್ಳುವಾಗ ಆಗುವ ಸಂತೋಷ ಏಳುವಾಗ ಇರಲ್ವಲ್ಲಾ?
* ಹಾಸಿಗೆಯಲ್ಲಿ "ಬೆಚ್ಚ"ಗಿನ ಸಂತೋಷ ಅಷ್ಟು ಚೆನ್ನಾಗಿರುತ್ತೆ.

ಬಹುಮಾನಿತ ಪ್ರಶ್ನೆ

ಚಾಂದಪಾಷಾ, ದೇವದುರ್ಗ
ಹೆಣ್ಣು ಕಾಮದೇವತೆ ಆದರೆ ಗಂಡು?
* ಆ ದೇವತೆಯ ಗರ್ಭಗುಡಿಯ ಪೂಜಾರಿ.

ಛೀ ತುಂಟಿ!

ಮೂವರು ಮಹಿಳೆಯರು ಸ್ವರ್ಗಸ್ಥರಾಗಿ ಯಮರಾಜನ ಮುಂದೆ ಹಾಜರಾದರು. ಮೊದಲನೆಯವಳನ್ನು ಯಮ ಪ್ರಶ್ನಿಸಿದಾಗ ಆಕೆ "ನಾನು ಸಭ್ಯ ಮಹಿಳೆ. ನನ್ನ ಗಂಡನಿಗೆ ತನ್ನನ್ನು ಅರ್ಪಿಸಿಕೊಂಡ ನಾನು, ನನ್ನ ಅತ್ತೆ ಮಾವನನ್ನು ಚೆನ್ನಾಗಿ ನೋಡಿಕೊಂಡೆ. ಪ್ರತಿದಿನ ಪ್ರಾರ್ಥಿಸುತ್ತಿದ್ದೆ" ಎಂದಳು.

"ಸರಿ, ನಿನಗೆ ಪಂಚತಾರ ಸವಲತ್ತು" ಎಂದು ಯಮ ಎರಡನೆಯವಳತ್ತ ತಿರುಗಿದ. ಆಕೆ "ನಾನು ಅವಳಷ್ಟೇನು ಸಭ್ಯಳಲ್ಲ, ಆದರೆ ನಾನು ಯಾರನ್ನೂ ನೋಯಿಸಲಿಲ್ಲ ಮತ್ತು ಗಂಡ ಎಂದೂ ಬೇಜಾರು ಪಡದಂತೆ ನೋಡಿಕೊಂಡೆ" ಎಂದಳು.



"ಸರಿ ನಿನಗೆ ತ್ರಿಸ್ಟಾರ್ ಸವಲತ್ತು" ಎಂದು ಯಮ ಮೂರನೆಯವಳತ್ತ ತಿರುಗಿದ. ಆಕೆ "ನಾನು ಅವರಂತಲ್ಲ, ಬಿಸಿರಕ್ತದವಳು. ಯಾರಿಗೂ ಕೇರ್ ಮಾಡದೆ ನನಗೆ ಇಷ್ಟವಾದುದನ್ನು ಮಾಡಿದೆ, ಆನಂದಿಸಿದೆ" ಎಂದಳು.

ಆಗ ಯಮರಾಯ "ಅಯ್ಯೋ, ತಂಗಿ ಇಂತಹ ತಪ್ಪನ್ನು ಯಾಕೆ ಮಾಡಿದೆ?" ಎಂದು ಕೇಳಿದ.

"ಏ, ನೀನು ನನಗೆ ಏನು ಬೇಕಾದರೂ ಮಾಡು, ಆದರೆ ತಂಗಿ ಅಂತ ಮಾತ್ರ ಕರೀಬೇಡ" ಎಂದಳು ಆಕೆ. ಇದನ್ನು ಕೇಳುತ್ತಿದ್ದಂತೆ ಯಮರಾಯ "ಹಾಗಾದರೆ ಇವತ್ತು ರಾತ್ರಿ ನನ್ನ ಕೋಣೆಗೆ ಬಾ" ಎಂದ.

ನಮ್ಮ ಪ್ರಶ್ನೆಗೆ ನಿಮ್ಮ ಉತ್ತರ!!

ವಾರದ ಪ್ರಶ್ನೆ:

ಕುವೆಂಪುರವರು ರೈತರೇ ಅನ್ನದಾತರೆನ್ನುತ್ತಾರೆ, ದ್ವಾರಕೀಶ್‌ರವರು ಚಿತ್ರ ನಿರ್ಮಾಪಕರೇ ಅನ್ನದಾತರೆನ್ನುತ್ತಾರೆ, ನೀವೇನಂತೀರಿ?

ನವೆಂಬರ್ 8ರ ಸಂಚಿಕೆಯ ನಮ್ಮ ಪ್ರಶ್ನೆ: ದೊಡ್ಡವರ ಮಕ್ಕಳೆನಿಸಿಕೊಳ್ಳಲು ಇರಬೇಕಾದ ಅರ್ಹತೆಗಳೇನು?

ನಿಮ್ಮ ಉತ್ತರ: ಕಾರು-ಬಾರು ಜೋರಾಗಿದ್ದು, ಮೂರೂ ಬಿಟ್ಟವರಾಗಿರಬೇಕು.

ಉತ್ತರ ಕಳುಹಿಸಿ ಬಹುಮಾನ ಪಡೆದಿರುವವರು: ಕೆ.ಶ್ರೀನಿವಾಸ್, ಮಂಡ್ಯ

ಏನು ಕೆಲಸ ಆಗಿದೆ ಎನ್ನುವುದನ್ನು ಯಾರೂ ಗಮನಿಸುವುದಿಲ್ಲ; ಆಗಬೇಕಾದದ್ದು ಏನು ಉಳಿದಿದೆ ಎಂಬುದನ್ನು ನೋಡುತ್ತಾರೆ -ಮೇರಿ ಕ್ಯೂರಿ

ದೋಚಿದ ದುಡ್ಡು ಜ್ಯೋತಿಷಿಯ ಪಾಲು?

ಜ್ಯುಡಿಷಿಯಲ್ ಲೇಔಟ್ ಕೊಳ್ಳೆ



ಮಂತ್ರಿ ರೇವಣ್ಣನವರ ಒಂದೇ ಒಂದು ಫೋನ್ ಕರೆ ಇಡೀ ಪ್ರಕರಣವನ್ನು ಮುಚ್ಚಿ ಹಾಕಿದೆ. ಅಲ್ಲಿಗೆ ಚಂದ್ರಸ್ವಾಮಿಯನ್ನೇ ಹೋಲುವ ಇನ್ನೋರ್ವ ಪ್ರಳಯಾಂತಕ ಜ್ಯೋತಿಷಿ ಕಲ್ಲಳ್ಳಿ ಶ್ರೀಧರ ಜೋಯಿಸನಿಗೆ ಏರೋಪ್ಲೇನೆತ್ತಿ ಲಾಳ ಕಟ್ಟಿ ಬಾಯಿ ಬಿಡಿಸುವ ಯಲಹಂಕ ಪೊಲೀಸರ ದುಸ್ಸಾಹಸಕ್ಕೂ ತೆರೆಬಿದ್ದಿದೆ.

ರಾ. ಸೋಮನಾಥ್



ಶ್ರೀಧರ ಜೋಯಿಸ್

ಆ ಐನೂರು ಕೋಟಿಯ ಆಸ್ತಿ ಪೂರ್ತಿ ಮಂಡ್ಯದ ಜ್ಯೋತಿಷಿಯ ಪಾಲಾಯಿತೆ? ಅಥವಾ ದೇವೇಗೌಡರ ಫ್ಯಾಮಿಲಿಯ ಕಪ್ಪು ನಿಧಿಯ ಜೊತೆ ಅದು ಕೂಡ ಲೀನವಾಯಿತೆ?

ಮಂಡ್ಯದ ಜ್ಯೋತಿಷಿ ಕಲ್ಲಹಳ್ಳಿ ಶ್ರೀಧರ ಜೋಯಿಷನನ್ನು ಹೆಡೆಮುರಿ ಕಟ್ಟಿ ಎಳೆತಂದು ಜ್ಯುಡಿಷಿಯಲ್ ಲೇಔಟ್ ಕೊಳ್ಳೆಯ ದುಡ್ಡನ್ನು ವಸೂಲಿ ಮಾಡುವ ಯಲಹಂಕ ಪೊಲೀಸರ ದುಸ್ಸಾಹಸಕ್ಕೆ ಮುಖ್ಯಮಂತ್ರಿಯ ಅಣ್ಣ ಮಂತ್ರಿ ರೇವಣ್ಣ ಅಡ್ಡಗಾಲಿಟ್ಟಿದ್ದು, ಅದಕ್ಕೆ ಸೋಮೇಶ್ ಎಂಬ ಯುವಕ ಜೈಲು ಪಾಲಾದದ್ದು ಮತ್ತು ಆ ಮೂಲಕ ಭಯಾನಕ ಪೊಲೀಸ್ ದೌರ್ಜನ್ಯವೊಂದು ಸದ್ದಿಲ್ಲದೇ ನಡೆದದ್ದು; ಈ ಹೊತ್ತಿಗಾಗಲೇ ದೊಡ್ಡ ಸುದ್ದಿಯಾಗಬೇಕಿತ್ತು.

ಮಂತ್ರಿ ರೇವಣ್ಣನವರ ಒಂದೇ ಒಂದು ಫೋನ್ ಕರೆ ಇಡೀ ಪ್ರಕರಣವನ್ನು ಮುಚ್ಚಿ ಹಾಕಿದೆ. ಅಲ್ಲಿಗೆ ಚಂದ್ರಸ್ವಾಮಿಯನ್ನೇ ಹೋಲುವ ಇನ್ನೋರ್ವ ಪ್ರಳಯಾಂತಕ ಜ್ಯೋತಿಷಿ ಕಲ್ಲಳ್ಳಿ ಶ್ರೀಧರ ಜೋಯಿಸನಿಗೆ ಏರೋಪ್ಲೇನೆತ್ತಿ ಲಾಳ ಕಟ್ಟಿ ಬಾಯಿ ಬಿಡಿಸುವ ಯಲಹಂಕ ಪೊಲೀಸರ ದುಸ್ಸಾಹಸಕ್ಕೂ ತೆರೆಬಿದ್ದಿದೆ.

ತಿಮ್ಮಯ್ಯ ಎಲ್ಲರೂ ಸೊಸೈಟಿ ದೋಚಿಯೇ ಕುಬೇರರಾದವರು.

ಜಕ್ಕೂರು ಏರೋಡ್ರಮ್ ಎದುರಿನ ಅಳ್ಳಾಳಸಂದ್ರ, ಚಿಕ್ಕಬೊಮ್ಮಸಂದ್ರ ಗ್ರಾಮಗಳ ರೈತರ ಜಮೀನು ಕಿತ್ತು ಬಿಡಿಎ ಜ್ಯುಡಿಷಿಯಲ್ ಸೊಸೈಟಿಗೇನೋ ಕೊಟ್ಟಿತು. ಆದರೆ ನ್ಯಾಯಾಂಗ ನೌಕರರಿಗಿಂತಲೂ ಆಂಧ್ರದ ವಂಚಕರೇ ಹೆಚ್ಚು ಸೈಟುಗಳನ್ನು ಹೊಡೆದರು. ಅಧ್ಯಕ್ಷ ಶಿವಲಿಂಗಯ್ಯ ಮತ್ತು ಸೆಕ್ರೆಟರಿ ಸತೀಶ್‌ಕುಮಾರ್ ಸೇರಿಕೊಂಡು ಜ್ಯುಡಿಷಿಯಲ್ ಲೇಔಟಿನ ಪಾರ್ಕ್ ಜಾಗ, ದೇವಸ್ಥಾನದ ಜಾಗ, ಆಟದ ಮೈದಾನ, ಪೊಲೀಸ್ ಠಾಣೆಗೆಂದಿಟ್ಟಿದ್ದ ಜಾಗ ಎಲ್ಲವನ್ನೂ ನುಂಗಿ ಸೈಟು ವಿಂಗಡಿಸಿ ಮಾರಿಕೊಂಡರು.

ಸೊಸೈಟಿಯ ಬೇರೆಲ್ಲಾ ಡೈರೆಕ್ಟರ್‌ಗಳಿಗೆ ಮೂಳೆ

ವಸೂಲಿಗಾಗಿ ಪೊಲೀಸರ ಸುಪಾರಿ

ಅದು ಕರ್ನಾಟಕ ರಾಜ್ಯ ನ್ಯಾಯಾಂಗ ಇಲಾಖೆ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ ಕರ್ಮಕಾಂಡವಷ್ಟೇ ಅಲ್ಲ, ಅದನ್ನು ಕೊಳ್ಳೆ ಹೊಡೆದ ಖದೀಮರಿಬ್ಬರ ನಡುವಿನ ಜಂಗಿಕುಸ್ತಿ ಕೂಡ. ಸದ್ಯ ಹದಿನಾಲ್ಕು ದಿನಗಳ ಕಾಲ ಜೈಲಲ್ಲಿ ಕಳೆದು, ಅದಕ್ಕೂ ಮುನ್ನ ಹದಿನೈದು ದಿನ ಯಲಹಂಕ ಪೊಲೀಸ್ ಠಾಣೆಯ ಲಾಕಪ್ಪಿನಲ್ಲಿ ಚಿತ್ರಹಿಂಸೆಗೀಡಾಗಿ, ತನ್ನೆಲ್ಲಾ ಆಸ್ತಿ ಕಳಕೊಂಡು ಬೀದಿಪಾಲಾಗಿ; ಈಗ ಮಾನವ ಹಕ್ಕು ಆಯೋಗಕ್ಕೆ ಮೊರೆಯಿಟ್ಟಿರುವ ಮೂವತ್ತೈದರ ಯುವಕ ಸೋಮೇಶ್ ಈ ಪ್ರಕರಣದ ಕಥಾನಾಯಕ.



ಯಲಹಂಕ ಪೊಲೀಸರು ಹೊಡೆದ ಏಟಿಗೆ ಆತನ ಎಡಗೈ ಮೂಳೆ ಮುರಿದಿದೆ. ಬಲಗೈನ ಬೆರಳೊಂದು ಕಾಯಮ್ಮಾಗಿ ಊನಗೊಂಡಿದೆ. ತನ್ನನ್ನು ಯಾವ ಕಾರಣಕ್ಕೆ ಹೀಗೆ ಚಿತ್ರಹಿಂಸೆಗೀಡುಮಾಡಿ, ಜೈಲಿಗೆ ಹಾಕಿದರೆಂಬುದು ಇವತ್ತಿಗೂ ಆತನಿಗೆ ಅರ್ಥವಾಗಿಲ್ಲ. ಈತ ಗುಂಡ್ಲುಪೇಟೆಯ ಮಾಜಿ ಶಾಸಕಿ, ಅರಸು ಕಾಲದ ಹಿರಿಯ ಕಾಂಗ್ರೆಸ್ ನಾಯಕಿಯಾಗಿದ್ದ ದಿವಂಗತ ಕೆ.ಎಸ್. ನಾಗರತ್ನಮ್ಮನವರ ದತ್ತುಪುತ್ರ. ಈತನ ಮಾವನೇ ಜ್ಯುಡಿಷಿಯಲ್ ಹೌಸಿಂಗ್ ಸೊಸೈಟಿಯ ಸಸ್ಪೆಂಡಾದ ಸೆಕ್ರೆಟರಿ ಸುರೇಶ್‌ಕುಮಾರ್.


ಹೆಬ್ಬಾಳ-ಯಲಹಂಕ ನಡುವಿನ ಜಕ್ಕೂರು ಏರೋಡ್ರಮ್ ಎದುರಿಗಿರುವ ಸರಿಸುಮಾರು ಇನ್ನೂರೆಕರೆಯ ಜ್ಯುಡಿಷಿಯಲ್ ಲೇಔಟ್ ಕರ್ಮಕಾಂಡಗಳ ಬಗ್ಗೆ ಯಾವ ಪತ್ರಿಕೆ ಹಾಸೇ ಬರೆದಿಲ್ಲ? ಅದರ ಅಧ್ಯಕ್ಷನಾಗಿದ್ದು ಆ ಕಾಲದಿಂದಲೂ ಮುಕ್ಕುತ್ತಲೇ ಬಂದವನು ಕೋರ್ಟ್‌ನ ನಿವೃತ್ತ ಅಧಿಕಾರಿ ಸಿ. ಶಿವಲಿಂಗಯ್ಯ. ನಿನ್ನೆಮೊನ್ನೆಯ ತನಕ ಇದಕ್ಕೆ ಸೆಕ್ರೆಟರಿಯಾಗಿದ್ದು ಹೊಡೆದ ಕೊಳ್ಳೆಯ ಹಂಚಿಕೆಯಲ್ಲಿ ಅಧ್ಯಕ್ಷನೊಡನೆ ಕಿತ್ತಾಡಿಕೊಂಡು ಸಸ್ಪೆಂಡಾದ ಸುರೇಶ್‌ಕುಮಾರ್ ಇವತ್ತು ಸರಿಸುಮಾರು ಮುನ್ನೂರು ಕೋಟಿಗಳ ಆಸ್ತಿವಂತ. ಸರ್ಕಾರಿ ನೌಕರರ ಸಂಘದ ಮಾಜಿ ಅಧ್ಯಕ್ಷ ಸಿಪ್ಪೇಗೌಡ ಇದಕ್ಕೆ ಒನ್ ಆಫ್ ದಿ ಡೈರೆಕ್ಟರ್ಸ್, ಉಪಾಧ್ಯಕ್ಷ ರುದ್ರಯ್ಯ, ಖಜಾಂಚಿ ರಾಮಕೃಷ್ಣ ಇತರೇ ಡೈರೆಕ್ಟರ್‌ಗಳಾದ ಸಿ.ಎಂ. ಬಸವಾರ್ಯ, ಕೆಂಪ

ಕೊಟ್ಟು ಖಂಡ-ಮಾಂಸವನ್ನೆಲ್ಲ ಈ ಶಿವಲಿಂಗಯ್ಯ ಮತ್ತು ಸುರೇಶ್‌ಕುಮಾರ್ ಜಂಟಿಯಾಗಿ ನುಂಗಿಬಿಟ್ಟರು. ಹಾಗೆ ದೋಚಿದ ದುಡ್ಡಲ್ಲಿ ಯಾವುದೋ ಕಾಲಕ್ಕೆ ಇಬ್ಬರೂ ಸೇರಿಕೊಂಡೇ ಹೆಬ್ಬಾಳ ರಿಂಗ್‌ರಸ್ತೆ ಸಮೀಪ ಎಂಬತ್ನಾಲ್ಕು ಎಕರೆ ಜಮೀನು ಖರೀದಿಸಿ ಇಟ್ಟಿದ್ದರಲ್ಲ; ಅದೀಗ ಕಮ್ಮಿಯೆಂದರೂ ಐನೂರು ಕೋಟಿಯ ಸೊತ್ತು. ಏನಾದರೂ ಮಾಡಿ ಅದನ್ನು ಮಾರಬೇಕೆಂದರೆ ಅದರ ಮೂಲ ದಾಖಲೆ ಪತ್ರಗಳನ್ನೆಲ್ಲ ಸೆಕ್ರೆಟರಿ ಸುರೇಶ್‌ಕುಮಾರ್ ಮಂಡ್ಯದ ಜ್ಯೋತಿಷಿ ಕಲ್ಲಹಳ್ಳಿ ಶ್ರೀಧರ ಜೋಯಿಸನ ಬಳಿ ಇಟ್ಟಿದ್ದಾನೆ ಮತ್ತು ಅದರ ವಶಕ್ಕಾಗಿ ಅಧ್ಯಕ್ಷ ಶಿವಲಿಂಗಯ್ಯ ಪೊಲೀಸರನ್ನು ಛೂ ಬಿಟ್ಟಿದ್ದಾನೆ. ಇಬ್ಬರು ಕಳ್ಳರ ಈ ಹಣಾಹಣಿಗೆ ಬಲಿಯಾದವನು ಸೋಮೇಶ್.

ಈತ ಸೆಕ್ರೆಟರಿ ಸುರೇಶ್ ಕುಮಾರನ ಎರಡನೇ ಮಗಳು ನೇತ್ರಾ ಎಂಬಾಕೆಯ ಗಂಡ. ಇಲ್ಲಿಗೆ ವರ್ಷದ ಹಿಂದೆ ಕಾರ್ಡ್ ರಸ್ತೆಯ ಗೌರಿಶಂಕರ ಮಹಲ್‌ನಲ್ಲಿ ನಡೆದ ಮದುವೆಗೆ ಅನೇಕ ಜಡ್ಜುಗಳು ಬಂದು ಆಶೀರ್ವದಿಸಿದ್ದರು. ಮದುವೆ ಆದ ನಂತರ ಸೋಮೇಶನಿಗೆ ಮಾವ ಸುರೇಶ್ ಕುಮಾರ್ "ಹೇಗೂ ಯಲಹಂಕದ ಜ್ಯುಡಿಷಿಯಲ್ ಲೇಔಟಿನಲ್ಲಿ ಇನ್ನೂ ಬಿಕರಿಯಾಗದೇ ಉಳಿದ ಅರವತ್ತು ಸೈಟುಗಳಿವೆ, ಆ ಪೈಕಿ ಒಂದಷ್ಟನ್ನು ನೀನೇ ಕೊಂಡು ಅದನ್ನು ದುಬಾರಿಗೆ ಮಾರಿಕೊ" ಎಂದು ಹೇಳಿದ. ತನ್ನ ಬೆಂಗಳೂರಿನ ಆಸ್ತಿಯನ್ನೆಲ್ಲ ಮೂರು ಕೋಟಿಗೆ ಮಾರಿ ಸೋಮೇಶ್ 2006 ರ ಮಾರ್ಚ್‌ನಲ್ಲಿ ಜ್ಯುಡಿಷಿಯಲ್ ಸೊಸೈಟಿಯ ಒಟ್ಟೂ ಹದಿನಾಲ್ಕು ಸೈಟುಗಳನ್ನು ಖರೀದಿಸಿದ. ಈ ಪೈಕಿ ಆರು ಸೈಟನ್ನು ಅಧ್ಯಕ್ಷ ಶಿವಲಿಂಗಯ್ಯನೇ ನಿಂತು ರಿಜಿಸ್ಟರ್ ಮಾಡಿಕೊಟ್ಟರೆ, ಉಳಿದ ಆರನ್ನು ಸೆಕ್ರೆಟರಿ ಸುರೇಶ್‌ಕುಮಾರ್ ರಿಜಿಸ್ಟರ್ ಮಾಡಿಕೊಟ್ಟ. ಉಳಿದ ಎಂಟು ಸೈಟನ್ನು ಈಗಾಗಲೇ ಖರೀದಿಸಿದವರಿಂದ ಸೋಮೇಶ್ ತನ್ನ ಹೆಸರಿಗೆ ಮಾಡಿಕೊಂಡ.

ತನ್ನ ಪಿತ್ರಾರ್ಜಿತ ಆಸ್ತಿ ಮಾರಿದ್ದರಿಂದ ಮೂರು ಕೋಟಿ ಪೂರ್ತಿ ಸೋಮೇಶ್ ಜ್ಯುಡಿಷಿಯಲ್ ಸೊಸೈಟಿಯ ಸೈಟುಗಳ ಮೇಲೆ ಹಾಕಿದ್ದ.

ಆದರೆ ಆತನಿಗೆ ಗೊತ್ತಿಲ್ಲದ ಸಂಗತಿಯೆಂದರೆ; ಅಧ್ಯಕ್ಷ ಶಿವಲಿಂಗಯ್ಯ ಮತ್ತು ಸೆಕ್ರೆಟರಿ ಸುರೇಶ್ ಕುಮಾರ್ ನಡುವೆ ನಿಗೂಢ ಲ್ಯಾಂಡ್ ಡೀಲ್ ಒಂದು ನಡೆದಿತ್ತು.



ಸೆಕ್ರೆಟರಿ ಸುರೇಶ್ ಕುಮಾರ್ ಮತ್ತು ಅಧ್ಯಕ್ಷ ಶಿವಲಿಂಗಯ್ಯ

ಜ್ಯುಡಿಷಿಯಲ್ ಸೊಸೈಟಿಯನ್ನು ದೋಚಿದ ದುಡ್ಡಲ್ಲಿ ಇಬ್ಬರೂ ರಹಸ್ಯವಾಗಿ ಖರೀದಿಸಿಟ್ಟಿದ್ದ 84 ಎಕರೆ ಭೂಮಿಯನ್ನು ಮಾರಿಬಿಡುವುದು ಶಿವಲಿಂಗಯ್ಯನ ಪ್ಲಾನಾಗಿತ್ತಾದರೂ ಅದು ಸುರೇಶ್ ಕುಮಾರ್‌ಗೆ ಇಷ್ಟವಿರಲಿಲ್ಲ. ನಂಬಿಕೆಯ ಮೇರೆಗೆ ಮೂಲ ದಾಖಲೆಪತ್ರಗಳನ್ನೆಲ್ಲ ಸುರೇಶ್‌ಕುಮಾರ್‌ನೇ ಇಟ್ಟುಕೊಂಡಿದ್ದು; ಏನಾದರೂ ಇನ್‌ಕಂಟ್ಯಾಕ್ಸ್ ದಾಳಿಯಾದರೆ ಸೇಫಾಗಿ ಇರಲಿ ಎಂದು ಅದನ್ನು ಕಲ್ಲಳ್ಳಿ ಶ್ರೀಧರ ಜೋಯಿಸನ ಬಳಿ ಕೊಟ್ಟಿದ್ದ. ಬಹುಶಃ ಅಳಿಯನಿಗೆ ಸೊಸೈಟಿಯ ಹನ್ನೆರಡು ಸೈಟು ಕೊಟ್ಟ ಮೇಲಾದರೂ ಸುರೇಶ್‌ಕುಮಾರ್ ಮೆತ್ತಗಾಗಿ ಆ 84 ಎಕರೆ ಮಾರಲು ಒಪ್ಪಬಹುದೆಂಬುದು ಶಿವಲಿಂಗಯ್ಯನ ನಿರೀಕ್ಷೆಯಾಗಿತ್ತು.

ಅಳಿಯನಿಗೆ ಸೈಟು ರಿಜಿಸ್ಟರ್ ಆದ ನಂತರ 84 ಎಕರೆಗೆ ಸಂಬಂಧಪಟ್ಟ ದಾಖಲೆಗಳನ್ನು ತಂದುಕೊಡುತ್ತೇನೆಂದು ಸುರೇಶ್‌ಕುಮಾರ್ ಮಾತು ಕೊಟ್ಟಿರಬೇಕು. ಆದರೆ ಯಾವತ್ತು ಆತ ಮೂಲ ದಾಖಲೆಗಳನ್ನು ತಂದೊಪ್ಪಿಸಲಿಲ್ಲವೋ ಕುದ್ದುಹೋದ ಶಿವಲಿಂಗಯ್ಯ ಸೊಸೈಟಿಯ ಮತ್ತೊಬ್ಬ ಡೈರೆಕ್ಟರ್ ಸಿಪ್ಪೇಗೌಡನನ್ನು ಛೂಬಿಟ್ಟ. ಪ್ರಳಯಾಂತಕ ಸಿಪ್ಪೇಗೌಡ ಹೇಳಿಕೇಳಿ ಡೀಲು ನಿಸ್ಸೀಮ. 2006 ರ ಮಾರ್ಚ್ ಎಂಟರ ಬೆಳಿಗ್ಗೆ ಮಾವ, ಅಳಿಯರನ್ನು ತನ್ನ ಮನೆಗೆ ಕರೆಸಿದ ಸಿಪ್ಪೇಗೌಡ 'ಅಲ್ರೀ,

ಅಳಿಯನಿಗೆ ಹನ್ನೆರಡು ಸೈಟು ಮಾರಿದ್ದೀರಲ್ಲೀ. ಬೆಳಿಗ್ಗೆ ಒಳಗೆ ನನಗೆ ಎಂಬತ್ತೈದು ಲಕ್ಷ ತಂದುಕೊ ಇಲ್ಲಾಂದ್ರೆ ನಡೆಯೋದೆ ಬೇರೆ' ಎಂದು ಹೂಂಕರಿ

ಏನೇ ಯಡವಟ್ಟಾದರೂ ತನ್ನ ಮೂರು ಕೋ ವಕ್ರ ಎಂಬ ಭೀತಿಗೆ ಬಿದ್ದ ಸೋಮೇಶ್ ತನ್ನ ಒ ಸೈಟನ್ನು ಗಾಯಕಿ ರತ್ನಮಾಲಾ ಪ್ರಕಾಶ್‌ರವರ ಕಾರ್ತಿಕ್ ಕೌಶಿಕ್‌ಗೆ 27 ಲಕ್ಷಕ್ಕೂ, ಮತ್ತೊಂ ಐತಾಳ್ ಎಂಬಾತನಿಗೂ ಮಾರಿ ಒಟ್ಟೂ ನಲವ ಲಕ್ಷ ಜೊತೆ ಮಾಡಿ ಅದನ್ನು ಸಿಪ್ಪೇಗೌಡನ ಕೈ ಅದನ್ನೆಲ್ಲ ನಿಯತ್ತಾಗಿಯೇ ಪಡೆದುಕೊಂಡ ಸಿಪ್ಪೇ ತಾನು ಸುಮ್ಮನಾಗ್ತೀನಿ ಎಂದು ಮಾ ಕೊಟ್ಟಿದ್ದರೂ ಇದ್ದಕ್ಕಿದ್ದಂತೆ ಉ ಹೊಡೆದ. ಮಿಕ್ಕ ದುಡ್ಡಿಗಾಗಿ ಮ ಕಿರಿಕ್ ಮಾಡಿದ.

ಈ ಹಂತದಲ್ಲಿ ಸೋಮೇ ನೇರವಾಗಿ ಯಲಹಂಕ ಪೊಲೀಸ್ ಠಾ ಬಂದು ಮಾವ ಸುರೇಶ್‌ಕುಮ ಅಧ್ಯಕ್ಷ ಶಿವಲಿಂಗಯ್ಯ ಮತ್ತು ಸಿಪ್ಪೇ ಮೂವರನ್ನು ಸೇರಿಸಿ ಚೀಟಿ ಕಂಪ್ಲೇಂಟ್ ಕೊಟ್ಟಿದ್ದಾನೆ. ಅದಕ್ಕೆ ತ ಶಿವಲಿಂಗಯ್ಯ ಉಪಾಯ ಮಾ ಅಳಿಯನೇ ಫೋರ್ಜರಿ ಮಾಡಿದ್ದಾನ ಸೆಕ್ರೆಟರಿ ಸುರೇಶ್‌ಕುಮಾರ್ ಶಿವಲಿಂಗಯ್ಯ ಪೊಲೀಸರಿಗೆ ಬರೆಸಿಕೊ ಮರುಗಳಿಗೆಯಲ್ಲೇ ಸೆಕ್ರೆಟರಿ ಮತ್ತು ಅಳಿಯ ಸೇರಿಕೊಂಡು ನಕಲಿ ದಾ ಗಳನ್ನು ಸೃಷ್ಟಿಸಿ ಸೊಸೈಟಿಯ ಮಾರಿದ್ದಾರೆಂದು ತಾನೇ ಮತ್ತೊ ಕಂಪ್ಲೇಂಟ್ ಕೊಟ್ಟ.

ಅದು ಷಡ್ಯಂತ್ರದ ಆರಂಭ ತನ್ನನ್ನೇ ಯಾಮಾರಿಸಿ, ತನ್ನ ಅಳಿಯನ ವಿರುದ್ಧ ದೂರು ಕೊಡಿಸಿ ಕೊನೆಗೆ ತ ಅದಕ್ಕೆ ಸಿಲುಕಿಸಿದ ಶಿವಲಿಂಗಯ್ಯನ ವಿರುದ್ಧ ಸೆ ಸುರೇಶ್‌ಕುಮಾರ್ ಪೊಲೀಸ್ ಠಾಣೆಯಲ್ಲೇ ವಾಚ ಗೋಚರ ಕೂಗಾಡಿಬಿಟ್ಟ. ಆದರೆ ಸಮಯ ಮೀ ಹೋಗಿತ್ತು. ಯಲಹಂಕ ಇನ್ಸ್‌ಪೆಕ್ಟರ್ ಶ್ರೀನ ಮೂರ್ತಿ ನಿರ್ದಾಕ್ಷಿಣ್ಯವಾಗಿ ಸುರೇಶ್‌ಕುಮಾರ್ ಲಾಕಪ್ಪಿಗೆ ದಬ್ಬಿದ. ಆದರೆ ಆ ಹೊತ್ತಿಗಾಗಲೇ ಅ

ಈ ಕಲ್ಲಳ್ಳಿ ಶ್ರೀಧರ ಜೋಯಿಸ ಯಾರು

ಕಲ್ಲಹಳ್ಳಿ ಶ್ರೀಧರ ಜೋಯಿಸನೆಂದರೆ ಅದು ದೇವೇಗೌಡರ ಫ್ಯಾಮಿಲಿಯ ತಿಜೋರಿಯಿದ್ದಂತೆ ಎಂಬುದು ಇಡೀ ಮಂಡ್ಯಕ್ಕೇ ಗೊತ್ತು. ಮೂಲತಃ ಕಿರಂಗೂರಿನ ಈತ ಐದು ವರ್ಷಗಳ ಹಿಂದೆ ಕಂಡಕಂಡವರ ಮನೆಯಲ್ಲಿ ಪೂಜೆ ಮಾಡಿಕೊಂಡಿದ್ದ. ಈಗ ಕಲ್ಲಳ್ಳಿಯಲ್ಲಿ ಐವತ್ತು ಲಕ್ಷ ರೂ. ಬಂಗಲೆ ಕಟ್ಟಿಸಿದ್ದಾನೆ. ದಿನದ ಯಾವ ಹೊತ್ತಲ್ಲೂ ಈತನ ಮನೆಯಲ್ಲಿ ಕನಿಷ್ಠ ಇಪ್ಪತ್ತು ಮಂದಿ ಶ್ರೀಮಂತ ಭಕ್ತಾದಿಗಳಿರುತ್ತಾರೆ. ಇಲ್ಲಿಗೆ ಪದೇ ಪದೇ ಬರುವವರು ದೇವೇಗೌಡರ ದೊಡ್ಡ ಮಗ ಬಾಲಕೃಷ್ಣೇಗೌಡ. ಅವರ ಪತ್ನಿಗೆ ಶ್ರೀರಂಗಪಟ್ಟಣದಲ್ಲಿ ಜಮೀನು ಕೊಡಿಸಿದ್ದೂ ಈತನೇ. ಹಾಗೇ ರೇವಣ್ಣನವರ ಪತ್ನಿ ಭವಾನಿ ಕೂಡ ವಾರಕ್ಕೊಮ್ಮೆ ಬಂದು ಹೋಗುತ್ತಾರೆ.



ವೃತ್ತಿಯಲ್ಲಿ ಯಃಕಶ್ಚಿತ್ ಜ್ಯೋತಿಷಿಯಾದರೂ ಮುಖ್ಯಮಂತ್ರಿ ಕುಮಾರಸ್ವಾಮಿಯವರೇ ನಿಂತು ಈತನಿಗೆ ರಾಜ್ಯೋತ್ಸವ ಪ್ರಶಸ್ತಿ ಕೊಟ್ಟಿದ್ದಾರೆಂದರೆ ಏನರ್ಥ?

ಇಂಥವರ ಬುಟ್ಟಿಗೆ ಬಿದ್ದವಳೇ ಜ್ಯುಡಿಷಿಯ ಹೌಸಿಂಗ್ ಸೊಸೈಟಿಯ ಸೆಕ್ರೆಟರಿ ಸುರೇಶ್‌ಕುಮಾ ಪತ್ನಿ ಮಂಜುಳಾ. ಈಕೆಗೆ ವಿಪರೀತ ಇಸ್ಪೀ ಹುಚ್ಚಿದೆ. ಪಾರ್ಟಿಗೆ ಕುಂತರೆ ಒ ಏಟಿಗೆ ಒಂದು ಬಾಟಲು ಬ್ಲಾ ಡಾಗ್ ವಿಸ್ಕಿ ಖಾಲಿ ಮಾಡು ತಾ ಈಕೆಗೆ ಶ್ರೀಧರ ಜೋಯಿಸನ ಪರಿಚಯಿಸಿಕೊಟ್ಟವಳು ಮೈಸೂ ಎಂ. ವಿನೋದಾ. ಯಾವತ್ತು ಜಪ್ತಾಗುತ್ತದೆ ಎಂದು ಗೊ ಯಿತೋ ಮಂಜುಳಾಳ ಸಹೋ ರಾಜೇಶ್ ನೂರಾರು ಕೋಟಿ ಆಸ್ತಿ ಪತ್ರಗಳನ್ನೆಲ್ಲ ಶ್ರೀಧರ ಜೋ ಸನ ಮನೆಗೆ ಸಾಗಿಸಿದ್ದಾರೆ. ಬೀದಿ ಪಾಲಾದವನು ಸೋಮೆ ಮಾತ್ರ. ಆಸ್ತಿ ಮಾರಿದ ದು ಇಲ್ಲ ಕೊಂಡ ಸೈಟೂ ದಕ್ಕಿಲ್ಲ ಲಾಕಪ್ಪು ಮತ್ತು ಜೈಲಷ್ಟೇ ಆತನಿಗೆ ಬ ಲಾಭ!

ಇವರ ಮೂಲ ನಮ್ಮ ದೇಶವೇ ಕಣ್ರೀ

ಶೃಂಗೇರಿಯ ಬ್ರಾಹ್ಮಣರ ನಡುವೆ ಬ್ರಾಹ್ಮಣರಾಗಿ, ಅರ್ಥವಾಗದ ವೇದಘೋಷ ಮಂತ್ರಗಳ ಪಠನವನ್ನ ಮುದಿ ಹೋತನಂತೆ ನೋಡುತ್ತ ಕುಳಿತು, ಯಜ್ಞಯಾಗ ಪೂರೈಸಿ ಬಂದ ದೇವೇಗೌಡರು ಇದ್ದಕ್ಕಿದ್ದಂತೆ ಮೈಸೂರು ಸಭೆಯೊಂದರಲ್ಲಿ "ಆ ದೇವರು ನನ್ನನ್ನು ಇನ್ನು ಯಾಕೆ ಜೀವಂತ ಬಿಟ್ಟಿದ್ದಾನೊ" ಎಂದು ಬಿಕ್ಕಿಬಿಕ್ಕಿ ಅತ್ತರಂತಲ್ಲಾ, ಸಭಾ ಭವನದಲ್ಲಿದ್ದ ಅಮಾಯಕ ಜನ ಏನು ಮಾಡಿದರೂ ದೇವೇಗೌಡರ ಅಳುವಿಗೆ ಹಿಮ್ಮೇಳ ಸೇರಿಸಲಾಗದೆ ಮಿಕಮಿಕ ನೋಡಿದರಂತಲ್ಲಾ.

ಗೌಡರ ಅಳುವಿಗೆ ಅದೇ ಸಭೆಯ ಅನೇಕರು ಮಾಡಿದ ವ್ಯಾಖ್ಯಾನವೇನೆಂದರೆ, "ಈ ಗೌಡ ಎಮ್ಮೆಯಂತೆ ಅಳುತ್ತಾನೆಂದರೆ, ಅದೊಂದು ರೀತಿಯ ಉನ್ಮಾದದ ಬೆದೆ. ಅಂದರೆ ಸಂತೋಷ, ಹಿಗ್ಗು, ಸಂಭ್ರಮ ಇವೆಲ್ಲವೂ ಒಟ್ಟು ಸೇರಿ ಹರಿವ ಕಣ್ಣೀರು. ನಿಜಕ್ಕೂ ಆತನ ಪರಮ ಸಂತೋಷದ ಗಳಿಗೆ ಇದೇ ಇರಬೇಕು. ಒಬ್ಬ ಮಗ ಮುಖ್ಯಮಂತ್ರಿ, ಮಗದೊಬ್ಬ ಮಂತ್ರಿ, ಮತ್ತಿಬ್ಬರು ಮಕ್ಕಳು ಕೋಟ್ಯಾಧಿಪತಿಗಳು, ಹೆಣ್ಣುಮಕ್ಕಳಂತೂ ಫಲವತ್ತಾದ ನೆಲ ಖರೀದಿಸುವ ಭೂದೇವಿಯರು. ಮೊಮ್ಮಕ್ಕಳಂತೂ ಸ್ವರ್ಗದಲ್ಲಿ ತೇಲಾಡುವ ಗಂಧರ್ವರು. ಇಂತಹ ಮರಣಾನಂದದ ಸಮಯ ನೆನೆದು ದೇವೇಗೌಡ ಅಳದೆ ಇನ್ನೇನು ಮಾಡಿಯಾನು? ಅದೂ ದಡ್ಡದರಿದ್ರ ಮೀಸಲಾತಿ ಯೋಗ್ಯ ಜನರೆದುರು ನಿಂತು, ಒಳಮೀಸಲು ಪ್ರಸ್ತಾಪ ಮಾಡುತ್ತ ಒಂದೇ ಅಳುವಿನಲ್ಲಿ ಎರಡು ಕಾರ್ಯ ಸಾಧಿಸುತ್ತಾ" ಎಂದು ತರ್ಕಿಸಿಕೊಂಡು ಹೋದರಂತಲ್ಲಾ, ಥೂತ್ತೇರಿ!

* * * * * * * *

ನಮ್ಮ ಅಭಿನವ ಕೃಷ್ಣದೇವರಾಯ ಎಂ.ಪಿ. ಪ್ರಕಾಶರು, ಈ ಬಾರಿ ನಡೆಸಿದ ಹಂಪಿ ಉತ್ಸವಕ್ಕೆ ಶಾನೆ ರಂಗು ತಂದಿದ್ದರಂತಲ್ಲಾ, ನಾಗಮಂಗಲದ ನಂಗಾನಾಚನ್ನು ಮೀರಿಸುವಂತಿದ್ದ ಆ ಮಹಿಳೆಯ ನೃತ್ಯ ನೋಡುತ್ತಿರಬೇಕಾದರೆ, ಕನ್ನಡ ಕಲಾರಸಿಕರು ಮತ್ತೊಮ್ಮೆ ಜ್ಯೋತಿಲಕ್ಷ್ಮಿ, ಜಯಮಾಲಿನಿಯನ್ನು ನೆನೆಸಿಕೊಂಡು ರೋಮಾಂಚಿತರಾದರಂತಲ್ಲಾ.

ಹಸುವಿನಂತಹ ಹೆಂಗಸೊಂದು ಸಡಿಲವಾಗಿ ಕಟ್ಟಿದ ಎದೆ, ನಿತಂಬಗಳನ್ನು ಕುಣಿಸುತ್ತಿರಬೇಕಾದರೆ, ಪ್ರಕಾಶ್ "ಇದರ ಮೂಲ ನಮ್ಮ ದೇಶವೆ. ಆಕೆಯ ಮೈಮಾಟ, ಅವಳು ನಿರೂಪಿಸುತ್ತಿರುವ ಕಾಮಕಲೆಯ ಕಡೆ ಗಮನಹರಿಸದೆ ಒಂದು ಕಲೆಯಾಗಿ ನೋಡಿ" ಎಂದು ಅಕ್ಕಪಕ್ಕದವರನ್ನು ಎಷ್ಟು ಹುರಿದುಂಬಿಸಿದರೂ, ಜನ ಜೊಲ್ಲು ಸುರಿಸಿಕೊಂಡು ಬಾಯಿ ಚಪ್ಪರಿಸಿದರಂತಲ್ಲಾ.

ಆಗ ಪ್ರಕಾಶ್ "ಎಷ್ಟೇ ಆಗಲಿ, ಈ ಭೂಮಿ ಹಾಳು ಹಂಪೆಯಾದದ್ದು ಇಂತಹ ಜನಗಳಿಂದಲೇ. ಕೃಷ್ಣದೇವರಾಯನ ಸೈನಿಕರೆಲ್ಲಾ ವ್ಯಭಿಚಾರಿಗಳಾಗಿದ್ದರು, ಯುದ್ಧಕ್ಕಿಂತ ಅವರಿಗೆ ಸೂಳೆಗಾರಿಕೆಯೇ ಪ್ರಧಾನವಾಗಿದ್ದರಿಂದ ಸೋತು ಹೋದರು. ಅದರ ವಾಸನೆ ಇನ್ನು ಈ ನೆಲದಲ್ಲಿರುವುದರಿಂದಲೇ ಈ ನರ್ತಕಿಯ ಅಪೂರ್ವ ನರ್ತನ ನೋಡುವುದನ್ನು ಬಿಟ್ಟು ನಿತಂಬ ನೋಡುತ್ತಿದ್ದಾರೆ" ಎಂದು ಕಲಾ ವಿಮರ್ಶೆಗೆ ತೊಡಗಿದಾಗ, ಪಕ್ಕದಲ್ಲೇ ಇದ್ದ ಪತ್ನಿ ರುದ್ರಾಂಬ ಮುಖ ಸಿಂಡರಿಸಿಕೊಂಡು ಪ್ರಕಾಶರನ್ನೇ ನೋಡಿದರಂತಲ್ಲಾ, ಥೂತ್ತೇರಿ!



* * * * * * * *

ಕಾಂಗ್ರೆಸ್ ತೊರೆದು ದೇವೇಗೌಡರ ದಳದ ಬಾಗಿಲ ಬಳಿ ಹೋಗಿ ಶಿವರಾಮೇಗೌಡ ನಿಂತಿದ್ದಾರೆ ಎಂಬ ಸುದ್ದಿ ನಮಗೆ ಕುತೂಹಲಕಾರಿಯಾಗಿ ಕಂಡು, ಈ ಬಗ್ಗೆ ಅವರಿವರನ್ನು ಕೇಳುವುದಕ್ಕಿಂತ, ಅವರನ್ನೇ ಕೇಳಿದರೆ ಹೇಗೆ ಅನ್ನಿಸಿ ಫೋನ್ ಮಾಡಿದರೆ ಸಿಕ್ಕೇಬಿಟ್ಟರು.

"ಹಲೋ, ಶಿವರಾಮೇಗೌಡರ?"

"ಹೌದು, ತಾವ್ಯಾರು?

"ನಾನು ಸಾರ್ ಯಾಹೂ, ಈ ಹಿಂದೆ ಮಾತಾಡಿಸಿದ್ದೆ."



"ಓಹೊಹೊ ಪತ್ರಕರ್ತರು, ಏನ್ಹೇಳಿ?"

"ನೀವು ದೇವೇಗೌಡ್ರ ದಳಕ್ಹೋಯ್ತಿರಂತಲ್ಲಾ, ಸಾರ್?"

"ಯಾವ ಬೋಳಿಮಗನ್ರಿ ಅಂಗಂದೋನು?"

"ಯಾರೋ ಅಂಗಂತ ಮಾತಾಡತಿದ್ರು, ಅದ್ಕೆ ಕೇಳಿದೆ."

"ಅಲ್ಲಾ ಕಂಡ್ರೀ, ಇದಕೆ ನಿಮ್ಮನ್ನ ದಡ್ಡ ಪತ್ರಕರ್ತರು ಅನ್ನದು. ನಾವು ಸುಮ್ಮನಿದ್ದಿವಿ ಅಂತ ಏನೇನೊ ಬರಕೊಂಡೋಯ್ತಿರಲ್ರಿ? ನಾನಂತು ನೀವೇನು ಬರುದ್ರು ಓದಕ್ಹೋಗದಿಲ್ಲ, ಫೊಟಾ ಏನಾರ ಹಾಕಿದ್ರೆ ಫೋಟಾ ನೋಡಿ ಸುಮ್ಮನಾಯ್ತಿನಿ."

"ಅಂಗಂದ್ರೆ ದಳಕೋಗದು ಸುಳ್ಳು ಅನ್ನಿ?"

"ಅಲ್ಲಾ ಕಂಡ್ರಿ, ಆ ಗಾರೆ ಚೆಲುವ ಈಗಾಗ್ಲೆ ಸೋತು ಹೋಗ್ಯವ್ರನೆ. ಅಂತಾದ್ರಲ್ಲಿ ನಾನ್ಯಾಕೆ ಕಾಂಗ್ರೆಸ್ ಬುಡ್ಲಿ?"

"ಗಾರೆ ಚಲುವ ಯಾರು ಸಾರ್?"

"ಇನ್ಯಾರ್ರೀ? ಆ ಚಲುವರಾಯಸ್ವಾಮಿನೇ ಗಾರೆ ಚಲುವ ಅಂತಿವಿ."

"ಅದ್ಯಾಕ್ ಸಾರ್ ಅಂಗಂತಿರಿ?"

"ಅವ್ರನು ಕಂಟ್ರಾಕ್ಸ್ ಮಾಡುಸ್ತಿದ್ದ. ಅದು ಕಳಪೆ ಕಾಮಗಾರಿ ಕಂಟ್ರಾಕ್ಟ್ರು. ಅದ್ಕೆ ಅಂಗಂತಿನಿ."

"ನಿಮ್ಮಪ್ಪನೂ ಕಂಟ್ರಾಕ್ಟ ಮಾಡುಸ್ತಿದ್ದ ಅಲವೆ?"

"ನಮ್ಮಪ್ಪ ಮಾಡಿರೊ ಸೇತುವೆ, ರಸ್ತೆ ಇನ್ನು ಚನ್ನಾಗ್ಯವೆ. ಅಂಗಾಗಿ ಅವುರನ್ನ ಗಾರೆ ರಾಮೇಗೌಡ ಅನ್ನಕ್ಯಾಗದಿಲ್ಲ."

"ಅಂಗಾದ್ರೆ, ಗಾರೆ ಚೆಲುವ ಸೋಲ್ತನೆ ಅನ್ನಿ?"

"ಸೋಲದೇನು? ಸೋತ್ಯಾಗ್ಯದೆ. ಕುರುಬ್ರು ನಮ್ಮ ಕಡಿಕಾಗ್ಲೆ ಬಂದಾಗ್ಯದೆ. ಸಾಬರು ಬಂದು ಭಾಳದಿನಾಯ್ತು, ಗಾಣಿಗರು ಬಂದು ತಿಂಗಳಾಯ್ತು, ಒಂದನ್ನೆರಡು 'ಒಂದದಿನೆಂಟು' ಒಂದು ಮೂರು, ಎಷ್ಟಾಯ್ತು?"

"ನನಿಗೆ ಕೂಡೊ ಲೆಕ್ಕ ಬರದಿಲ್ಲ ಸಾರ್."

"ಕಳೆದ ಚುನಾವಣೆಲಿ ನಾಕು ಸವುರದಲ್ಲಿ ಗೆದ್ದಿದ್ದ ಈಗ ಹದಿನಾಕು ಸಾವುರ ನಾನೆ ಲೀಡು ಬತ್ತಿನಿ. ಅಂತದ್ರಲ್ಲಿ ನಾನ್ಯಾಕ್ರಿ ಆ ದ್ಯಾವನ ಪಾರ್ಟಿಗೋಗಿ ಸೋಲಲಿ?!"

"ದ್ಯಾವೇಗೌಡ್ರು ಕರಸಿ ಯರಡುಗಂಟೆ ಮಾತಾಡಿದರಂತೆ?"

"ಮಾತಾಡಿದ್ರು. ರೇವಣ್ಣನೂ ದಿನಾ ಫೋನು ಮಾಡ್ತನೆ. ಕುಮಾರಸ್ವಾಮಿ ನನ್ನ ಹಳೆ ದೋಸ್ತಿ, ಈ ಹಿಂದೆ ನಾನು ಸ್ಕೂಲು, ಮನೆ ಕಟ್ಟಕ್ಕೆ ಸಾಲ ಕೊಡಿಸಿದ್ದ. ಅಂಗಂದ ಮಾತ್ರಕೆ ನಾನು ಅಂಬರೀಷು, ಡಿಕೆಶಿ ಬುಟ್ಟು ದ್ಯಾವುನ ಪಾರ್ಟಿಗೊಯ್ತಿನಾ?"

"ದೇವೇಗೌಡ್ಯಾಕೆ ನಿಮ್ಮನ್ನ ದೂರ ಮಾಡಿದ್ದು?"

"ಆ ವಯ್ಯನಿಗೆ ಅವುನ ಮಕ್ಕಳಿಗಿಂತ ಯಾರೂ ಚನ್ನಾಗಿರಬಾರ್ದು, ಚೆನ್ನಾಗಿ ಮಾತಾಡಬಾರ್ದು, ಜಾಸ್ತಿ ಸಭೆ ಸಮಾರಂಭ ಮಾಡಬಾರ್ದು, ಅಂತೂ ನಾವೂ ಯಾವ ಕಾರಣಕ್ಕೂ ರೇವಣ್ಣ ಕುಮಾರಣ್ಣನ್ನ ಮೀರಿ ಹೋಗಬಾರ್ದು. ನನಿಗೆ ಈವರಿಗೂ ಯಾವ ನನ್ನ ಮಗನೂ ಹಗ್ಗ ಮೂಗುದಾರ ಹಾಕಕ್ಕೆ ಆಗಿಲ್ಲ. ಅಂತಾದ್ರಲ್ಲಿ ಈ ದೇವೇಗೌಡರಿಗೆ ಕೇರ್ ಮಾಡ್ತಿನಾ? ಅದ್ಕೆ ನಾನು ಹೋಗಿ ಪಟೇಲ್ರತ್ರ ಸೇರಿಕೊಂಡು ಬಿಡಿಎ ಚೇರ್ಮನ್ನಾದೆ, ಬೆಳೆದೆ."

"ನಿನ್ನತ್ರ ದುಡ್ಡಿಲ್ಲ ಅಂತರಲ್ಲಾ?"

"ಯಾವ ತಿರುಪೆ ನನ್ನ ಮಗ ಅಂಗಂದೋನು? ಕೋಟ್ಯಂತರರೂಪಾಯಿ ಮನೆ ಕಟ್ಟುಸ್ತಾಯಿದ್ದಿನಿ. ಕೋಟ್ಯಂತರರೂಪಾಯಿ ಸ್ಕೂಲ್ ಕಟ್ಟುಸ್ತಾಯಿದ್ದಿನಿ. ಪಾರಿನ್ನಿಗೋಗಿ ಬರ್ತಡೇ ಮಾಡಿಕೊಳ್ತಾಯಿದ್ದಿನಿ. ನನ್ನತ್ರ ದುಡ್ಡಿಲ್ಲ ಅಂದೋರ ಕಳಿಸಿಕೊಡು ಒಂದು ನೂರುಪಾಯಿ ಕೊಟ್ಟು ಕಳುಸ್ತೀನಿ!"

"ಥೂ, ಥೂ, ಥೂತ್ತೇರಿ!!!"

-ಯಾಹೂ


ಸೋಮೇಶ್ ಮನೆ ಸೇರಿಕೊಂಡಿದ್ದ. ಏನೋ ಯಡವಟ್ಟಾಗಿದೆ ಅನ್ನಿಸಿ ತನ್ನ ಸಂಬಂಧಿಕ ರಾಜಕಾರಣಿಗಳಿಗೆಲ್ಲ ದುಂಬಾಲು ಬೀಳುತ್ತಿದ್ದ. ಮಾವ ಸುರೇಶ್‌ಗೆ ಆವತ್ತೇ ಜಾಮೀನು ಸಿಕ್ಕಿತಾದರೂ ಪ್ರಕರಣ ಇಷ್ಟಕ್ಕೇ ಮುಗಿಯಲಿಲ್ಲ.

ಅದೇ ಹೊತ್ತಿಗೆ ಯಾವುದೋ ಲ್ಯಾಂಡ್ ಡೀಲಿನಲ್ಲಿ ಯಲಹಂಕ ಇನ್ಸ್‌ಪೆಕ್ಟರ್ ಶ್ರೀನಿವಾಸಮೂರ್ತಿ ಸಸ್ಪೆಂಡಾಗಿ ಆ ಜಾಗಕ್ಕೆ ಮಾರುತಿ ಗಾಂವ್ಕರ್ ಬಂದರು. ಅಷ್ಟೊತ್ತಿಗೆ ಎಸಿಪಿ ಗಣೇಶಪ್ಪನಿಗೂ ಸೈಟು ಆಸೆ ಹುಟ್ಟಿಸಿ ಶಿವಲಿಂಗಯ್ಯ ಆತನನ್ನು ಬುಟ್ಟಿಗೆ ಹಾಕಿಕೊಂಡಿದ್ದ.

ಈ ಮಧ್ಯೆ ಸೋಮೇಶ್‌ನಿಂದ ಸೈಟು ಖರೀದಿಸಿದ್ದ ಗಾಯಕಿ ರತ್ನಮಾಲಾ ಪ್ರಕಾಶರ ಮಗ ಕೌಶಿಕ್‌ನನ್ನು ಶಿವ್ವೇಗೌಡನೇ ಎತ್ತಿಕಟ್ಟಿ 'ನೀನು ಕೊಂಡದ್ದು ನಕಲಿ ಸೈಟು' ಎಂದು ಛೂಬಿಟ್ಟ. ಕೌಶಿಕ್ ಯಲಹಂಕ ಠಾಣೆಗೆ ಬಂದು ಮಾವ ಮತ್ತು ಅಳಿಯರ ವಿರುದ್ಧ ಮತ್ತೊಂದು ದೂರು ಕೊಟ್ಟ. ಹಾಗೇ ಸೋಮೇಶ್‌ನಿಂದ ಸೈಟು ಖರೀದಿಸಿದ್ದ ಐತಾಳ್ ಕೂಡ ಗಾಬರಿ ಬಿದ್ದು ಮತ್ತೊಂದು ದೂರು ಕೊಟ್ಟ.

ಎರಡೂ ಕೇಸಿನಲ್ಲಿ ಮಾವ-ಅಳಿಯರನ್ನೇ ಫಿಕ್ಸ್ ಮಾಡಿದ ಎಸಿಪಿ ಗಣೇಶಪ್ಪನಿಗೆ ಸತ್ಯ ಗೊತ್ತಿತ್ತು. ಹಾಗಿದ್ದೂ ಶಿವಲಿಂಗಯ್ಯನ ಆಮಿಷಕ್ಕೆ ಬಿದ್ದು ಕನಿಷ್ಠ ಒಂದೆರಡು ಸೈಟನ್ನಾದರೂ ತಾನು ಗುಂಜಿಕೊಳ್ಳುವುದು ಆತನ ಹುನ್ನಾರವಾಗಿತ್ತು. ಇಲ್ಲವೆಂದರೆ ಶಿವಲಿಂಗಯ್ಯನನ್ನೂ ಕೇಸಿಗೆ ಸೇರಿಸಬೇಕಿತ್ತು. ಆದರೆ ಎಫ್‌ಐಆರ್‌ನಿಂದ ಆತನ ಹೆಸರನ್ನು ಪೊಲೀಸರು ಕೈಬಿಟ್ಟಿದ್ದರು. ಆನಂತರ ನಡೆದದ್ದು ಭಯಾನಕವಾಗಿತ್ತು.

ಸೆಪ್ಟೆಂಬರ್ ಒಂಬತ್ತರಂದು ಅಳಿಯ ಸೋಮೇಶನನ್ನು ಆತನ ಮನೆಯಿಂದಲೇ ಹೊತ್ತೊಯ್ದ ಮಾರುತಿ ಗಾಂವ್ಕರ್ ಆತನನ್ನು ತಂದು ಎಸಿಪಿ ಗಣೇಶಪ್ಪನ ಮುಂದೆ ನಿಲ್ಲಿಸಿದ್ದಾರೆ. ಅಲ್ಲಿಂದ ಯಲಹಂಕದ ಲಾಕಪ್ಪಿನಲ್ಲಿ ನಾಲ್ಕು ದಿನಗಳ ಕಾಲ ಚಿತ್ರಹಿಂಸೆಗೀಡು ಮಾಡಿದ್ದಾರೆ. ಪೊಲೀಸರು ಹೊಡೆದ ಏಟಿಗೆ ಆತನ ಎಡಗೈ ಮೂಳೆ ಮುರಿದಿದೆ.



ಶಿವ್ವೇಗೌಡ

ಒಂದು ದಿನ ಎಸಿಪಿ ಗಣೇಶಪ್ಪನೇ ಬಂದು 'ಸುಮ್ನೆ ಯಾಕೆ ಒದೆ ತಿಂದು ಹಾಳಾಗ್ತೀಯ? ನಾನು ಹೇಳಿದವರಿಗೆ ಆ ಹನ್ನೆರಡೂ ಸೈಟುಗಳನ್ನು ರಿಜಿಸ್ಟರ್ ಮಾಡಿಸಿಕೊಡು, ನಿನ್ನನ್ನು ಬಿಟ್ಟುಬಿಡ್ತೀನಿ' ಎಂದು ಹೇಳಿದ. ಪ್ರಾಣ ಹೋದರೂ ಸಹಿ ಹಾಕೋಲ್ಲ ಎಂದು ಸೋಮೇಶ್ ಪಟ್ಟುಹಿಡಿದ. ಬಹುಶಃ ಮೊದಲು ಅಳಿಯನ ಸೈಟುಗಳನ್ನು ಪೊಲೀಸರಿಗೆ ಕಿತ್ತುಕೊಟ್ಟು ಅದಕ್ಕೆ ಪ್ರತಿಫಲವಾಗಿ ತನ್ನ ಪಾರ್ಟನರ್ ಸುರೇಶ್‌ಕುಮಾರ್ ಬಚ್ಚಿಟ್ಟಿದ್ದ 84 ಎಕರೆ ಜಮೀನಿನ ಪತ್ರವನ್ನು ಪೊಲೀಸರಿಂದಲೇ ಕಿತ್ತುಕೊಳ್ಳುವುದು ಅಧ್ಯಕ್ಷ ಶಿವಲಿಂಗಯ್ಯನ ಹುನ್ನಾರವಾಗಿತ್ತೇನೊ.

ಯಾವತ್ತು ಸೋಮೇಶ್ ಸಹಿ ಹಾಕಲು ಒಪ್ಪಲಿಲ್ಲವೋ ಪೊಲೀಸರು ಮಾವ ಸುರೇಶ್ ಕುಮಾರ್‌ನನ್ನು ಠಾಣೆಗೆ ಎಳೆದು ತಂದಿದ್ದಾರೆ. ಆತನನ್ನು ಜಗ್ಗಿಸಲೆಂದು ಆತನ ಕಣ್ಣೆದುರೇ ಅಳಿಯನಿಗೆ ಏರೋಪ್ಲೇನ್ ಹತ್ತಿಸಿದ್ದಾರೆ. ಕೊನೆಗೆ ಮಾವ ಸುರೇಶ್‌ಕುಮಾರ್‌ನ ಬಟ್ಟೆ ಬಿಚ್ಚಿಸಿ ಲಾಕಪ್ಪಿಗೆ ಹಾಕಿ ರುಬ್ಬಿದ್ದಾರೆ. ಎಸಿಪಿ ಗಣೇಶಪ್ಪ ಕೇಳುತ್ತಿದ್ದದ್ದು ಒಂದೇ ಪ್ರಶ್ನೆ. ಆ ಎಂಬತ್ನಾಲ್ಕು ಎಕರೆಯ ಡಾಕ್ಯುಮೆಂಟ್ಸ್ ಎಲ್ಲಿಟ್ಟಿದ್ದೀಯಾ?

ಪೊಲೀಸರು ಮತ್ತು ಶಿವಲಿಂಗಯ್ಯ ಸೇರಿಕೊಂಡು ಎಂಥಾ ಷಡ್ಯಂತ್ರ ರಚಿಸಿದ್ದಾರೆಂಬ ಸತ್ಯ ಗೊತ್ತಾದದ್ದೇ ಆವಾಗ.

ಆ ಹೊತ್ತಿಗೆ ಅಳಿಯ ಲಾಕಪ್ಪಿಗೆ ಸೇರಿ ಹದಿನಾಲ್ಕು ದಿನವಾಗಿದ್ದರೆ ಮಾವ ಬಂಧಿತನಾಗಿ ನಾಲ್ಕು ದಿನವಾಗಿತ್ತು. ಅಳಿಯ ಮತ್ತು ಮಾವ ಇಬ್ಬರ ಮನೆಯನ್ನು ಪೊಲೀಸರು ಇಂಚಿಂಚು ಬಿಡದೇ ಹುಡುಕಾಡಿದ್ದರು. ಕೊನೆಗೆ ಮಾವನನ್ನೇ ಏರೋಪ್ಲೇನೆತ್ತಲು ಎಸಿಪಿ ಗಣೇಶಪ್ಪ ತಯಾರಿ ನಡೆಸುತ್ತಿದ್ದಂತೆ ಸುರೇಶ್‌ಕುಮಾರ್ ಬಾಯಿಬಿಟ್ಟ. "ಎಲ್ಲಾ ದಾಖಲೆಗಳನ್ನೂ ಮಂಡ್ಯದ ಕಲ್ಲಳ್ಳಿ ಶ್ರೀಧರ ಜೋಯಿಸರ ಬಳಿ ಕೊಟ್ಟು ಮಡಗಿದ್ದೇನೆ" ಎಂದುಬಿಟ್ಟ.

ಹೇಳಿದ್ದೇ ತಡ ಯಲಹಂಕ ಪೊಲೀಸರ ತಂಡ ಮಂಡ್ಯದ ಕಲ್ಲಹಳ್ಳಿಯ ಜ್ಯೋತಿಷಿ ಶ್ರೀಧರ ಜೋಯಿಸನ ಮನೆಗೆ ನುಗ್ಗಿದೆ. ಆತನನ್ನು ಜೀಪಿಗೆ ಹಾಕಿಕೊಂಡಿದ್ದೇ ಇನ್ನೇನು ಮಂಡ್ಯ ದಾಟಬೇಕೆನ್ನುವಷ್ಟರಲ್ಲಿ ಇನ್ಸ್‌ಪೆಕ್ಟರ್ ಮಾರುತಿ ಗಾಂವ್ಕರ್‌ಗೆ ಮಂತ್ರಿ ರೇವಣ್ಣನವರ ಕಡೆಯಿಂದ ಫೋನ್ ಬಂದಿದೆ. ಸಾಲದ್ದಕ್ಕೆ ಮುಖ್ಯಮಂತ್ರಿ ಕುಮಾರಸ್ವಾಮಿಯೇ ಎಸಿಪಿ ಗಣೇಶಪ್ಪನನ್ನು ತರಾಟೆಗೆ ತೆಗೆದುಕೊಂಡಿದ್ದಾರೆ. ಮಂಡ್ಯ ದಾಟುತ್ತಿದ್ದ ಪೊಲೀಸ್ ಜೀಪು ಮತ್ತೆ ಕಲ್ಲಹಳ್ಳಿಗೆ ಬಂದು ಶ್ರೀಧರ ಜೋಯಿಸನನ್ನು ಬಿಟ್ಟುಬಿಟ್ಟಿದೆ.


ಮರುದಿನ ಪೊಲೀಸ್ ಕಮೀಷನರ್ ಕಚೇರಿ ಆವರಣದಲ್ಲೇ ಐಪಿಎಸ್ ನಾರಾಯಣಗೌಡರು ಹಾಜರಾಗಿ ಯಲಹಂಕ ಪೊಲೀಸರನ್ನೂ, ಶ್ರೀಧರ ಜೋಯಿಸರನ್ನೂ ಒಟ್ಟಿಗೇ ಕೂರಿಸಿ ತೇಪೆ ಹಾಕಿದ್ದಾರೆ. ಹಾಗಂಥ ಮಾವ-ಅಳಿಯರನ್ನೇನು ಪೊಲೀಸರು ಬಿಡಲಿಲ್ಲ, ಇಬ್ಬರನ್ನೂ ಜೈಲಿಗೆ ಹಾಕಿದ್ದಾರೆ. ಈ ಪೈಕಿ ನಾಲ್ಕೇ ದಿನಕ್ಕೆ ಮಾವನಿಗೆ ಜಾಮೀನಾದರೆ ಅಳಿಯ ಸೋಮೇಶ್‌ಗೆ ಹದಿನೈದು ದಿನಗಳ ನಂತರ ಜಾಮೀನು ಸಿಕ್ಕಿದೆ.

ಒಂದಂತೂ ಸತ್ಯ. ಇಷ್ಟೆಲ್ಲ ನಡೆದದ್ದು 84 ಎಕರೆ ಜಮೀನಿನ ಒಡೆತನಕ್ಕಾಗಿ. ಆದರೆ ಅದರ ದಾಖಲೆಗಳಿನ್ನೂ ಕಲ್ಲಳ್ಳಿ ಶ್ರೀಧರ ಜೋಯಿಸನ ಬಳಿಯೇ ಉಳಿದುಬಿಟ್ಟಿದೆ. ಅಷ್ಟಕ್ಕೂ ಶ್ರೀಧರ ಜೋಯಿಸನನ್ನು ಬಿಡಿಸಲು ಮುಖ್ಯಮಂತ್ರಿ ಕುಮಾರಸ್ವಾಮಿ ಮತ್ತು ಅವರ ಅಣ್ಣ ರೇವಣ್ಣ ಈ ಪಾಟಿ ಬೆವರು ಸುರಿಸುತ್ತಾರೆಂದರೆ ಈ ಶ್ರೀಧರ ಜೋಯಿಸ ಯಾರು? ದೇವೇಗೌಡರ ಫ್ಯಾಮಿಲಿಯ ಅದೆಷ್ಟು ಕಪ್ಪುನಿಧಿಗೆ ಈತ ಕಾವಲುಗಾರ? ಹಾಗೇ ಜೋಯಿಸನ ರಕ್ಷಣೆಗೆ ಬಂದ ಸರ್ಕಾರ ಮಾವ-ಅಳಿಯರ ಮೇಲೆ ನಡೆದ ಪೊಲೀಸ್ ದೌರ್ಜನ್ಯಕ್ಕೆ ಏಕೆ ಮುಗುಮ್ಮಾಗಿದೆ?

ಇದರರ್ಥ ಆ ಐನೂರು ಕೋಟಿಯ ಆಸ್ತಿ ಶ್ರೀಧರ ಜೋಯಿಸನ ಮೂಲಕ ಯಾವ ದೊಡ್ಡವರ ಕೈಸೇರಿದೆ?

ಮುಂದಾಳು ನಿಂದನೆಯಲ್ಲಿ ತನ್ನ ಪಾಲಿಗಿಂತ ಹೆಚ್ಚು ಪಡೆಯುತ್ತಾನೆ, ಖ್ಯಾತಿಯಲ್ಲಿ ತನ್ನ ಪಾಲಿಗಿಂತ ಕಡಿಮೆ ಪಡೆಯುತ್ತಾನೆ-ಅರ್ನಾಲ್ಡ್

ಲಕ್ಕಿ ಗರ್ಲ್!



ಲೇ ಲೇ ಅಜ್ಜನ ಮಗಳೇ,

ಲೇ ಲೇ ನಿಜ್ಜಮ್ಮನ ಮಗಳೇ sss

ನಿರ್ಮಾಪಕರನ್ನ ಕುಡು ಯಾರಿವನೆಂದು?

ರಮ್ಯಾಳ ಕುರಿತು ಗಾಂಧಿನಗರದ ದೃಷ್ಟಿಕೋನವಿದು. 'ವೆಸ್ಟ್‌ಎಂಡ್‌'ನಂತಹ ಫೈವ್‌ಸ್ಟಾರ್‌ನಲ್ಲಿ ಕುಳಿತು ಮಾತಾಡಿದರೆ ಸಿನಿಮಾ ಮಾಡೋಕಾಗುತ್ತಾ?.... ಎಂದು ಮೀಸೆ ತಿರುವುತ್ತಾರೆ ಚಿತ್ರರಂಗದ ಪುರುಷರು.

ಹೂವ ಸೊಕ್ಕಿನಿಂದ

ಮೆರದಾವೊ ನಿನ್ನಿ ಚಂದ

ಬಲ್ಲೆ ನಾ ಬಲ್ಲೆ...

ಇದು ಕಾನಿಷ್ಕಾದಲ್ಲಿ ಕುಳಿತ ಗಾಂಧಿನಗರದ ಬೃಹಸ್ಪತಿಗಳು ರಮ್ಯಾ ಕುರಿತು ಮಾಡುವ ಕಾಮೆಂಟು...

'ಅವ್ಳಿಗೆ ತುಂಬಾ ಸೊಕ್ಕು, ಮೈ ತುಂಬಾ ಕೊಬ್ಬು...'

'ಸೆಟ್‌ನಲ್ಲಿ ಯಾರೊಂದಿಗೂ ಕೋ-ಆಪರೇಟೇ ಮಾಡಲ್ಲಾರಿ...'

'ಇದು ಯಾಕೆ ಹೀಗೆ? ಅದು ಹೀಗಿರಬೇಕಿತ್ತಲ್ವಾ... ಅಂತಾ ಶುರು ಹಚ್ಚಾಳೆ ಕಿರಿಕಿರಿ. ಅಯ್ಯೋ ಆಯಮ್ಮ ಕಿರಿಕ್ ಅಂದ್ರೆ ಕಿರಿಕ್ಕೂರಿ....

'ಸೆಟ್‌ನಲ್ಲಿ ಆ ಹೀರೊಗೆ ಹೀಗಂದ್ಲಂತೆ... ಈ ಹೀರೋಗಂತೂ ಬಯ್ದೇ ಬಿಟ್ಲಂತೆ....'

ಇವು ಗಾಂಧಿನಗರದೊಳಗಿನ ಮಾತುಗಳು...

ರಮ್ಯಾ ನಿಜಕ್ಕೂ ಸೊಕ್ಕಿನ ಮುದ್ದೆಯಾ? ಕಿರಿಕ್ ಆಸಾಮಿಯಾ? ಹಣದ ಮದ ತುಂಬಿದ ಹೆಣ್ಣಾ?

ಈ ಪ್ರಶ್ನೆಗಳನ್ನಿಟ್ಟುಕೊಂಡು ಹೊರಟ 'ಲಂಕೇಶ್', ಸ್ವತಃ ರಮ್ಯಾಳೊಂದಿಗೆ, ರಮ್ಯಾ ಅಭಿನಯಿಸಿದ ಚಿತ್ರಗಳ ಕೆಲ ನಿರ್ದೇಶಕ-ನಿರ್ಮಾಪಕರೊಂದಿಗೆ, ನಟರೊಂದಿಗೆ ಮಾತಾಡಿತು.

ಹಾಗಾದರೆ ನಿಜಕ್ಕೂ ರಮ್ಯಾ ಎಂಥವಳು? ಇನ್ನೊಂದು ಕಡೆ ಅದೇ ಗಾಂಧಿನಗರವೇ ಅವಳನ್ನು 'ಲಕ್ಕಿ ಗರ್ಲ್' ಎನ್ನುತ್ತಿರುವುದೇಕೆ? ರಮ್ಯಾಳ ಈಗಿನ ಪೊಸಿಷನ್, ಮುಂದೆ ಏನಾಗಲಿದೆ? ಈ ಎಲ್ಲದರ ಕುರಿತು ಇಲ್ಲೊಂದು ವರದಿಯಿದೆ. ಓದಿದ ಮೇಲೆ ಸತ್ಯ ನಿಮಗೇ ಗೊತ್ತಾಗುತ್ತೆ.

*****

ಈಗ ಗಾಂಧಿನಗರದಲ್ಲಿ 'ಲಕ್ಕಿ ಗರ್ಲ್' ಎಂದೇ ಕರೆಸಿಕೊಳ್ಳುತ್ತಿರುವ ರಮ್ಯಾ ಸಂತೋಷದಿಂದ ಗಾಳಿಯಲ್ಲಿ ತೇಲುತ್ತಿರಬಹುದು. ಆದರೆ ಗೆಲವು ಈ ಹುಡುಗಿಯ ನೆತ್ತಿಗೇರಿಲ್ಲ, ತಲೆ ತಿರುಗಿಸಿಲ್ಲ . ಬದಲಾಗಿ ಈ ಹುಡುಗಿ ಸದಾ **grounded.** ನೆಲದ ಮೇಲೇ ನಿಂತಿದ್ದಾಳೆ ಈ ಜಾಣೆ. ಹಾಗೆ ನೋಡಿದರೆ ರಮ್ಯಾ ರಭಸದಿಂದ ಸಾಗಿದ್ದರೆ ಇಷ್ಟೊತ್ತಿಗೆ ಬರೀ 14 ಸಿನಿಮಾಗಳಲ್ಲ, 30 ಸಿನಿಮಾ ಮುಗಿಸಿರುತ್ತಿದ್ದಳು; ಮಂಜುಳಾ, ಮಾಲಾಶ್ರೀ ತರಹ ಎಲ್ಲವನ್ನೂ ರಮ್ಯಮಯ ಮಾಡಿಬಿಡುತ್ತಿದ್ದಳು. ಹಾಗಾಗಿದ್ದರೆ ಈ ಮಂಡ್ಯದ ಹುಡುಗಿ ಬಿ ಮತ್ತು ಸಿ ಗ್ರೇಡ್ ಸಿನಿಮಾಗಳಲ್ಲಿ ಕಾಣಿಸಿಕೊಂಡು ಹತ್ತರಲ್ಲಿ ಹನ್ನೊಂದಾಗಿ ಬಿಡುತ್ತಿದ್ದಳು. ಹಾಗಾಗಲಿಲ್ಲ ಎನ್ನುವುದಕ್ಕಿಂತ ಹಾಗಾಗುವುದು ರಮ್ಯಾಗೆ ಇಷ್ಟವಿಲ್ಲ.

ಹೀರೋ ಯಾರಾದ್ರೇನು?

ಬಹುಶಃ ಇತ್ತೀಚಿನ ವರ್ಷಗಳಲ್ಲಿ ಹೀರೋ ಯಾರೆಂದು ಕೇಳದೆ ಸಿನಿಮಾ ಒಪ್ಪಿಕೊಳ್ಳುವ ನಾಯಕಿ ಎಂದರೆ ಅದು ರಮ್ಯಾ. ಅಂದರೆ ರಮ್ಯಾ ಡೈರೆಕ್ಟರ್ ನೋಡಿ ಒಪ್ಪಿಕೊಳ್ತಾಳಾ?

ಇಲ್ಲ, ಈಕೆಯದೊಂದೇ ಮಂತ್ರ, ಒಂದೇ **U.S.P. (Unique selling point)!** ಅದು ಚಿತ್ರದ ಕಥೆ .

ದಿನಕರ್ ತೂಗುದೀಪ್ ಹೊಸಬ. ಆದರೂ ಚೆನ್ನಾಗಿರುವ ಚಿತ್ರಕತೆ ತಯಾರಿಸಿದ್ದ. ಅದನ್ನು ನೋಡಿದ ರಮ್ಯಾ ಹೀರೋ ಯಾರು ಎಂದು ವಿಚಾರಿಸಲಿಲ್ಲ. ಹೊಸಬ ಪ್ರೇಮ್ (ನೆನಪಿರಲಿ) ಜೊತೆ 'ಜೊತೆ ಜೊತೆಯಲಿ' ಸಾಗಿಯೇ ಬಿಟ್ಟಳು. ಮೊದಲೆರಡು ವಾರದ ಕಲೆಕ್ಷನ್ನು ನೋಡಿದ ಗಾಂಧಿನಗರ ಚಿತ್ರ ಫ್ಲಾಪ್ ಅಂದಿತು. ಆದರೆ ಪ್ರೇಕ್ಷಕ ರಮ್ಯಾಳ 'ಜೊತೆ ಜೊತೆಯಲಿ' ನಡೆದಿದ್ದ. ಚಿತ್ರವನ್ನೂ, ರಮ್ಯಾಳನ್ನೂ ಗೆಲ್ಲಿಸಿದ್ದ.

ಹೀರೋ ಯಾರು, ನಿರ್ದೇಶಕ ಯಾರು, ನಿರ್ಮಾಪಕ ಯಾರು ಎಂದೆಲ್ಲ ನೋಡದೆ ಚಿತ್ರದಲ್ಲಿ ತನಗೆಂತಹ ಪಾತ್ರವಿದೆ ಎಂದಷ್ಟೇ ನೋಡಿ ರಮ್ಯಾ ಒಪ್ಪಿಕೊಂಡಿದ್ದು ಇದೇ ಮೊದಲನೇ ಬಾರಿ ಅಲ್ಲ. ಇದಕ್ಕೆ ಉದಾಹರಣೆ 'ಎಕ್ಸ್‌ಕ್ಯೂಸ್ ಮಿ'. ಅದರ ನಿರ್ದೇಶಕ ಪ್ರೇಮ್ 'ಕರಿಯ' ಎಂಬ ಒಂದು ಚಿತ್ರ ನಿರ್ದೇಶಿಸಿ ಗೆದ್ದಿದ್ದರು. ನಿರ್ಮಾಪಕ ಎನ್.ಎಂ. ಸುರೇಶ್‌ಗೆ ಅದೇ ಮೊದಲ ಸಿನಿಮಾ ಆಗಿತ್ತು. ಇನ್ನು ಹೀರೋಗಳು? ಚೋಟು ಸುನೀಲ್, ಹೊಸಬ ಅಜಯ್! ಆದರೂ ರಮ್ಯಾ ಒಪ್ಪಿಕೊಂಡಳು. ಚಿತ್ರ ಗೆದ್ದಿತು.

ಕೊಬ್ಬಿದ್ದವಳಿಗೆ ಇದೆಲ್ಲ ಸಾಧ್ಯವಾ? ಈಗ ಗಾಂಧಿನಗರ ಅವಳನ್ನು 'ಲಕ್ಕಿ ಗರ್ಲ್' ಎನ್ನುತ್ತಿದೆ. "ಇರಬಹುದು ನಾನು ಲಕ್ಕಿ ಗರ್ಲ್. ಆದರೆ ಇಲ್ಲಿ ನನ್ನ **effort** ಕೂಡ ಇದೆ. ಚಿತ್ರ ಆಯ್ಕೆ ಮಾಡಿಕೊಳ್ಳುವ ಜಾಣ್ಮೆಯಿದೆ..." ಎಂದು ಆತ್ಮವಿಶ್ವಾಸದಿಂದ ಹುಬ್ಬು ಹಾರಿಸುತ್ತಾಳೆ ರಮ್ಯ.

ಇವಳ ಜಾಣ್ಮೆ ಡೈರೆಕ್ಟರ್ ಪ್ರೇಮ್‌ಗೇ ಕಗ್ಗಂಟಾಗಿತ್ತು. 'ಎಕ್ಸ್‌ಕ್ಯೂಸ್ ಮಿ' ಚಿತ್ರ ಮಾಡುವ ಮುನ್ನ ರಮ್ಯಾಳನ್ನು ಕಂಡ ಪ್ರೇಮ್ ಒನ್‌ಲೈನ್ ಸ್ಟೋರಿ ಹೇಳಿಹೋದರು. ಹಠಮಾರಿ ಹುಡುಗಿ ಸ್ಕ್ರಿಪ್ಟ್ ಬೇಕೇ ಬೇಕೆಂದಳು.

ಪಿ.ಕೆ. ಮಲ್ಲನಗೌಡರ್

"ಆಗಿನ್ನೂ 'ಕರಿಯ' ಅನ್ನೋ ಒಂದು ಹಿಟ್ ಚಿತ್ರ ಕೊಟ್ಟಿದ್ದರು ಪ್ರೇಮ್. ಅವರು ಕತೆ ಹೇಳಕಾಗಲ್ಲ ಅಂದ್ರೆ ಹೇಗೆ?" ಎನ್ನುವ ವಾದ ಈ ಚೆಲುವೆಯದು. 'ಕತೆ ಗೊತ್ತಿಲ್ದೆ ನಾನು ಸಿನಿಮಾ ಮಾಡಲ್ಲ' ಎಂದು ಕಡ್ಡಿ ತುಂಡು ಮಾಡಿದಂತೆ ಹೇಳಿಬಿಟ್ಟಳು. ಕೊನೆಗೆ ಪ್ರೇಮ್ ಕತೆ ಹೇಳಲೇಬೇಕಾಯ್ತು. 'ಎಕ್ಸ್‌ಕ್ಯೂಸ್ ಮಿ' ಗೆಲುವಿನಲ್ಲಿ ಪ್ರೇಮ್‌ನಷ್ಟೇ ಕ್ರೆಡಿಟ್ಟು ರಮ್ಯಾಗೂ ಬಂದಿತು. ತನ್ನ ಪಾತ್ರದ ವಿವರ, ಆಳದ ಕುರಿತು ತುಂಬ ತಲೆಕೆಡಿಸಿಕೊಳ್ಳುವ ನಟಿ ಈಕೆ ಎಂಬುದು ಗೊತ್ತಾಯಿತು....

Lot of guts!

ಹೀಗೆ ತನ್ನ ಪಾತ್ರಗಳನ್ನು ಆಯ್ಕೆ ಮಾಡುತ್ತಾ, ಗೆಲ್ಲುತ್ತಾ ಸಾಗಿದ ರಮ್ಯಾಳನ್ನು ಹಾಕಿಕೊಂಡು ಸಿನಿಮಾ ಮಾಡಲು ಆಕೆಯ ಸಂಬಂಧಿಕರು, ಅಪ್ಪನ ಹತ್ತಾರು ಫ್ರೆಂಡ್ಸ್‌ಗಳು ಮುಂದಾದರು. ಆದರೆ ಅವರ್‍ಯಾರ ಆಫರ್‌ಗಳನ್ನೂ ಒಪ್ಪಿಕೊಳ್ಳಲಿಲ್ಲ ಈ ಹುಡುಗಿ. ಕತೆ ಚೆನ್ನಾಗಿಲ್ಲವೆಂದರೆ ಮುಗೀತು, ಯಾರಾದರೇನು? ಎನ್ನುವುದು ರಮ್ಯಾ ಥಿಯರಿ.

ಈ ಕುರ್‍ಇತು ಆಕೆ ಹೇಳುತ್ತಾಳೆ ಕೇಳಿ:

"ಸ್ನೇಹಿತರು, ಸಂಬಂಧಿಕರು ಎಂಬ ಹಂಗಿಗೆ ಬಿದ್ದು ಒಪ್ಪಿಕೊಂಡರೆ ಹಾಳಾಗೋದು ನಾವು. ಆ ವಿಜಯ್ ರಾಘವೇಂದ್ರ ಯಾವ್ಯಾವುದೋ **hopeless** ಸಿನಿಮಾ ಒಪ್ಪಿಕೊಳ್ತಾನೆ. 'ಯಾಕೆ ಇಂತಹ ಸಿನಿಮಾ ಒಪ್ಪಿಗೊಂಡು ನಿನ್ನ ಕೆರಿಯರ್ ಹಾಳು ಮಾಡಿಕೊಳ್ತಾ ಇದ್ದಿಯೊ?' ಎಂದರೆ 'ನನ್ನಪ್ಪನ ಫ್ರೆಂಡು.... **obligation'** ಅಂತಾ ಹೇಳ್ತಾನೆ. 'ಹುಚ್ಚಾ, ಸಿನಿಮಾ ಫ್ಲಾಪ್ ಆದ್ರೆ ನಾಳೆ ಯಾವ ಫ್ರೆಂಡ್ರೂ, ನಿರ್ಮಾಪಕರೂ ನಿನ್ಹತ್ರ ಬರಲ್ಲ; ಅವರಿಗೆ ಗೆಲ್ಲುವ ಕುದುರೆ ಬೇಕಷ್ಟೇ. ಈ **obligation,** ಹಂಗು ಅಂತೆಲ್ಲಾ ಹೊರಟರೆ ಮೂಲೆ ಗುಂಪಾಗ್ತಿಯೊ' ಎಂದು ಬುದ್ಧಿ ಹೇಳಿದ್ದೆ. ನಾನಂತೂ ಚೆನ್ನಾಗಿಲ್ಲದ ಕತೆಗಳಿಗೆ ಮುಲಾಜಿಲ್ಲದೇ ನೋ ಅಂತಾ ಹೇಳ್ತೀನಿ. ಇದಕ್ಕೆಲ್ಲಾ **guts** ಬೇಕು **guts....**"

Bad Girl

ವಯಸ್ಸು ಮೀರಿದ ಜಾಣ್ಮೆ, ಗಾಂಧಿನಗರ ಕಂಡರಿಯದ ವೃತ್ತಿಪರತೆ ಈಕೆಯದು. ಆದರೆ ರಮ್ಯಾಳ ಈ **attitude** ಅನ್ನು ಗಾಂಧಿನಗರ ಸೊಕ್ಕು, ಕೊಬ್ಬು ಎಂದು ಕರೆದುಬಿಟ್ಟಿತು. ಅದಕ್ಕೆ 'ಡೋಂಟ್ ಕೇರ್' ಎಂದಳು ರಮ್ಯಾ.

ಅದಕ್ಕೆ ಕಾರಣಗಳು ಸೂಕ್ಷ್ಮಮತಿಗಳಿಗೆ ಅರ್ಥವಾಗುತ್ತದೆ. ಹೇಳಿಕೇಳಿ.. ಚಿತ್ರರಂಗದಲ್ಲಿ ಮಹಿಳೆಯರ ಬಗ್ಗೆ ಅಸಡ್ಡೆ, ಚಾನ್ಸ್ ಸಿಕ್ಕರೆ ಕೆಟ್ಟದಾಗಿ ಮಾತಾಡುವ ಹವ್ಯಾಸ ಅಲ್ಲಿನ ಬಹುತೇಕರದ್ದು. ಅಂತಹ ವಾತಾವರಣದಲ್ಲಿ ಹುಡುಗಿಯೊಬ್ಬಳಿಗೆ ರಕ್ಷಣೆ ಎಂಬುದಿದ್ದರೆ ಅದು ಆಕೆಯ **attitude.**

ಮತ್ತೆ ರಮ್ಯ ಹೇಳ್ತಾಳೆ ಕೇಳಿ:

"ಯಾವನೋ 'ಓ ಅವ್ಳಾ....' ಎಂದು ಕರೆಯುವಂತಾಗಬಾರದು.. ತೀರ ಸಲುಗೆಯಿಂದ ವ್ಯವಹರಿಸುವುದೂ ಪಾಪವೇ ಇಲ್ಲಿ.... ಅದಕ್ಕೇ ನಾನು ಯಾರ ಜೊತೆ ಎಷ್ಟಿರಬೇಕೋ ಅಷ್ಟೇ ಇರ್ತೀನಿ. ಕತೆಯಲ್ಲಿ ಕ್ರಿಯೆಟಿವಿಟಿ ಇಲ್ಲದಿದ್ರೆ ಪರಿಚಿತರಿಗೂ ಮಣೆ ಹಾಕಲ್ಲ. ಅಷ್ಟರಮಟ್ಟಿಗೆ ನಾನು **bad girl...** ಇದನ್ನು ಸೊಕ್ಕು, ಕೊಬ್ಬು ಅನ್ನುವುದಾದರೆ ಅಂದುಕೊಳ್ಳಲಿ... **My foot, I don't care"..:** ಇದು, ನಟಿಯರೆಂದರೆ **loose** ಆಗಿ ಮಾತಾಡುವ ಗಾಂಧಿನಗರಕ್ಕೆ 'ಛಟಾರ್' ಎಂದು ಹೊಡೆದಂತಿಲ್ಲವೆ?

ಈಗ ಗೊತ್ತಾಯ್ತಲ್ಲ, ರಮ್ಯಾ ಯಾಕೆ ಡಿಫರಂಟು ಅಂತಾ...

ಮಗುವಿನ ಮನಸು

ಸದಾ ಸಂತೋಷದಿಂದ ಇರಬೇಕು ಎನ್ನುವ **happy-go-getter** ನೇಚರಿನ ಹುಡುಗಿ ರಮ್ಯಾಳದು ಮಗುವಿನಂತಹ ಮನಸು.. 'ಅಭಿ' ಚಿತ್ರದಲ್ಲಿ ಆ್ಯಕ್ಟ್ ಮಾಡು ಎಂದು ಕಾಲ್ ಬಂದಾಗ ಆಕಾಶವೇ ಕೈಗೆಟುಕಿದಂತಾಗಿ ಅತ್ತುಬಿಟ್ಟಿದ್ದಳು ಈ ಮಿಸ್ ಸ್ಪಂದನಾ. ಅವತ್ತು ಕನ್ನಡ ಚಿತ್ರರಂಗದಲ್ಲಿ ರಮ್ಯಾ ಜನಿಸಿದ್ದಳು... ಆ ಹೊಸ ತಾರೆಗೆ ಪ್ರೇಕ್ಷಕ ಧನಾತ್ಮಕವಾಗಿಯೇ ಸ್ಪಂದಿಸಿದ್ದ. ಅಲ್ಲಿಂದ ಹೊರಟ ರಮ್ಯ ಮತ್ತೆ ಹಿಂತಿರುಗಿ ನೋಡಲೇ ಇಲ್ಲ. ಹಾಗೆಯೇ ನಿಂತಲ್ಲಿ ನಿಲ್ಲಲಿಲ್ಲ. ಈಗಾಗಲೇ ಆಕೆ ಕನ್ನಡದಲ್ಲಿ ಬೇಡಿಕೆ ಇರುವ ಎಲ್ಲಾ ನಟರೊಂದಿಗೆ- ಉಪೇಂದ್ರ, ಪುನೀತ್, ಸುದೀಪ್, ದರ್ಶನ್, ಮುರಳಿ, ಧ್ಯಾನ್, ಡಿನೋ ಮೊರಿಯಾ ನಟಿಸಿದ್ದಾಳೆ.

ಅಳೆಯಬಲ್ಲಳು ಎಲ್ಲವ

ರಮ್ಯಾಳ 14 ಚಿತ್ರಗಳಲ್ಲಿ ಮೂರು ಫ್ಲಾಪು, ಎರಡು ಎವರೇಜು.... ಉಳಿದದ್ದೆಲ್ಲ ಹಿಟ್.....

ಆದಿ, ರಂಗ ಎಸ್‌ಎಸ್‌ಎಲ್‌ಸಿ ಮತ್ತು ಜ್ಯೂಲಿ ರಮ್ಯಾಳ ಸೋತ ಚಿತ್ರಗಳು. "ಅಭಿಮಾನಿಗಳು ನನ್ನ ಜೊತೆ ಮಾತಾಡುವಾಗ ಈ ಚಿತ್ರಗಳನ್ನೂ ನೆನೆಸಿಕೊಳ್ತಾರೆ.. ಯಾಕೆ ಮಾಡಿದಳು ಈ ಚಿತ್ರದಲ್ಲಿ ಎಂದು ನನ್ನ ಪರ ಅನುಕಂಪ ತೋರಿಸ್ತಾರೆ" ಎನ್ನುವ ರಮ್ಯಾ ಸೋಲುಗಳ ಹಿಂದಿನ ಕಾರಣಗಳನ್ನು ಅಭ್ಯಸಿಸಿದ್ದಾಳೆ, ಅರ್ಥ ಮಾಡಿಕೊಂಡಿದ್ದಾಳೆ. "ಸ್ಕ್ರಿಪ್ಟ್ ನೋಡಿಯೂ ಮೂರು ಚಿತ್ರ ಫೇಲಾಯಿತಲ್ಲ, ರಮ್ಯಾಳ ಕ್ಯಾಲ್ಕುಲೇಷನ್ ತಪ್ಪಿತೆ?" ಎಂದು ಕೇಳಿದರೆ "ಸ್ವಲ್ಪ ತಪ್ಪಿರಬಹುದು ಅಷ್ಟೇ.. 'ಆದಿ' ಕತೆ ಚೆನ್ನಾಗಿತ್ತು. ಆದರೆ ನಿರ್ದೇಶಕ ರಮೇಶ್‌ಗೆ ಸರಿಯಾಗಿ ಹಣಕಾಸಿನ ಪೂರೈಕೆ ಮಾಡಲಿಲ್ಲ ನಿರ್ಮಾಪಕರು. ಇನ್ನು 'ಜ್ಯೂಲಿ' ಚಿತ್ರ ನಾನು ಒಪ್ಪಿಕೊಂಡಿದ್ದು ಪೂರ್ಣಿಮಾ ಮೋಹನ್ ಮಹಿಳೆ ಎಂಬ ಕಾರಣದಿಂದ. ಮಹಿಳೆಯರು ನಿರ್ದೇಶನಕ್ಕೆ ಇಳಿಯುವುದೇ ತೀರ ವಿರಳವಾಗಿರುವುದರಿಂದ ಅವರಿಗೆ ಸಪೋರ್ಟ್ ಮಾಡಲು ಆ ಚಿತ್ರದಲ್ಲಿ ನಟಿಸಿದೆ. ರಂಗ ಎಸ್‌ಎಸ್‌ಎಲ್‌ಸಿಯ ಕತೆ, ಚಿತ್ರಕತೆ ಸೂಪರ್ ಆಗಿತ್ತು. ನಿರ್ದೇಶಕ ಯೋಗರಾಜ್ ಭಟ್ ತುಂಬಾ ಕ್ರಿಯೆಟಿವ್... ಆದರೆ ಅವರು ತುಂಬಾ ಕಾಂಪ್ರೊಮೈಸ್ ಮಾಡಿಕೊಂಡರು. ಸುದೀಪ್‌ನ ಹೀರೋಯಿಸಂಗೆ ಅವಶ್ಯವಾದ ದೃಶ್ಯಗಳನ್ನು ಮನಸ್ಸಿಲ್ಲದ ಮನಸ್ಸಿನಿಂದ ತುರುಕಬೇಕಾಯ್ತು ಅವರು. ಅದಕ್ಕೇ ಚಿತ್ರ ನಿರೀಕ್ಷಿಸಿದಂತೆ ಬರಲಿಲ್ಲ" ಎಂದು ವಿವರಿಸುತ್ತಾಳೆ ರಮ್ಯ.

ನಟಿಯೊಬ್ಬಳು ನಿರ್ದೇಶಕರು ಎದುರಿಸುವ ಮುಲಾಜುಗಳನ್ನು, ತಮ್ಮ ಇಮೇಜನ್ನು ವೃದ್ಧಿಸಲು ಹೀರೋಗಳು ಪಾಲಿಸುವ ನೀತಿಗಳನ್ನು ವಿಮರ್ಶಿಸುವುದು ಅಪರೂಪ. ಆದರೆ ರಮ್ಯ ತನ್ನ ಚಿತ್ರಗಳನ್ನು



Humble boy ಪುನೀತ್... ಮೇಷ್ಟ್ರು ನಾಗತಿಹಳ್ಳಿ...

'ಈ ಸ್ಟೆಪ್ಸ್ ಹೇಳಿಕೊಡೊ ಪುನೀತ್' ಅಂತಾ ರಮ್ಯಾ ಕೇಳಿದರೆ, 'ಅಮ್ಮಾ ತಾಯಿ, ನಾನಿನ್ನು ಕಲೀತಾ ಇದ್ದೀನಮ್ಮಾ' ಎಂದು ಪುನೀತ್ ಹೇಳುತ್ತಿದ್ದನಂತೆ.


ಈಗ ಪುನೀತ್ ಜೊತೆ ಮೂರನೇ ಚಿತ್ರದಲ್ಲಿ ಜೋಡಿಯಾಗಿ ನಟಿಸುತ್ತಿದ್ದಾಳೆ ರಮ್ಯಾ... "ಪುನೀತ್ ತುಂಬಾ **humble, modest....** ಯೂನಿಟ್‌ನ ಎಲ್ಲರೊಂದಿಗೂ ಬೆರೆಯುತ್ತಾನೆ. ತಮಾಷೆ ಮಾಡುತ್ತಾನೆ..... **a great friend....**" ಎನ್ನುತ್ತಾಳೆ ರಮ್ಯಾ. ದರ್ಶನ್ ಹೇಗೆ ಅಂದರೆ "ಅಯ್ಯೋ ತುಂಬಾ ಸಿಂಪಲ್... ದರ್ಶನ್ ಹೆಂಡತಿ ನನಗೆ ತುಂಬಾ ಲೈಕ್ ಆಗಿಬಿಟ್ಟಿದ್ದಾರೆ" ಎಂದು ಕಣ್ಣು ಮಿಟುಕಿಸಿ ನಗುತ್ತಾಳೆ.

"ಸುದೀಪ್ ಶೂಟಿಂಗ್‌ನಲ್ಲಿ ನನ್ನ ಕಾಸ್ಟ್ಯೂಮ್ಸ್ ಕುರಿತು ಕಾಳಜಿ ವಹಿಸುತ್ತಿದ್ದಾಗಲೇ ಅಂದುಕೊಂಡಿದ್ದೆ: ಸುದೀಪ್ ಡೈರೆಕ್ಟರ್ ಆಗ್ತಾನೆ ಅಂತಾ... ನನ್ನ ಮೊದಲನೇ ಚಿತ್ರ ನಿರ್ದೇಶಿಸಿದ ದಿನೇಶ್‌ಬಾಬುಗೆ ನಾನು ಮಗು ತರಹ... ನಾಗತಿಹಳ್ಳಿಯವರು ನನ್ನ ಕನ್ನಡ ಇಂಪ್ರೂವ್ ಮಾಡಿದ ಮೇಷ್ಟ್ರು.... 'ಕಂಠಿ'ಯ ನಿರ್ದೇಶಕ ಭರತ್ ಟ್ಯಾಲೆಂಟೆಡ್.... ಆದರೆ ಚಾನ್ಸ್ ಸಿಗ್ತಿಲ್ಲ... 'ಆಕಾಶ್' ನಿರ್ದೇಶಿಸಿದ, 'ಅರಸು' ನಿರ್ದೇಶಿಸುತ್ತಿರುವ ಮಹೇಶ್, 'ಆದಿ'ಯ ರಮೇಶ್, 'ಸೇವಂತಿ ಸೇವಂತಿ'ಯ ಎಸ್. ನಾರಾಯಣ್ ಎಲ್ಲರಿಂದಾನೂ ನಾನು ಕಲಿತಿದ್ದೇನೆ. ಎಲ್ಲರಿಗೂ ಥ್ಯಾಂಕ್ಸ್. ಧ್ಯಾನ್ ನನಗೆ ಒಳ್ಳೆ ಫ್ರೆಂಡಾಗಿದ್ದಾನೆ. ಮತ್ತೆ **enemies** ಯಾರು? ಅಂತೀರಾ... **no one is my enemy!**" ಎಂದು ಕ್ಷಣ ಕಣ್ಮುಚ್ಚಿ ಹೇಳುತ್ತಾಳೆ.

'ಅವಳು ಪ್ರೊಫೆಷನಲ್, ಕಾನ್ಫಿಡೆಂಟ್...'


ಯಾರ್‍ಯಾರೋ ಏನೋ ಹೇಳಿದರು ಎಂಬುದಕ್ಕಿಂತ ರಮ್ಯಾ ಜೊತೆ ಕೆಲಸ ಮಾಡಿದ ನಿರ್ದೇಶಕರು, ನಿರ್ಮಾಪಕರು ಏನು ಹೇಳ್ತಾರೆ ಎಂಬುದು ಮುಖ್ಯವಲ್ಲವೆ?

'ಅಭಿ' ನಿರ್ದೇಶಕ ದಿನೇಶ್‌ಬಾಬು:




ಮೊದಲ ಬಾರಿ ರಮ್ಯಾ ಜೊತೆ ಮಾತಾಡಿದಾಗ ನನಗೆ ಆಕೆಯ ಸ್ಕ್ರೀನ್ ಟೆಸ್ಟ್ ಅವಶ್ಯವಿಲ್ಲ ಎನಿಸಿತ್ತು. ಮೊದಲ ಭೇಟಿಯಲ್ಲೇ ಆಕೆಯ ability ಗೊತ್ತಾಗಿತ್ತು. ಮಗು ತರಹದ ಹುಡುಗಿ. Very confident. ಮೊದಲನೇ ಚಿತ್ರ ಅನ್ನೋ ಭಯ ಇಲ್ಲದೇ ಕ್ಯಾಮೆರಾ ಫೇಸ್ ಮಾಡಿದ್ಲು... ಅವಳಲ್ಲಿ ಯಾವುದೇ ಕೊರತೆ ಇದೆ ಅನಿಸಲಿಲ್ಲ... ತುಂಬಾ ಇನ್‌ವಾಲ್ವ್ ಆಗ್ತಾಳೆ... ಹೀಗಿದ್ದರೆ ಹೇಗೆ ಎಂದು suggest ಮಾಡ್ತಾಳೆ... ಇಂಥದು ಇದ್ದರೆ ಈ ಸೀನ್‌ಗೆ ಚೆನ್ನ ಅಂತಾಳೆ... ಅದು ಅವಳ ಹಕ್ಕು.. ಅದಕ್ಕೆ ಉತ್ತರಿಸಬೇಕಾದದ್ದು ನಿರ್ದೇಶಕರ ಕರ್ತವ್ಯ. ಇದರಲ್ಲಿ ಕೊಬ್ಬೇನು ಬಂತು? ಅವಳ ಕ್ಯಾರೆಕ್ಟರ್‌ಗೆ ಅವಳು ತುಂಬಾ ಮಹತ್ವ ನೀಡ್ತಾಳೆ.

'ಅಮೃತಧಾರೆ'ಯ ನಾಗತಿಹಳ್ಳಿ:



ರಮ್ಯಾಳಲ್ಲಿ ಟ್ಯಾಲೆಂಟ್ ತುಂಬಾ ಇದೆ. ಒಳ್ಳೆ ಕಲಾವಿದೆ ಆಗೋ ಶಕ್ತಿ ಇದೆ. ಇನ್ನೂ explore ಮಾಡ್ಬೇಕು ಈ ಹುಡುಗಿ.

ಮೊದಲೆಲ್ಲ ಟೈಮ್‌ಸೆನ್ಸ್ ಕಡಿಮೆ ಇತ್ತು, ಸ್ವಲ್ಪ childishness ಇತ್ತು, ಬೋರ್ಡಿಂಗ್ ಸ್ಕೂಲ್‌ಲ್ಲಿ ಬೆಳೆದ ಹುಡುಗಿಯಲ್ವಾ? ಈಗಿನ ಜನರೇಷನ್ನೇ ಹೀಗೇನೋ? ಫಸ್ಟ್‌ಡೇ ಶೂಟಿಂಗಿಗೇ ಬರಲಿಲ್ಲ. ಮರುದಿನ ನಾನು ಒಂದು ಲೆಕ್ಚರ್ ತೊಗೊಂಡು, ಅವಳಿಂದ ಒಂದು ಅಪಾಲಜಿ ಲೆಟರು ಬರೆಸಿಕೊಂಡೆ. ಚಿತ್ರ 25 ವಾರ ಓಡಿದ ಮೇಲೆ ತಿರುಗಿಕೊಟ್ಟೆ. ಈಗವಳು ಪಕ್ಕಾ ಪ್ರೊಫೆಷನಲ್. ನನಗೆ ಮೇಷ್ಟ್ರು ಅಂತಾಳೆ. ನಾನಂತೂ ಅವಳನ್ನು ಮೂರನೇ ಮಗಳು ಅಂತೀನಿ. ನನ್ನ ಮಕ್ಳು 'ನಾವಿಬ್ರೇ ಸಾಕು... ಆ ಜಗಳಗಂಟಿ ಯಾಕೆ ಬೇಕು?' ಎಂದು ನಗ್ತಾರೆ. ರಮ್ಯಾಳಲ್ಲಿ ಗ್ಲ್ಯಾಮರ್ ಇದೆ, ಅಭಿರುಚಿ ಇದೆ' ಪ್ರತಿಭೆ ಇದೆ. ಹೀಗೇ ಶ್ರದ್ಧೆಯಿಂದ ಮುಂದುವರೆದರೆ, ಮುಂದೊಂದು ದಿನ ಕನ್ನಡ ಚಿತ್ರರಂಗವನ್ನೇ ಆಳ್ತಾಳೆ ಈ ಹುಡುಗಿ....



'ಜೊತೆ ಜೊತೆಯಲಿ' ನಿರ್ದೇಶಕ ದಿನಕರ್:

Performance ನಲ್ಲಿ ದುಸರಾ ಮಾತೇ ಇಲ್ಲ, ಸದ್ಯಕ್ಕೆ ಅವರೇ the best. ಡೈಲಾಗ್ ಶೀಟ್ ಕೊಟ್ರೆ ಸಾಕು, ನಾವು ನಿರೀಕ್ಷಿಸಿದ್ದಕ್ಕಿಂತ ಹತ್ತು ಪರ್ಸೆಂಟ್ ಹೆಚ್ಚಿಗೆ ರಿಸಲ್ಟ್ ಕೊಡ್ತಾರೆ. ಕತೆಗೆ ಮಹತ್ವ ಕೊಡುವ ಅವರ ಗುಣ ಮೆಚ್ಚಿದೆ ನಾನು. ಖಂಡಿತ ಅವರೀಗ ಲಕ್ಕಿ ಸ್ಟಾರ್... ನೀವು ಯಾವುದೇ ರೋಲ್ ಕೊಟ್ಟರೂ, ನಟಿಸಬಲ್ಲ ತಾಕತ್ತು ಇದೆ ಅವರಿಗೆ. ಡ್ಯಾನ್ಸ್‌ನಲ್ಲಿ ಸ್ವಲ್ಪ ವೀಕು, ಆದರೆ ಮುಖದ expression ನಲ್ಲಿ ಅದನ್ನು ಕವರ್ ಅಪ್ ಮಾಡಿಕೊಂಡು ಬಿಡುತ್ತಾರೆ...

'ಜೊತೆ ಜೊತೆಯಲಿ' 17 ಥಿಯೇಟರಿನಲ್ಲಿ 50 ದಿನ ಮುಗಿಸಿದೆ, 10 ಥಿಯೇಟರ್‌ಗಳಲ್ಲಿ 100 ದಿನ ಓಡಲಿದೆ...

Thanks to Ramya...

'ತನನಂ' ನಿರ್ಮಾಪಕ ಎನ್.ಎಮ್. ಸುರೇಶ್:



ರಮ್ಯಾಳ acting ಬಗ್ಗೆ ಮಾತಾಡಂಗೇ ಇಲ್ಲ... ಆಕೆ ಕನ್ನಡ ಚಿತ್ರರಂಗದ ಆಸ್ತಿ, ನನಗಂತೂ 'ಪುಟ್ಟ ಫ್ರೆಂಡ್ ಇದ್ದಂತೆ. ನಿರ್ಮಾಪಕರಿಗೆ ನಷ್ಟವಾಗಬಾರದು ಎಂದು ಸದಾ ಹೇಳುತ್ತಿರುತ್ತಾಳೆ. ಎಲ್ಲರೊಂದಿಗೆ ಸಹಕಾರದಿಂದ, ನಗುನಗುತ್ತಾ ಇರುವ energetic girl ಅಂದ್ರೆ, ಅದು ರಮ್ಯಾ.

...ಬಂತ ಇತರರನ್ನೂ ವಿಮರ್ಶಿಸಿ ದಕ್ಕಿಸಿ...ತ್ತಾಳೆಂದರೆ ಪುರುಷ ಪ್ರಧಾನ ಚಿತ್ರರಂಗದಲ್ಲಿ ...ವ ಮಾತಲ್ಲ. ರಮ್ಯಳಿಗೆ ಇದು ಸಾಧ್ಯವಾಗಿರುವುದು ...ಗೊತ್ತಾ?

...ನು. ಕಲ್ಪನೆಗಳೇ ತುಂಬಿರುವ ಚಿತ್ರರಂಗ ಎಂಬ ...ನಲ್ಲಿ ಆಕೆ ನೇರವಾಗಿ, ನಿಷ್ಠುರವಾಗಿ ಸತ್ಯವನ್ನು ... ಮುಲಾಜೂ ಇಲ್ಲದೆ ಹೇಳುವುದರಿಂದ!

ರೀಮೇಕ್ ಯಾಕೆ? ಕ್ರಿಯೆಟಿವಿಟಿ ಇಲ್ವೆ?

...ಗಾಂಧಿನಗರದಲ್ಲಿ ಈಗ ನಡೆದಿರುವ ರೀಮೇಕ್, ...ಗ್ ಚರ್ಚೆ ಕುರಿತು ಈಕೆ ಏನು ಹೇಳ್ತಾಳೆ?

Oh, ಅದರ ಕುರಿತು ಚರ್ಚೆ ಮಾಡ್ತಾ ಟೈಮ್ ... ಮಾಡ್ತಿದ್ದಾರೆ. ನಾನಿನ್ನೂ ಚಿಕ್ಕವಳು. ರೀಮೇಕು ...ದ ಕುರಿತು ಹೇಳಲು ಹಿರಿಯರಿದ್ದಾರೆ. ನಮ್ಮಲ್ಲೂ ...ಷ್ಟು ಪ್ರತಿಭಾವಂತರಿರುವಾಗ, ಕ್ರಿಯೆಟಿವಿಟಿ ...ನಾಗ ರೀಮೇಕ್ ಮಾಡ್ತಾ ಕೂಡೋದು ತಪ್ಪಲ್ವಾ? ...ದೂಡಿಗಳಂತೆ ಕುಳಿತಾಗ ಇದ್ದ ಕ್ರಿಯೆಟಿವಿಟಿಯೂ ... ಹೋಗುತ್ತೆ" ಎಂದು ಖಡಾಖಂಡಿತವಾಗಿ ...ೕಕ್, ಡಬ್ಬಿಂಗ್‌ಗಳನ್ನು ವಿರೋಧಿಸುತ್ತಾಳೆ.

...ಅಣ್ಣಾವ್ರು ಎಂದೂ ರಿಮೇಕ್‌ಗೆ ಬೆಂಬಲಿಸಲಿಲ್ಲ. ... ಚಿತ್ರಗಳಿಗೆ ನನ್ನನ್ನು ರೆಫರ್ ಮಾಡಿದ್ದು ಅವರೇ. ...ಲ್ಲೋ ಯಾಕೆ ಹುಡುಕ್ತೀರಾ? ನಮ್ಮ ಹುಡುಗಿ ... ಇದ್ದಾಳಲ್ಲ?' ಎಂದು 'ಅರಸು' ಚಿತ್ರಕ್ಕೆ ನನ್ನನ್ನು ... ಮಾಡಿದ್ದೂ ಅವರೇ. ಈಗ ಅವರಿಲ್ಲವಲ್ಲ ...ು ಬೇಸರ ಆಗುತ್ತೆ... ಅವರಿದ್ದಿದ್ದರೆ ಚಿತ್ರರಂಗದಲ್ಲಿ ...ಹ ಬಿಕ್ಕಟ್ಟು ಬರ್ತಾನೇ ಇರಲಿಲ್ಲ..... ಎಂದು ...ರನ್ನು ನೆನೆದಳು.

...ವಾಲ್ವ್ ಆಗ್ತೀನಿ... ಅದು ತಪ್ಪಾ?

...ರಮ್ಯಾ ಪ್ರೊಫೆಷನಲ್ ಮಾತ್ರವಲ್ಲ, ಮಾಡರ್ನ್ ...ಗಿ ಕೂಡ. ಬೆಂಗಳೂರಿನಲ್ಲಿ ಬೆಳೆದಿರುವ, ವೆಸ್ಟ್ ...ನಲ್ಲೇ ಬದುಕಿರುವ, ಇಂಗ್ಲಿಷ್‌ನಲ್ಲೇ ಸುಲಲಿತವಾಗಿ ...ಡುವ ರಮ್ಯ ಮಿನಿ ಸ್ಕರ್ಟ್‌ಗಳನ್ನು, shorts ...ನ್ನು ತೊಡುತ್ತಾಳೆ. ಅದೆಲ್ಲ ಈಗ ಮಾಮೂಲಿ ... ಆದರೆ ಬೇರೆ ನಟಿಯರಿಗಿಂತ ಈಕೆ ಹೇಗೆ ಭಿನ್ನ ...ರೆ ಯಾವುದು–ಎಲ್ಲಿ–ಹೇಗೆ ಕಾಣಿಸುತ್ತೆ ಎಂಬುದರ ... ಅರಿತುಕೊಂಡಿರುವರಿಂದ.

...ಸಿನಿಮಾರಂಗ ಎಂತಹದೆಂದರೆ ಅಲ್ಲಿ ಸೀರೆ, ಲಂಗ ...ಾ ವಲ್ಗರ್ ಆಗಿ ಕಾಣುವಂತೆ ಮಾಡುತ್ತಾರೆ. ...ಧಿನಗರದ ಇಂತಹ ವರಸೆಗಳನ್ನು ಅರಿತಿರುವ ...್ಯ ಮಾಡ್ ಡ್ರೆಸ್ ಹಾಕಿದರೂ, ಕ್ಯಾಮರಾ ಆ್ಯಂಗಲ್ ...ದೆ ಅಂತ ಎಚ್ಚರ ವಹಿಸುತ್ತಾಳೆ. ಅದು ಸರಿ ...ಸದಿದ್ದರೆ ಕ್ಯಾಮರಾ ಆ್ಯಂಗಲ್ ಬದಲಾಯಿಸಿ ಅಂತ ...ುತ್ತಾಳೆ. ಇದಕ್ಕೆ ಚಿತ್ರರಂಗದ ಹಲವರು "ಅವಳು ...ಬಾ ಕಿರಿಕ್ಕು" ಎಂದು ನಟಿಕೆ ಮುರಿಯುತ್ತಾರೆ.

...ಇದರ ಬಗ್ಗೆ ರಮ್ಯಾಳನ್ನು ಕೇಳಿದರೆ, ಆಕೆ ಹೀಗೆ ...ುತ್ತಾಳೆ: "ಸಿನಿಮಾದಲ್ಲಿ ನಾನು ಇನ್‌ವಾಲ್ವ್ ಆಗ್ತೀನಿ. ...ದೊಳಗೆ ಪ್ರವೇಶ ಮಾಡ್ತೀನಿ... ಈ ದೃಶ್ಯ ಹೀಗಿದ್ದರೆ ...ೆ ಅಂತಾ ವಿನಯದಿಂದ suggest ಮಾಡ್ತೀನಿ. ... ಡೈಲಾಗು ಈ ರೀತಿ ಇದ್ರೆ ಜನರಿಗೆ ರೀಚ್ ...್ವಾ? ಎಂದು ಕೇಳಿ ಬದಲಾಯಿಸಿಕೊಳ್ತೀನಿ... ಇದು ... ಪ್ರೊಫೆಷನಲಿಸಂ... ಇದನ್ನು ಕೊಬ್ಬು ಎನ್ನುವುದಾದರೆ, ...ಕ್ಕು ಎನ್ನುವುದಾದರೆ ಅಂತಹ immatured ...ರಿಗೆ ನಾನು ಉತ್ತರಿಸೋಕೆ ಹೋಗಲ್ಲ...."

"ನೋಡಿ, ನನ್ನ ಬಗ್ಗೆ ಏನೆಲ್ಲ ಬರೆದ್ರು... ನಾನು ಮಾತ್ರ ನಕ್ಕು ಸುಮ್ಮನಾದೆ. ನನಗೆ ಅಹಂ ಇದೆ, ದಿಢೀರ್ ಯಶಸ್ಸಿಗಾಗಿ ಎಂತಹ ಚಿತ್ರ ಸಿಕ್ಕರೂ ಮಾಡ್ತೀನಿ, ತುಂಬಾ ಸ್ಪೀಡ್‌ಲ್ಲಿದ್ದೀನಿ ಎಂದು ಬರೆದರು. ಅವರಿಗೆ ನನ್ನ performance ಮೂಲಕ ಉತ್ತರ ಕೊಟ್ಟಿದ್ದೇನೆ. ನಾಗತಿಹಳ್ಳಿ ಮೇಷ್ಟ್ರು, ದಿನೇಶ್‌ಬಾಬು, ಕವಿತಾ ಲಂಕೇಶ್ ನನ್ನನ್ನು ಮೆಚ್ಚಿರುವಾಗ ಯಾರ್‍ಯಾರೋ ಏನೋ ಬರೆದರು ಅಂತಾ ತಲೆಕೆಡಿಸಿಕೊಳ್ಳೊಕಾಗುತ್ತಾ?

ನಾನೇನು ಸಿಕ್ಕಸಿಕ್ಕ ಸಿನಿಮಾ ಒಪ್ಪಿಕೊಂಡಿದ್ದೇನಾ? 'ಆಕಾಶ್' ಸಿನಿಮಾಕ್ಕೂ ಮೊದಲು ಕೆಟ್ಟ ಸ್ಕ್ರಿಪ್ಟ್‌ಗಳ ಐದಾರು ಸಿನಿಮಾ ರಿಜೆಕ್ಟ್ ಮಾಡಿ ಮೂರು ತಿಂಗಳು ಮನೇಲಿ ಕುಳಿತಿದ್ದೆ. And take Amrutha Dhare... ಅದು ಹಿಟ್ ಆದ ಮೇಲೆ ಬಂದ ಹತ್ತಾರು ಸಾಧಾರಣ ಚಿತ್ರಗಳನ್ನು ರಿಜೆಕ್ಟ್ ಮಾಡಿ ಮತ್ತೆ 3 ತಿಂಗಳು ಸುಮ್ಮನೇ ಕುಳಿತಿದ್ದೆ..."

ಇವತ್ತು ನಾಯಕ ನಟರಷ್ಟೆ ರಮ್ಯಾ ತನ್ನ ಇಮೇಜಿನ ಬಗ್ಗೆ ಕಾಳಜಿ ವಹಿಸುತ್ತಾಳೆ. ಈಕೆ ತ್ರಿಪುರ ಸುಂದರಿ ಅಲ್ಲ; ಮೈಮಾಟ ಚೆನ್ನಾಗಿದ್ದರೂ ಸ್ವಲ್ಪ ಕುಳ್ಳಿ; ಈಗಿನಷ್ಟೇ ಶ್ರದ್ಧೆಯಿಂದ ಸಾಗಿದರೆ ಪ್ರಶಸ್ತಿಗಳನ್ನು ಪಡೆಯಬಹುದಾದ ಭರವಸೆ ಮೂಡಿಸಿರುವ ಕಲಾವಿದೆ. ಇದೆಲ್ಲಾ ಆಕೆಗೇ ಚೆನ್ನಾಗಿ ಗೊತ್ತು. ಅದಕ್ಕೆ ಆಕೆ ಆತಂಕಗೊಳ್ಳದೆ, ಆತುರಕ್ಕೆ ಬೀಳದೆ ತನ್ನ ಕೆರಿಯರ್‌ಅನ್ನು ರೂಪಿಸಿಕೊಳ್ಳುತ್ತಾ ಸಾಗಿದ್ದಾಳೆ.

ಕನ್ನಡ ಚಿತ್ರರಂಗ ಮಾತ್ರವಲ್ಲ, ಭಾರತದ ಎಲ್ಲಾ ಚಿತ್ರರಂಗಗಳಲ್ಲಿ ನಟಿಯರ ಬೇಡಿಕೆ ಅಲ್ಪಕಾಲದ್ದು. ಆದ್ದರಿಂದಲೇ ಅದೆಷ್ಟೋ ನಟಿಯರು ಬೇಡಿಕೆ ಇದ್ದಷ್ಟು ದಿನ ಸಾಕಷ್ಟು ಚಿತ್ರಗಳಲ್ಲಿ ನಟಿಸಿ ಬಂದಷ್ಟು ಹಣವನ್ನು ಸಂಪಾದಿಸಿದರಾಯಿತು ಎನ್ನುತ್ತಾರೆ. ಆದರೆ ರಮ್ಯ ಇದರಲ್ಲಿ ಡಿಫರೆಂಟ್. "ಶಾರ್ಟ್ ಟೈಮ್ ಗಳಿಕೆಗಿಂತ ಲಾಂಗ್ ಟೈಮ್ ಕೆರಿಯರ್ ಮುಖ್ಯ" ಎಂಬುದು ಇವಳ ಸಿದ್ಧಾಂತ.



ಗಾಸಿಪ್ಪಿಗೆ ಕ್ಲೋಸಪ್ ನಗೆ!

ಸಿನಿಮಾಲೋಕದಲ್ಲಿ ಹುಡುಗಿಯರಿಗೆ ಎದುರಾಗುವ ಮತ್ತೊಂದು ಸಮಸ್ಯೆ ಗಾಸಿಪ್ಪಿನದು. ರಮ್ಯಾಳ ಬಾಯ್ ಫ್ರೆಂಡ್ ಅವನಂತೆ, ಇವನಂತೆ. ಎಂದು ಹೇಳುತ್ತಾ ಗಾಂಧಿನಗರದವರು ಎಷ್ಟೇ ಲಗಾಟೆ ಹೊಡೆದರೂ ರಮ್ಯಾ ಅದರಿಂದ ದೂರ ಉಳಿದಿದ್ದಾಳೆ. ಆದ್ದರಿಂದಲೇ ಇವತ್ತಿಗೂ ತನ್ನ 'ಪಕ್ಕದ ಮನೆ ಹುಡುಗಿ', 'ಕ್ಲೀನ್ ಹುಡುಗಿ' ಎಂಬ ಇಮೇಜ್ ಉಳಿಸಿಕೊಂಡಿದ್ದಾಳೆ.

ಅಂತಹ ರೂಮರ್‌ಗಳನ್ನು ಅವಳು ನಗುನಗುತ್ತಲೇ ಎದುರಿಸುತ್ತಿದ್ದಾಳೆ. ಇತ್ತೀಚೆಗೆ ಒಬ್ಬ ಹುಡುಗನ ಫೋಟೋ ಹಾಕಿ ಅವನು ನಿಮ್ಮ ಬಾಯ್‌ಫ್ರೆಂಡ್ ಅಂತಾ ಬರೆದಿದ್ದರಲ್ಲ ಎಂದರೆ 'ಹೋ' ಎಂದು ಜೋರಾಗಿ ನಗುವ ಈ ರಾಜಕುಮಾರಿ ಹೇಳ್ತಾಳೆ: "ಅಯ್ಯೋ, ಅದು ಗುಹಾನ ಫೋಟೋ.... ಅವ್ನ ತಂದೆತಾಯಿ ಎಲ್ಲ ನಮ್ಮ ಮನೆಯವ್ರಿಗೆ ಗೊತ್ತು. ನನಗಿಂತ ತುಂಬಾ ಚಿಕ್ಕ ಹುಡುಗ ಅವ್ನು... ಅದು ಬೇರೆ ಡುಮ್ಮಾ ಅಂದ್ರೆ ಡುಮ್ಮಾ... ನನಗೂ ಟೇಸ್ಟ್ ಇದೆಯಪ್ಪ... ನನ್ನ ತಮ್ಮನ ತರಹ ಇದ್ದಾನೆ ಗುಹಾ... ಅಲ್ಲಾ ಗಾಸಿಪ್ ಬರೆಯೋದಾದ್ರೆ ಜಾನ್ ಅಬ್ರಹಾಂ, ಟಾಮ್ ಕ್ರೂಸ್ ಜೊತೆ ನನ್ನ ಹೆಸರು ಸೇರ್‍ಸಿ ಬರೀಲಿ ಬೇಕಾದ್ರೆ" ಎಂದು ಇನ್ನೂ ಜೋರಾಗಿ ನಗುತ್ತಾಳೆ.

ಹೀಗೇ ನಗ್ತಾನೇ ಇರಲಿ

ಈ ಹುಡುಗಿ ಹೀಗೇ ನಗ್ತಾನೇ ಇರಲಿ. ಒಂದಿಷ್ಟೂ ego ಇಲ್ಲದ, ಎಲ್ಲರೊಂದಿಗೆ ಸಹಜವಾಗಿ ಬೆರೆಯುವ ಈ ಬಾಲೆಗೆ ಸೊಕ್ಕಿದೆ ಅಂತಾ ಹೇಗೆ ಹೇಳ್ತೀರಿ! ಇವತ್ತು ರಮ್ಯಾಗೆ ಅಪಾರ ಪ್ರೇಕ್ಷಕರು ಇದ್ದಾರೆ. ಫ್ಯಾಮಿಲಿಗಳಿಗಂತೂ ಈ ಪೋರಿ ಮನೆಮಗಳಂತಾಗಿದ್ದಾಳೆ. ಕಾಲೇಜು ಯುವಕರನ್ನು ಬಿಡಿ, ಕಾಲೇಜು ಹುಡುಗಿಯರೂ ರಮ್ಯಾ ಅಭಿಮಾನಿಗಳು! 'ತನನಂ' ಶೂಟಿಂಗ್ ನಡೆಯುತ್ತಿದ್ದಾಗ ಒಂದು ಕಾಲೇಜು ಹುಡುಗಿ ಬಂದು "I love you ರಮ್ಯಾ, ನಾ ನಿನ್ನ ತಬ್ಬಿಕೊಳ್ಳಲಾ?" ಎಂದಿದ್ದೇ ತಡ, ರಮ್ಯಾ ಆ ಹುಡುಗಿಯನ್ನು ಜೋರಾಗಿ ತಬ್ಬಿ ಅಕ್ಕರೆ ತೋರಿಸಿದ್ದಳಂತೆ. ಸ್ಕೂಲ್ ಮಕ್ಕಳು, ಎಲ್‌ಕೆಜಿ ಪುಟಾಣಿಗಳಿಗೆಲ್ಲ ರಮ್ಯಾ ಅಂದ್ರೆ ಅಚ್ಚುಮೆಚ್ಚು...

ನಾಯಕ ನಟರೇ ಮುಖ್ಯವಾಗಿರುವ ಕನ್ನಡ ಚಿತ್ರರಂಗದಲ್ಲಿ ತನ್ನತನವನ್ನು ಕಾಪಾಡಿಕೊಂಡಿರುವ, 'ಇಡೀ ಫ್ಯಾಮಿಲಿ ಇಷ್ಟಪಡುವ ನಟಿ' ಎಂದೇ ಜನಪ್ರಿಯತೆ ಪಡೆದಿರುವ, ಎಲ್ಲ ಟೀಕೆ-ಆರೋಪಗಳನ್ನು ಮೀರಿ ನಿಂತಿರುವ, ಪಕ್ಕಾ ಗಾಂಧಿನಗರದ ಹಾ...ಗೆ ...ರ್ಲ್' ಆಗಿರುವ ರಮ್ಯ ನಿಜಕ್ಕೂ [illegible] ...ಕಾಣೆ!

ಪುನೀತ್ ರೇಟಿಂಗು: ಹತ್ತಕ್ಕೆ ಎಂಟು ಮಾರ್ಕ್ಸ್!

"ರಮ್ಯಾ ತುಂಬಾ ಪ್ರೊಫೆಷನಲ್. ಸಾಕಷ್ಟು ಕಷ್ಟಪಡ್ತಾಳೆ. ಆಕೆಯದು ಸದಾ positive attitude. ...ಂಬಾ ಫೇಮಸ್ ಆಗೋ ಇಷ್ಟ ಅವಳಿಗೆ. 'ಅಭಿ'ಯಿಂದ 'ಅರಸು' ತಲುಪುವಷ್ಟರಲ್ಲಿ ತುಂಬಾ ಇಂಪ್ರೂವ್ ...ಗಿದ್ದಾಳೆ." ಎಂದು ಒಂದೇ ಉಸಿರಲ್ಲಿ ಹೇಳಿದರು ಪುನೀತ್.



"ರಮ್ಯಾಗೆ ಕೊಬ್ಬು ಜಾಸ್ತಿ ಅಂತಾರಲ್ಲ" ಎಂದು ನಾವು ಕೇಳಿದ್ದಕ್ಕೆ ನಕ್ಕ ಪುನೀತ್ "What nonsense! Professionalism ಗೆ ಕೊಬ್ಬು ಅನ್ನೋಕಾಗುತ್ತಾ? ಅವಳು ತುಂಬಾ ಸಿಂಪಲ್ ಮತ್ತು ಸ್ವೀಟ್ ಹುಡುಗಿ" ಎಂದು ನಕ್ಕರು. "ಈಗ ರಮ್ಯಾಳೊಂದಿಗೆ ಮೂರನೇ ಚಿತ್ರದಲ್ಲಿ ನಟಿಸುತ್ತಿದ್ದೀರಿ. ಅವಳ ಆ್ಯಕ್ಟಿಂಗ್‌ನ್ನು ಹೇಗೆ ರೇಟ್ ಮಾಡ್ತೀರಿ? 1 ರಿಂದ 10ರಲ್ಲಿ ಯಾವ ನಂಬರ್ ಕೊಡ್ತೀರಿ" ಎಂದು 'ಲಂಕೇಶ್' ಕೇಳಿತು. "ಅಯ್ಯೋ, ನಾನೇನು ಅವಳ ಆ್ಯಕ್ಟಿಂಗ್ ಬಗ್ಗೆ ವಿಮರ್ಶೆ ಮಾಡೋದು. ನಾನೂ ಕಲೀತಾ ಇದ್ದೀನಿ.... ಹಾಗೆ ನೋಡಿದರೆ ಅವಳು ನನಗಿಂತ ಹೆಚ್ಚು ಚಿತ್ರಗಳಲ್ಲಿ ಅಭಿನಯಿಸಿದ ಅನುಭವ ಹೊಂದಿದ್ದಾಳೆ. ನಾನು ನಂಬರ್ ಕೊಡೋದು ಸರೀನಾ?" ಎಂದು ಹಂಬಲ್ ಆಗಿ ಉತ್ತರಿಸಿದ ಪುನೀತ್, ಕೊನೆಗೂ ನಮ್ಮ ಒತ್ತಾಯಕ್ಕೆ ಮಣಿದು ರಮ್ಯಾಗೆ ಮಾರ್ಕ್ಸ್ ನೀಡಿದರು.

8 out of 10! ಹತ್ತಕ್ಕೆ, ಎಂಟು!

ಬ್ರೇಕ್ ಇನ್ಸ್‌ಪೆಕ್ಟರ್ಸ್ ನೇಮಕಾತಿ: 74 ಕೋಟಿ ಡಕಾಯಿತಿ

ಚಲುವನ ಗೋಲ್‌ಮಾಲ್

ರಾ. ಸೋಮನಾಥ್

ಮೆಕಾನಿಕಲ್, ಆಟೋ ಮೊಬೈಲ್ ಡಿಪ್ಲೋಮಾ ಓದಿದ ತಪ್ಪಿಗೆ ರಾಜ್ಯದ ಸಹಸ್ರಾರು ನಿರುದ್ಯೋಗಿಗಳು ತಹತಹಿಸಿ ಚಟ್ಟೆಕೊಳ್ಳುತ್ತಿದ್ದಾರೆ!


ಹೀಗೆ ಹಳ್ಳಿಗಾಡಿನ ವಿದ್ಯಾವಂತ ಪದವೀಧರರ ಭವಿಷ್ಯದ ಮೇಲೆ ಚಪ್ಪಡಿ ಕಲ್ಲು ಎಳೆದುಬಿಟ್ಟರೆ ಸಾರಿಗೆ ಮಂತ್ರಿ ಚಲುವರಾಯಸ್ವಾಮಿಗೆ ದಕ್ಕುವ ಮೊತ್ತ ಕಮ್ಮಿಯೆಂದರೂ ಅರವತ್ತು ಕೋಟಿ!

ಇಂಥ ನಿರ್ಲಜ್ಜ ಸರ್ಕಾರಿ ಹಗಲುದರೋಡೆಯ ಹೆಸರು ಬ್ರೇಕ್ ಇನ್ಸ್‌ಪೆಕ್ಟರ್ಸ್ ನೇಮಕಾತಿ ಕರ್ಮಕಾಂಡ!

ಇದೇ ನವೆಂಬರ್ 16 ರಿಂದ 24 ರ ತನಕ ನಡೆಯುವ ಸರಿಸುಮಾರು ಇನ್ನೂರು ಮೋಟಾರು ವಾಹನ ನಿರೀಕ್ಷಕರ ನೇಮಕಾತಿ ನಾಟಕದ ಸೂತ್ರಧಾರ ಕೂಡ ಸಾರಿಗೆ ಮಂತ್ರಿ ಚಲುವನೇ. ಬಹುಶಃ ಈತನಕ ಯಾವೊಬ್ಬ ಮಂತ್ರಿಯೂ ಕೈಹಾಕದ ದುಸ್ಸಾಹಸಕ್ಕೆ ಅವರು ಕೈಹಾಕಿದ್ದಾರೆಂದರೆ, ಈತನಕ ಅಷ್ಟೋ ಇಷ್ಟೋ ನಿಯತ್ತಿನಿಂದಿದ್ದ ಲೋಕಸೇವಾ (KPSC) ಆಯೋಗ ನಿಯತ್ತುಗೆಟ್ಟಿವೆಯೆಂದರೆ; ಹೊಡೆದ ಕೊಳ್ಳೆಯಲ್ಲಿ ಸರ್ವರಿಗೂ ಸಮಪಾಲು ಥಿಯರಿಯೇ ಈ ಹಗರಣದ ತಿರುಳಾಗಿರಲೇಬೇಕು.

ಅಷ್ಟಕ್ಕೂ ಇದು ಕೇವಲ ಇನ್ನೂರು ಮಂದಿ ಬ್ರೇಕ್ ಇನ್ಸ್‌ಪೆಕ್ಟರ್‌ಗಳು ಅಂದರೆ ಮೋಟಾರು ವಾಹನ ನಿರೀಕ್ಷಕರ ನೇಮಕಾತಿ ಪ್ರಶ್ನೆಯಾದರೂ ಆಮದನಿಯ ಲೆಕ್ಕ ಭಯಾನಕ. ಯಾವುದೇ ಆರ್‌ಟಿಓ ಚೆಕ್‌ಪೋಸ್ಟಿನಲ್ಲಿ ಅದೆಂಥಾ ಶತದಡ್ಡ ಬ್ರೇಕ್ ಇನ್ಸ್‌ಪೆಕ್ಟರ್ ನಿಂತರೂ ತಿಂಗಳೊಂದಕ್ಕೆ ಆತನಿಗೆ ಕನಿಷ್ಠ ಮೂರುಲಕ್ಷದ ಗಿಂಬಳ ಬಂದುಬೀಳುತ್ತದೆ. ಇಂಥ ಒಂದು ಹುದ್ದೆಗೆ ಮೂವತ್ತು ಲಕ್ಷವಲ್ಲ ಐವತ್ತು ಲಕ್ಷ ಕೊಟ್ಟರೂ ಕೇವಲ ಮೂರೇ ವರ್ಷದಲ್ಲಿ ಹಾಕಿದ ಬಂಡವಾಳ ಗ್ಯಾರಂಟಿ. ಹೀಗಿರುವಾಗ ಯಾರೋ ಗಾಂಧಿ ಮೊಮ್ಮಗನನ್ನು ಕರೆದು ಕೆಲಸ ಕೊಡೋದಕ್ಕೆ ನಾನೇನು ಖೋಟಾನೋಟು ಪ್ರಿಂಟು ಮಾಡ್ತಿದ್ದೀನೇನ್ರೀ... ಎಂದಿದ್ದಾರಂತೆ ಮಂತ್ರಿ ಚಲುವರಾಯಸ್ವಾಮಿ!

ಇಂಥ ಇನ್ನೂರು ಹುದ್ದೆಗಳನ್ನು ತಲಾ ಐವತ್ತು ಲಕ್ಷಕ್ಕೆ ಹರಾಜು ಹಾಕಲು ಬೇಕಾದ ಎಲ್ಲಾ ಕಳ್ಳದಾರಿಗಳನ್ನು ಅವರೇ ಮಾಡಿಕೊಂಡಿದ್ದಾರೆ. ಸದ್ಯ ಸಾರಿಗೆ ಇಲಾಖೆಯ ಹನ್ನೊಂದು ಚೆಕ್‌ಪೋಸ್ಟ್‌ಗಳು ಮತ್ತು ಐವತ್ತೇಳು ಆರ್‌ಟಿಓ ಹಾಗೂ ಎಆರ್‌ಟಿಓ ಕಚೇರಿಗಳ ಒಟ್ಟು ಬ್ರೇಕ್ ಇನ್ಸ್‌ಪೆಕ್ಟರ್‌ಗಳ ಸಂಖ್ಯೆ ಮುನ್ನೂರು. 1990 ರಲ್ಲಿ ರಾಜ್ಯಾದ್ಯಂತ ಕೇವಲ 14.50 ಲಕ್ಷದಷ್ಟಿದ್ದ ವಾಹನಗಳ ಸಂಖ್ಯೆ 2000 ದ ಹೊತ್ತಿಗೆ 36 ಲಕ್ಷವಾಗಿದೆ. 2005 ರ ಹೊತ್ತಿಗದು 53 ಲಕ್ಷಕ್ಕೇರಿದೆ. ಈ ಪ್ರಕಾರವೇ ಲೆಕ್ಕ ಹಾಕಿದರೆ 2010 ರ ವೇಳೆಗೆ ಇದು 77 ಲಕ್ಷಕ್ಕೇರಲಿದೆ. ರಾಜ್ಯದ ಇಷ್ಟೆಲ್ಲಾ ವಾಹನಗಳನ್ನು ನಿಯಂತ್ರಿಸಲು ಕೇವಲ ಮುನ್ನೂರು ಮೋಟಾರು ವಾಹನ ನಿರೀಕ್ಷಕರು ಯಾವ ಲೆಕ್ಕ? 1991 ರಲ್ಲಿ ನೂರೈವತ್ತು ಮಂದಿ ಇಂಥ ಇನ್ಸ್‌ಪೆಕ್ಟರ್‌ಗಳ ನೇಮಕವಾಗಿದ್ದು ಬಿಟ್ಟರೆ ಈತನಕ ಒಬ್ಬೇ ಒಬ್ಬನ ನೇಮಕಾತಿಯಾಗಿಲ್ಲ.



ಬೇರೆಲ್ಲಾ ಇಲಾಖೆಗೂ ಬೇಡಬೇಡವೆಂದರೂ ನೌಕರರನ್ನು ತುರುಕುವ ಸರ್ಕಾರ ಸಾರಿಗೆ ಇಲಾಖೆಯ ವಿಷಯದಲ್ಲಿ ಮಾತ್ರ ಹೀಗೆ ಉಲ್ಟಾ ಹೊಡೆಯುವುದಕ್ಕೂ ಕಾರಣವಿದೆ. ಅದು ಹಾಲಿ ಕೊಳ್ಳೆ ಹೊಡೆಯುತ್ತಿರುವ ಖತರ್‌ನಾಕ್ ಬ್ರೇಕ್ ಇನ್ಸ್‌ಪೆಕ್ಟರ್‌ಗಳ ಮಾಫಿಯಾ. ಹೆಚ್ಚಿಗೆ ಸಿಬ್ಬಂದಿ ಬಂದರೆ ಕೊಳ್ಳೆಯ ಪಾಲೂ ಹಂಚಿಕೆಯಾಗಬೇಕು. ಆಗ ತಮ್ಮ ಪಾಲು ಕಮ್ಮಿಯಾಗುತ್ತದೆ. ಕಮ್ಮಿ ಬ್ರೇಕ್ ಇನ್ಸ್‌ಪೆಕ್ಟರ್‌ಗಳಿದ್ದಷ್ಟೂ ತಮಗೇ ಲಾಭ ಎಂದು ಈಗಿರುವ ಇನ್ಸ್‌ಪೆಕ್ಟರ್‌ಗಳ ದುಷ್ಟಕೂಟವೊಂದು ಬಂದ ಸಾರಿಗೆ ಮಂತ್ರಿಗಳಿಗೆಲ್ಲ ಗಂಟು ಕೊಟ್ಟುಕೊಂಡೇ ಬಂತು.

1997 ರಲ್ಲಿ ಕೃಷ್ಣ ಮುಖ್ಯಮಂತ್ರಿಯಾಗಿದ್ದಾಗ ಇದೇ ರೀತಿ ಇನ್ನೂರು ಇನ್ಸ್‌ಪೆಕ್ಟರ್‌ಗಳನ್ನು ನೇಮಕ ಮಾಡಿಕೊಳ್ಳಲು ಹೊರಟಾಗಲೂ ಇದೇ ಗ್ಯಾಂಗ್ ಸರಿಸುಮಾರು 6 ಕೋಟಿಯ ಗಂಟೊಪ್ಪಿಸಿ ಅದಕ್ಕೆ ಅಡ್ಡಗಾಲಿಟ್ಟಿತ್ತು.

ಹೀಗಿದ್ದೂ ಸದ್ಯದ ಪರಿಸ್ಥಿತಿಯಲ್ಲಿ ಎರಡು ಸಾವಿರ ಮಂದಿ ಇಂಥ ಇನ್ಸ್‌ಪೆಕ್ಟರ್‌ಗಳು ಬೇಕೆಂದು ಹಿಂದಿದ್ದ ಸಾರಿಗೆ ಕಮೀಷನರ್ ಬಿ.ಎಲ್. ಶ್ರೀಧರ್ ಸರ್ಕಾರಕ್ಕೆ ವರದಿ ಕೊಟ್ಟರೆ, ಆನಂತರ ಬಂದ ತಿಮ್ಮೇಗೌಡರು ಕನಿಷ್ಠ ಐನೂರು ಹುದ್ದೆಗಳನ್ನಾದರೂ ತುಂಬಲೇಬೇಕೆಂದು ಹಠ ಹಿಡಿದಿದ್ದರು. ತದನಂತರ ಬಂದ ಓಂಪ್ರಕಾಶ್ ಕೂಡ ಇದನ್ನೇ ಒತ್ತಿ ಒತ್ತಿ ಹೇಳಿದ್ದರು. ಈಗಿರುವುದು ದೇವೇಗೌಡರ ಮನೆ ಮಗ ನಾರಾಯಣಗೌಡರು. ಇನ್ನು ಉಣ್ಣಲೆಂದೇ ಕೂತ ಚಲುವರಾಯ ಕೇಳಬೇಕೆ?


ಒಂದೇ ಕಲ್ಲಿಗೆ ಎರಡು ಹಕ್ಕಿ ಹೊಡೆಯುವ ಮಾಸ್ಟರ್ ಪ್ಲಾನ್ ಮಾಡಿಕೊಂಡೇ ಬಾಲಕೃಷ್ಣೇಗೌಡರ ಜೊತೆ ಡೀಲು ಕುದುರಿಸಿಕೊಂಡರು. ಅದಕ್ಕೆ ಮುಖ್ಯಮಂತ್ರಿ ಕುಮಾರಣ್ಣನೂ ಕೈಜೋಡಿಸಿ ಒಟ್ಟೂ 145 ಹುದ್ದೆಗೆ ಸಂಪುಟದ ಒಪ್ಪಿಗೆ ಕೊಡಿಸಿಕೊಟ್ಟರು. ಇದೆಲ್ಲಕ್ಕೂ ಮುನ್ನ ಸಾರಿಗೆ ಕಮಿಷನರ್ ಹುದ್ದೆಗೆ ಭಕ್ತ ನಾರಾಯಣಗೌಡರನ್ನು ತಂದುಕೊಂಡರು. ... ಹುದ್ದೆಯೊಂದಕ್ಕೆ ಹತ್ತೋ ಇಪ್ಪತ್ತೋ ಲಕ್ಷದ ಲೆಕ್ಕ ... ತಾನು ನಲವತ್ತಕ್ಕೋ, ಐವತ್ತಕ್ಕೋ ಮಾರಿ... ಬಾಲಕೃಷ್ಣೇಗೌಡರನ್ನು ಯಾಮಾರಿಸುವುದು ಚಲುವನ ಹುನ್ನಾರವಾಗಿತ್ತು, ಬಹುಶಃ ಜ... ಲೋಕಸೇವಾ ಆಯೋಗದ ಅಧ್ಯಕ್ಷ ಮತ್ತು ದೇಶ... ಪರಮನಿಷ್ಠ ಡಾ. ಕೃಷ್ಣರನ್ನೂ ಬಲೆಗೆ ಬೀಳಿಸಿ...

ಇಷ್ಟೆಲ್ಲಾ ಹಿಕ್ಮತ್ತು ಮಾಡಿಕೊಂಡೇ ಈತನಕ ಪಾಲಿಸಿಕೊಂಡು ಬಂದಿದ್ದ ನೇಮಕಾತಿ ನಿಯಮ... ಯನ್ನು ತನ್ನ ಅನುಕೂಲಕ್ಕೆ ತಕ್ಕಂತೆ ಚಲುವರಾಯ... ತಿರುಚಿಬಿಟ್ಟರು. ಬ್ರೇಕ್ ಇನ್ಸ್‌ಪೆಕ್ಟರ್ ಹುದ್ದೆ... ಅದು ಪೊಲೀಸ್ ಇನ್ಸ್‌ಪೆಕ್ಟರ್, ಅಬಕಾರಿ ಇನ್ಸ್... ಮತ್ತು ರೇಂಜ್ ಫಾರೆಸ್ಟ್ ಆಫೀಸರ್ ಹುದ್ದೆ... ನಾಂತರವಾದದ್ದು. ಅದಕ್ಕೊಂದು ಲಿಖಿತ ಪರೀಕ್ಷೆ ... ಮೌಖಿಕ ಪರೀಕ್ಷೆಯ ಜೊತೆ ದೈಹಿಕ ಪರೀಕ್ಷೆ ಇರಲೇಬೇಕು. ಮೆಕಾನಿಕಲ್ ಮತ್ತು ಆಟೋಮೊ... ಡಿಪ್ಲೋಮಾ ಪದವೀಧರನ... ಇಷ್ಟೆಲ್ಲಕ್ಕೂ ತೇರ್ಗಡೆಯಾದ ಮೇಲೆ ಆತನ ಪ್ರೊಬೇಷನ್... ಅವಧಿಯಲ್ಲಿ ಡ್ರೈವಿಂಗ್ ಲೈ... ಪಡೆದು ತನ್ನ ಚಾಲನಾ ಸಾಮರ್ಥ್ಯವನ್ನೂ ಸಾಬೀತು... ಮಾಡಬೇಕೆಂಬುದು ಆ ಕಾಲದಿಂದಲೂ ನಡೆದುಬಂ... ಪದ್ಧತಿ.

ಆದರೆ ಚಲುವರಾಯಸ್ವಾ... ಹೊಸ ನಿಯಮಾವಳಿ ಹೇಗಿ... ದರೆ, ಲಿಖಿತ ಪರೀಕ್ಷೆ ಇಲ್ಲವೇ ಇಲ್ಲ! ... ಆತನ ಮಾರ್ಕ್ಸ್‌ಕಾರ್ಡ್ ಸಾಕು. ಡಿಪ್ಲೋ... ಪರೀಕ್ಷೆಯಲ್ಲಿ ಅಭ್ಯರ್ಥಿಯೊಬ್ಬ ಪಡೆದ ಅಂಕದ ಜೊತೆ ಆತ ಮತ್ತು ಹದಿನೈದು ... ಮೌಖಿಕ ಪರೀಕ್ಷೆ ಎದುರಿಸಬೇಕು. ಹುಚ್ಚಾಟವೆಂದರೆ ಆತ ಮೊದಲೇ ಲಾರಿ... ಬಸ್ಸನ್ನೋ ಓಡಿಸಿದ ಹೆವಿ ಡ್ರೈವಿಂಗ್ ... ಪಡೆದಿರಬೇಕು. ಜೊತೆಗೆ ಬ್ಯಾಡ್ಜನ್ನೂ ಹೊ... ಬೇಕು. ಇಲ್ಲಿ ದೈಹಿಕ ಪರೀಕ್ಷೆಗೆ ಬದಲ... ಕೊಡುವ ಡಾಕ್ಟರ್ ಸರ್ಟಿಫಿಕೇಟನ್ನೇ ನಂಬುತ್ತದೆ! ಡ್ರೈವಿಂಗ್ ಬರದಿದ್ದರೂ ಆ... ಲೈಸೆನ್ಸ್ ಕೊಟ್ಟರೆ ಸಾಕು.

ಇದರ ಒಟ್ಟೂ ಹುನ್ನಾರವಿಷ್ಟೇ; ಯ... ಗ್ರಾಮೀಣರು ಸಂದರ್ಶನಕ್ಕೆ ಬರಲೇಬಾರ...

ನಿಗದಿತ 145 ಹುದ್ದೆಯಲ್ಲದೇ ಕಾಲಾ... ಅಗತ್ಯಕ್ಕೆ ತಕ್ಕಂತೆ ಮತ್ತಷ್ಟು ಹುದ್ದೆಗಳಿಗೆ ನೇ... ನಡೆಸಬಹುದೆಂಬ ಮತ್ತೊಂದು ಅಂಶವನ್ನೂ ... ಆದೇಶಕ್ಕೆ ತುರುಕಲಾಯ್ತು. ಅಲ್ಲಿಗೆ ಹುದ್ದೆಗಳ ... ಮೊತ್ತ ಇನ್ನೂರಕ್ಕೇರಿತು. ಅಕ್ಟೋಬರ್ ಮೊದಲ... ಹೊರಬಿದ್ದ ನೇಮಕಾತಿ ಜಾಹೀರಾತು ನೋ... ಸಹಸ್ರಾರು ಅಭ್ಯರ್ಥಿಗಳ ಜಂಘಾಬಲವೇ ... ಹೋಗಿತ್ತು. ಕೇವಲ ಒಂದು ತಿಂಗಳ ಅವಧಿ... ಹೆವಿ ಡ್ರೈವಿಂಗ್ ಕಲಿತು ಲೈಸೆನ್ಸಿಗೆ ಅರ್ಜಿ ... ಬ್ಯಾಡ್ಜನ್ನು ಪಡೆಯುವುದು ಸಾಕ್ಷಾತ್ ಬ್ರಹ್ಮನಿ... ಸಾಧ್ಯವಿಲ್ಲ. ಅಲ್ಲಿಗೆ ಇದು ಮ್ಯಾಚ್‌ಫಿಕ್ಸಿಂಗ್ ನೇ... ಎಂಬುದು ಪ್ರತಿಯೊಬ್ಬರಿಗೂ ಅರ್ಥವಾಗಿತ್ತು. ಸಾ... ಜನ ಅರ್ಜಿ ಹಾಕುವುದನ್ನೇ ಕೈಬಿಟ್ಟರು. ಸರಿಸು... ಏಳುಸಾವಿರ ಅರ್ಜಿಗಳು ಈ ಒಂದೇ ಕಾ... ತಿರಸ್ಕರಿಸಲ್ಪಟ್ಟವು. 145 ಹುದ್ದೆಗಳಷ್ಟೇ ಅಲ್ಲದೇ...




ಕೆಪಿಎಸ್‌ಸಿ ಕೃಷ್ಣ



ನಾರಾಯಣ ಗೌಡ



ಬಾಲಕೃಷ್ಣೇಗೌಡ



ಕರ್ನಾಟಕ ಸರ್ಕಾರ - ಸಾರಿಗೆ ಇಲಾಖೆ

ಸಂ.ಸಾಆ/ಸಿಬ್ಬಂದಿ-1/ಎಆರ್-122/2003-04

ಸಾರಿಗೆ ಆಯುಕ್ತರ...
5ನೇ ಮಹಡಿ, ಬಹುಮ...
ಬೆಂಗಳೂರು, ದಿನಾಂಕ:

ಇವರಿಗೆ,
ಕಾರ್ಯದರ್ಶಿ,
ಕರ್ನಾಟಕ ಲೋಕ ಸೇವಾ ಆಯೋಗ,
ಪಾರ್ಕ್ ಹೌಸ್, ಬೆಂಗಳೂರು- 560 001.

ಮಾನ್ಯರೇ,

ವಿಷಯ: ಸಾರಿಗೆ ಇಲಾಖೆಯಲ್ಲಿ ಖಾಲಿಯಿರುವ 145 ಮೋಟಾರು ವಾಹನ ನಿರೀಕ್ಷಕರ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ.

ಉಲ್ಲೇಖ: 1. ಈ ಕಛೇರಿಯ ಇದೇ ಸಂಖ್ಯೆಯ ಪತ್ರ ದಿ:21-2-2004
2. ಈ ಕಛೇರಿಯ ಇದೇ ಸಂಖ್ಯೆಯ ಪತ್ರ ದಿ:19-7-2006.

ಉಲ್ಲೇಖ(2)ರಲ್ಲಿ ಒದಗಿಸಲಾದ ಪತ್ರದಲ್ಲಿ ಸಾರಿಗೆ ಇಲಾಖೆಯಲ್ಲಿ 245 ಮೋಟಾರು ... [illegible]

ತದನುಸಾರ, 145 ಮೋಟಾರು ವಾಹನ ನಿರೀಕ್ಷಕರ ಹುದ್ದೆಗಳನ್ನು ಭರ್ತಿ ಮಾಡ... [illegible]

ತಮ್ಮ ವಿಶ್ವಾಸಿ,
ಸಹಿ/-
ಸಾರಿಗೆ ಆಯುಕ್ತರು
ಬೆಂಗಳೂರು.

ಪ್ರತಿಯನ್ನು, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಾರಿಗೆ ಇಲಾಖೆ, ಬಹುಮ... ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ.


ಸಾರಿಗೆ ಆಯುಕ್ತರು
ಬೆಂಗಳೂರು

ಬೋಗಸ್ ನೇಮಕಾತಿಗೆ ಚಲುವನ ಆ...

ನೆಕ್ಸ್ಟ್ ಸೀಯೆಮ್ ಆಗೋದಕ್ಕೆ ಅಷ್ಟೊ ಬೇಡವೇ?

ಬ್ರದರ್ ಇವತ್ತು 100 ಕೋಟಿ ಇತ್ತು ಅಂದ್ರೆ ನಾನೇ ನೆಕ್ಸ್ಟ್ ಸೀಯೆಮ್ಮೂ.... ಗೊತ್ತಾ?

ಇದು ಕೇವಲ ಎಣ್ಣೆ ಏಟಿನಲ್ಲಿ ಹೊಡೆದ ಡೈಲಾಗಲ್ಲ ಎಂಬುದು ಕಳೆದ ಕೆಲ ದಿನಗಳಿಂದ ಸಾರಿಗೆ ಮಂತ್ರಿ ಚಲುವರಾಯ ಸ್ವಾಮಿಯ ವರ್ತನೆಯನ್ನು ಬಲ್ಲವರಿಗೆ ಅರ್ಥವಾಗಿಬಿಟ್ಟಿದೆ. ಚಾಮುಂಡೇಶ್ವರಿ ಉಪಚುನಾವಣೆಯಲ್ಲಿ ಸಿದ್ದು ಗೆಲ್ಲುವುದು ಶತಸ್ಸಿದ್ಧ. ತದನಂತರ ಸರ್ಕಾರ ಅತಂತ್ರಗೊಳ್ಳುವುದೂ ಗ್ಯಾರಂಟಿ. ಆಗ ಜೆಡಿಎಸ್‌ನ ಒಂದಷ್ಟು ಆತ್ಮಪ್ತರನ್ನು ಕಟ್ಟಿಕೊಂಡು ಕಾಂಗ್ರೆಸ್ ಬೆಂಬಲ ಪಡೆದು, ಬಿಜೆಪಿಯ ಒಂದು ಗುಂಪನ್ನು ಕಟ್ಟಿಕೊಂಡು ತಾನೇ ಮುಖ್ಯಮಂತ್ರಿಯಾಗುವುದು ಚಲುವರಾಯನ ಕನಸು.



ಹಾಗಾಗದ ಪಕ್ಷದಲ್ಲಿ ಯಡಿಯೂರಪ್ಪ ನನ್ನೇ ಸೀಯೆಮ್ ಮಾಡಿ ತಾನು ಡೆಪ್ಯೂಟಿ ಸೀಯೆಮ್ ಆಗುವ ಭ್ರಮೆ ಕೂಡ ಚಲುವನ ತಲೆ ಹೊಕ್ಕಿದೆ.

ಅದಕ್ಕೆ ಒಳಗೊಳಗಿಂದಲೇ ಕುಮಾರಣ್ಣನ ವಿರುದ್ಧ ಜಮೀರ್, ಚೆನ್ನಿಗಪ್ಪ, ಸಂತೋಷ್ ಲಾಡ್, ಮಾಗಡಿ ಬಾಲಕೃಷ್ಣರನ್ನು ಎತ್ತಿಕಟ್ಟಿ, ಅದೇ ಹೊತ್ತಿಗೆ ಬಿಜೆಪಿಯ ಆತ್ಮಪ್ತರನ್ನು ಲೋಕೋಪಯೋಗಿ ಸಚಿವ ರೇವಣ್ಣನ ವಿರುದ್ಧ ಛೂಬಿಟ್ಟ. ಇದಕ್ಕೆ ತಕ್ಕಂತೆ ಹೊರಟ್ಟಿ ಥರದವರು ಚಲುವಣ್ಣ ಮುಂದಿನ ಡಿಸಿಎಮ್ ಆಗೋದಾದ್ರೆ ನಮ್ಮ ಸಂಪೂರ್ಣ ಬೆಂಬಲವಿದೆ ಎಂದು ಬಹಿರಂಗವಾಗಿ ಹೇಳಿಕೆ ಕೊಟ್ಟರು. ಅದೇ ವೇಳೆಗೆ ಸಿದ್ರಾಮಯ್ಯ 'ಅಲ್ಲಪ್ಪಾ, ನಿನ್ನ ವಿರುದ್ಧ ದೇವೇಗೌಡ ನಾಗಮಂಗಲದಲ್ಲಿ ಸುರೇಶ್‌ಗೌಡನನ್ನು ಬೆಳೆಸ್ತಿದ್ದಾನೆ. ನಿನ್ನಲ್ಲಿ ಲೀಡರ್‌ಶಿಪ್ ಕ್ವಾಲಿಟಿ ಇರೋದು ದೇವೇಗೌಡರಿಗೆ ಸಹಿಸೋಕ್ಕಾಗ್ತಿಲ್ಲ, ಇವತ್ತಲ್ಲ ನಾಳೆ ನಿನ್ನನ್ನು ತುಳಿಯೋದು ಗ್ಯಾರಂಟಿ. ಒಂದು ಕೆಲ್ಸಾ ಮಾಡು, ನೀನೇ ಸೀಯೆಮ್ ಆಗೋದಾದ್ರೆ ನನ್ನ ಹಿಂದಿರೋ ಎಲ್ಲಾ ಎಮ್ಮೆಲ್ಲೆಗಳೂ ನಿನ್ನ ಜೊತೆಗಿರ್ತಾರೆ. ಬಂದು ಬಿಡು. ಹೇಗೂ ನಾಗಮಂಗಲದಲ್ಲಿ 30 ಸಾವಿರ ಕುರುಬರ ಓಟಿದೆ. ಅದೆಲ್ಲಾ ನಿನಗೇ ಗ್ಯಾರಂಟಿ. ಸುಮ್ನೆ ಯಾಕೆ ಹಾಳಾಗ್ತೀಯ?' ಎಂದರು.

ಇದು ಮನಸ್ಸಿಗೆ ಹೊಕ್ಕಿದ್ದೇ ಚಲುವನ ತಲೆ ತಿರುಗಿದೆ. ಚಲುವ ಮತ್ತು ಸಿದ್ರಾಮಯ್ಯ ಮಧ್ಯದ ಒಡಂಬಡಿಕೆಯ ವಾಸನೆ ಮೊದಲು ಹತ್ತಿದ್ದೇ ರೇವಣ್ಣನಿಗೆ.



ಏಕೆಂದರೆ ಕುಮಾರಣ್ಣನ ಉತ್ತರಾಧಿಕಾರಿ ಪದವಿಯ ಮೇಲೆ ಆಗಿನಿಂದಲೂ ರೇವಣ್ಣನಿಗೆ ಕಣ್ಣಿದೆ. ಚಲುವನ ವಿರುದ್ಧ ಅಪ್ಪ ದೇವೇಗೌಡರ ಬಳಿ ಫಿಟ್ಟಿಂಗ್ ಇಟ್ಟ ರೇವಣ್ಣನಿಗೆ ಮೊದಲು ಆತನನ್ನು ಮಂತ್ರಿ ಪದವಿಯಿಂದ ಕಿತ್ತು ಹಾಕುವ ದುರಾಸೆ. ಆದರೆ ದೇವೇಗೌಡರು ದುಡುಕುತ್ತಿಲ್ಲ, ಏಕೆಂದರೆ ಚಾಮುಂಡೇಶ್ವರಿ ಚುನಾವಣೆಗೂ ಮುನ್ನ ಚಲುವನ ವಿಕೆಟ್ ತೆಗೆದರೆ ಒಕ್ಕಲಿಗರು ಬಂಡೇಳುತ್ತಾರೆ. ಅದಕ್ಕೆ ಉಪಚುನಾವಣೆಗೆ ತನಕ ಸುಮ್ಮಿರು ಎಂದು ಮಗನನ್ನು ಅದುಮಿದ್ದಾರೆ.

ಹಾಗಂತ ಚಲುವಣ್ಣ ಸುಮ್ಮನೇ ಕೂತಿಲ್ಲ, ಅವಕಾಶ ಬಂದರೆ ಒಂದು ಕೈನೋಡೇ ಬಿಡುವ ದುಸ್ಸಾಹಸಕ್ಕೆ ಸಜ್ಜಾಗಿಯೇ ಇಡೀ ಸಾರಿಗೆ ಇಲಾಖೆಯನ್ನು ದೋಚಲಾರಂಭಿಸಿದ್ದಾನೆ.

ಬ್ರೇಕ್ ಇನ್ಸ್‌ಪೆಕ್ಟರ್ಸ್ ನೇಮಕಾತಿಯಲ್ಲಿ ಕಮ್ಮಿಯೆಂದರೂ ನಲವತ್ತು ಕೋಟಿ ದೋಚಲೇ ಬೇಕೆಂಬುದು ಆತನ ಸದ್ಯದ ಹೆಬ್ಬಯಕೆ. ಎಮ್ಮೆಲ್ಲೆಗಳ ಖರೀದಿಗೆ ಕನಿಷ್ಠ ಅಷ್ಟು ದುಡ್ಡಾದರೂ ಬೇಕೇಬೇಕಲ್ಲ? ●

ಗೌಡಾಗೆ ಬಿಜೆಪಿ ಫಿಟ್ಟಿಂಗ್


ಚಾಮುಂಡೇಶ್ವರಿ ಬೈಎಲೆಕ್ಷನ್‌ನಲ್ಲಿ ದೇವೇಗೌಡರ ಮರ್ಯಾದೆ ಹೋಗಲಿ ಎಂದು ಬಿಜೆಪಿ ಲೆಕ್ಕಾಚಾರ ಹಾಕಿದಂತಿದೆ. ಏಕೆಂದರೆ ಸಿದ್ಧರಾಮಯ್ಯನವರ ಗೆಲುವನ್ನು ತಪ್ಪಿಸಲು ಸಾಧ್ಯವಿಲ್ಲ ಎಂಬುದು ಖಚಿತವಾಗುತ್ತಿದ್ದಂತೆ ಕೋ-ಜಾ ಸರ್ಕಾರದ ಮಿತ್ರ ಪಕ್ಷಗಳಲ್ಲೇ ಪರಸ್ಪರರ ಮೇಲೆ ಸೋಲಿನ ಗೂಬೆ ಕೂರಿಸುವ, ಕಾಲೆಳೆಯುವ ಪಿತೂರಿಗಳು ಶುರುವಾಗಿವೆ.

ಸಿಂಪಲ್ಲಾಗಿ ಹೇಳಬೇಕೆಂದರೆ ಬಿಜೆಪಿಯೊಳಗಿನ ಅನಂತ್‌ಕುಮಾರ್ ಬಣ ಚಾಮುಂಡೇಶ್ವರಿಯಲ್ಲಿ ಗೌಡರು ಸೋತರೆ ಒಳ್ಳೆಯದೆಂದು ಕಾದಿದ್ದಾರೆ. ಆ ಸೋಲೇ ಮುಂದೆ ಕರ್ನಾಟಕದಲ್ಲಿ ಜೆಡಿಎಸ್ ಅನ್ನು ಇನ್ನಷ್ಟು ದುರ್ಬಲಗೊಳಿಸಿ ಕೊನೆಗೆ ಕೋ-ಜಾ ಸರ್ಕಾರ ಬೀಳಲಿ ಎಂಬ ನಿರೀಕ್ಷೆ ಅವರದ್ದು. ಆನಂತರ ಕಾಂಗ್ರೆಸ್-ಬಿಜೆಪಿ ಎರಡೇ ಬಲಿಷ್ಠ ಪಾರ್ಟಿಗಳಾಗಿ ಉಳಿಯುತ್ತವೆಂಬ ಲೆಕ್ಕಾಚಾರ ಕೂಡ ಇದರಲ್ಲಿದೆ. ಬಿಜೆಪಿ ವರಿಷ್ಠರಿಗೂ ಚಾಮುಂಡೇಶ್ವರಿಯಲ್ಲಿ ಜೆಡಿಎಸ್‌ಗೆ ಗೆಲುವು ಸಿಗಲಿ ಎಂಬ ಆಶಯವೇನೂ ಇಲ್ಲ, ಹಾಗಿದ್ದಿದ್ದರೆ ನಾವು ಕ್ಯಾಂಡಿಡೇಟ್ ಹಾಕುತ್ತೇವೆಂದು ಅವರು ಕ್ಯಾತೆ ತೆಗೆಯುತ್ತಿರಲಿಲ್ಲ ಅಲ್ಲವೇ? ಬಹುಶಃ ದೇವೇಗೌಡರ ನಾಲ್ಕು ದಶಕಗಳ ರಾಜಕೀಯದಲ್ಲೇ ಎಂದೂ ಅನುಭವಿಸಿರದ ಅಸಹಾಯಕ ಹಾಗೂ ಹಾಸ್ಯಾಸ್ಪದ ಪರಿಸ್ಥಿತಿ ಇದು.

ವೈರಿ ಸಿದ್ಧರಾಮಯ್ಯನವರನ್ನು ಸೋಲಿಸಲೇಬೇಕಾದ ಇಕ್ಕಟ್ಟು ಅವರದು. ಆದರೆ ಆ ತಾಕತ್ತಿರುವ ಒಬ್ಬ ಕ್ಯಾಂಡಿಡೇಟು ಗೌಡರಿಗೆ ಇವತ್ತಿಗೂ ಸಿಕ್ಕಿಲ್ಲ ಎಂಬುದೇ ಬಿಕ್ಕಟ್ಟು. ಗೌಡ ಫ್ಯಾಮಿಲಿ ಈಗ ಗತಿಯಿರದೆ ಶಿವಬಸಪ್ಪ ಎಂಬ ವೃದ್ಧ ಬಲಿಪಶುವೊಂದನ್ನು ಹುಡುಕಿದೆ. ಏನೇನೂ ವರ್ಚಸ್ಸಿರದ, ರಾಜಕೀಯ ಪಟ್ಟುಗಳೇ ಗೊತ್ತಿರದ ಕಾರ್ಯಕರ್ತರಲ್ಲಿ ಹುಮ್ಮಸ್ಸು ಮೂಡಿಸಲೂ ಆಗದ ಶಿವಬಸಪ್ಪನವರೇ ಕ್ಯಾಂಡಿಡೇಟ್ ಆಗುವುದಾದರೆ ಚಾಮುಂಡೇಶ್ವರಿ ಬೈಎಲೆಕ್ಷನ್ನಿನ ಫಲಿತಾಂಶವನ್ನು ಈಗಲೇ ಘೋಷಿಸಿಬಿಡಬಹುದು.







ಶಿವಬಸಪ್ಪ

ಸಿದ್ಧರಾಮಯ್ಯ ಗೆಲ್ಲುತ್ತಾರೆಂದು!

ಕ್ಯಾಂಡಿಡೇಟ್ ಸಿಗುತ್ತಿಲ್ಲವೆಂಬ ಕಷ್ಟ ಒಂದೆಡೆಯಾದರೆ ಮಿತ್ರಪಕ್ಷ ಬಿಜೆಪಿಗಳ ಕಿರುಕುಳವೂ ಗೌಡರನ್ನು ಕಾಡುತ್ತಿದೆ. ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಹೇಳಿಕೊಳ್ಳುವ ಜನಬೆಂಬಲವಿಲ್ಲದಿದ್ದರೂ 'ನಾವೂ ಕ್ಯಾಂಡಿಡೇಟ್ ಹಾಕುತ್ತೀವಿ' ಎಂದು ಬಿಜೆಪಿಗಳು ಹಠ ಹಿಡಿದಿರುವುದು ಗೌಡರಿಗೆ ಇನ್ನೊಂದು ಕಿರಿಕಿರಿ. ಅದು ಹೋಗಲಿ ಬಿಜೆಪಿಗಾದರೂ ಅಲ್ಲಿ ತೂಕವಾದ ಅಭ್ಯರ್ಥಿ ಇದ್ದಾನಾ ಎಂದು ನೋಡಿದರೆ ಅದು ಮುನ್ಸಿಪಾಲಿಟಿ ಲೆವೆಲ್‌ನವರ ಹೆಸರು ಮುಂದೆ ಮಾಡುತ್ತಿದೆಯೇ ವಿನಃ ಸಿದ್ದುಗೆ ಪೈಪೋಟಿ ನೀಡಬಲ್ಲವರು ಯಾರೂ ಇಲ್ಲ.

ಗೌಡ ಫ್ಯಾಮಿಲಿಗೆ ಇಂಥ ದುಃಸ್ಥಿತಿ ಬರಲು ಸ್ವತಃ ದೇವೇಗೌಡರೇ ಕಾರಣ. ಸಿದ್ಧರಾಮಯ್ಯನವರನ್ನು ಜೆಡಿಎಸ್‌ನಿಂದ ಉಚ್ಚಾಟಿಸಿ ಹೆಚ್ಚುಕಡಿಮೆ ಒಂದು ವರ್ಷವಾಗುತ್ತಾ ಬಂದಿದೆ. ಆಗಿನಿಂದಲೂ ರಾಜ್ಯದಲ್ಲಿ ಸಿದ್ದು ಬಲ ಕುಂದಿಸಲು ಗೌಡರು ನಾನಾ ತಂತ್ರ ಮಾಡುತ್ತಲೇ ಬಂದಿದ್ದಾರೆ.

ಜಿಲ್ಲಾ ಪಂಚಾಯಿತಿ ಎಲೆಕ್ಷನ್‌ನಲ್ಲಿ ಸಾಕಷ್ಟು ಕಡೆ ಕುರುಬ ನಾಯಕರುಗಳಿಗೆ ಜೆಡಿಎಸ್ ಟಿಕೆಟ್ ಕೊಟ್ಟು ಸಿದ್ದು ಅಹಿಂದ ಬೆಂಬಲಿಗರನ್ನು ಸೆಳೆಯಲು ನೋಡಿದ್ದರು. ಒಳಮೀಸಲಾತಿ ವಿಚಾರ ಎತ್ತಿ ಅಹಿಂದ ವಿಭಜಿಸುವ ತಂತ್ರ ಮಾಡಿದ್ದರು. ಕೊನೆಗೆ ಇವ್ಯಾವುದೂ ಫಲ

ಈಶ

ನೀಡಿರಲಿಲ್ಲ. ಆದರೆ ಈ ಗದ್ದಲದಲ್ಲಿ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಸಿದ್ಧರಾಮಯ್ಯನವರ ವಿರುದ್ಧ ಒಬ್ಬ ಸಮರ್ಥ ನಾಯಕನನ್ನು ಆಗಿನಿಂದಲೇ ಬೆಳೆಸಬೇಕಿತ್ತೆಂಬ ವಿಷಯವನ್ನು ಗೌಡರು ಮರೆತಿದ್ದರು. ಕೋ-ಜಾ ಸರ್ಕಾರ ಸ್ಥಾಪನೆ, ಮಕ್ಕಳು-ಸೊಸೆಯಂದಿರ ಅಕ್ರಮ ಆಸ್ತಿ ಗಳಿಕೆ ಹಗರಣಗಳ ಮ್ಯಾನೇಜ್‌ಮೆಂಟ್, ಜನಾರ್ದನ ರೆಡ್ಡಿ ಸಿಡಿಸಿದ ಸಿಡಿ ಹಗರಣಗಳ ಕ್ರೈಸೀಸ್ ಇದರಲ್ಲೇ ಮುಳುಗಿಹೋಗಿದ್ದ ಗೌಡರು ಚಾಮುಂಡೇಶ್ವರಿ ಬೈಎಲೆಕ್ಷನ್ ಮುಂದೂಡಿಸಲು ಲಾಬಿ ಮಾಡಿದ್ದರು. ಇದ್ಯಾವುದೂ ಕೈಗೂಡದೆ ಅವರ ಹಾಗೂ ಸರ್ಕಾರದ ವರ್ಚಸ್ಸು ಪಾತಾಳ ತಲುಪಿತ್ತು.

ಅದರ ಫಲಿತಾಂಶವೇ ಗೌಡರ ಇವತ್ತಿನ ಅನಾಥ ಪರಿಸ್ಥಿತಿ. ರಾಜಶೇಖರಮೂರ್ತಿ, ಚಿದಾನಂದ್, ರೇವಣಸಿದ್ಧಯ್ಯ, ಒಡೆಯರ್, ಪ್ರಮೋದಾ ದೇವಿ ಇವರೆಲ್ಲಾ ಅಖಾಡಕ್ಕಿಳಿಯಲು 'ನಾನೊಲ್ಲೆ' ಎಂದು ಕೈಚೆಲ್ಲಿದ ನಂತರ ಜೆಡಿಎಸ್‌ನವರ ಕದನೋತ್ಸಾಹ ಅರ್ಧಕರ್ಧ ಇಳಿದು ಹೋಗಿತ್ತು, ಅಲ್ಲಿಂದಾಚೆಗೆ ಗೌಡರ ಫ್ಯಾಮಿಲಿ ತೇಲಿಬಿಟ್ಟಿರುವ ಹೆಸರುಗಳಾದರೂ ಎಂಥವು. ಗುರುಸ್ವಾಮಿ, ಮಾವಿನಹಳ್ಳಿ ಸಿದ್ದೇಗೌಡ, ನಟ ಸುದೀಪ್-ಈಗ ಕಂಟ್ರಾಕ್ಟರ್ ಶಿವಬಸಪ್ಪ ಅಂತೆ.

ರಂಗನ ಮುಂದೆ ಸಿಂಗನೇ ಎಂಬಂತಿದೆ ಈ ಹೆಸರುಗಳು. ಮತ್ತೊಂದೆಡೆ ದುರ್ಭಿಕ್ಷದಲ್ಲಿ ಅಧಿಕಮಾಸ ಎಂಬಂತೆ ಬಿಜೆಪಿಗಳ ಕಿರುಕುಳ ಬೇರೆ.

ಕಳೆದ ಎಲೆಕ್ಷನ್‌ನಲ್ಲಿ ಬಿಜೆಪಿಯಿಂದ ಸ್ಪರ್ಧಿಸಿದ್ದ ಅಪ್ಪಣ್ಣ ಮೂರನೇ ಸ್ಥಾನ ಗಳಿಸಿದ್ದರು. ಅಪ್ಪಣ್ಣ ಗಳಿಸಿದ್ದ 30 ಸಾವಿರ ಓಟುಗಳು ಆತನ ಸ್ವಸಾಮರ್ಥ್ಯ ಹಾಗೂ ಜಾತಿ ಬೆಂಬಲದಿಂದ ಬಿದ್ದವುಗಳೇ ವಿನಃ ಬಿಜೆಪಿ ಮುಖ ನೋಡಿ ಜನ ಹಾಕಿದ್ದ ಓಟುಗಳಲ್ಲ. ಈಗ ಅಪ್ಪಣ್ಣ ಸಿದ್ಧರಾಮಯ್ಯ ಜೊತೆಗಿದ್ದಾರೆ. ಬಿಜೆಪಿಗೆ ಕ್ಷೇತ್ರದಲ್ಲಿ ನೆಲೆಯೇ ಇಲ್ಲ. ಹೀಗಿದ್ದಾಗಲೂ ಬಿಜೆಪಿಗಳು ಚೇಷ್ಟೆ ಬಿಡದೆ 'ಕ್ಷೇತ್ರ ನಮಗೇ ಬಿಟ್ಟುಕೊಡಿ' ಎನ್ನುತ್ತಿದ್ದಾರೆ. ಅವರು ಹೇಳುತ್ತಿರುವ ಹೆಸರುಗಳೋ ನಾಗೇಂದ್ರ, ಎಸ್.ಆರ್. ಗೋಪಾಲರಾವ್, ಮಾಜಿ ಜಿಲ್ಲಾಧ್ಯಕ್ಷ ನಂಜುಂಡಸ್ವಾಮಿ, ಎಸ್.ಡಿ. ಮುಗೇಂದ್ರ, ಜಗದೀಶ ಗೌಡ ಮುಂತಾದ ಅನಾಮಿಕರದ್ದು.

ಸಂಸದ ವಿಜಯಶಂಕರ್, ಶಾಸಕ ತೋಂಟದಾರ್ಯ, ರಾಮದಾಸ್ ಎಲ್ಲರನ್ನು ಕೇಳಿ ಬಿಜೆಪಿಯೂ ಈಗಾಗಲೇ 'ನೋ' ಎನ್ನಿಸಿಕೊಂಡಿದೆ.

ಸೋಲೊಪ್ಪಿಕೊಂಡ ಗೌಡ

'ಸರ್ಕಾರದ ಸಾಧನೆಗೆ ಚಾಮುಂಡೇಶ್ವರಿ ಫಲಿತಾಂಶ ಅಳತೆಗೋಲಲ್ಲ' 'ಚಾಮುಂಡೇಶ್ವರಿ ಫಲಿತಾಂಶ ಏನೇ ಆದರೂ ಸರ್ಕಾರ ಭದ್ರವಾಗಿರುತ್ತದೆ' ಎಂಬೆಲ್ಲಾ ಹೇಳಿಕೆಗಳನ್ನು ಮುಖ್ಯಮಂತ್ರಿ ಕುಮಾರಸ್ವಾಮಿ ನೀಡುತ್ತಿದ್ದಾರೆ.

ಅತೀ ತಮಾಷೆಯ ವಿಷಯ ಏನೆಂದರೆ ಜೆಡಿಎಸ್ ಅಭ್ಯರ್ಥಿ ಎಂದು ಹೇಳಲಾಗುತ್ತಿರುವ ಕಂಟ್ರಾಕ್ಟರ್ ಶಿವಬಸಪ್ಪನನ್ನು ಅಪ್ಪಿತಪ್ಪಿಯೂ ಜೆಡಿಎಸ್ ಅಭ್ಯರ್ಥಿ ಎನ್ನದೆ 'ವೀರಶೈವ ಅಭ್ಯರ್ಥಿ' ಎಂದು ಬಿಂಬಿಸುತ್ತಿರುವುದು.

ಚಾಮುಂಡೇಶ್ವರಿ ಬೈ ಎಲೆಕ್ಷನ್ನಿನಲ್ಲಿ ದೇವೇಗೌಡ ಅನಾಥರಾಗಿದ್ದಾರೆನ್ನಲು ಇದಕ್ಕಿಂತ ಇನ್ನೇನು ಸಾಕ್ಷಿ ಬೇಕು.

ಕಾಂಗ್ರೆಸ್ ಐಕ್ಯತೆ-ಜೆಡಿಎಸ್ ಒಡಕು

ಸಿದ್ಧರಾಮಯ್ಯ ಈಗ ಲಿಂಗಾಯತ ಮುಖಂಡ ರೇವಣಸಿದ್ಧಯ್ಯ ಹಾಗೂ ಒಕ್ಕಲಿಗ ಲೀಡರ್ ಮಾದೇಗೌಡರನ್ನು ಅಕ್ಕಪಕ್ಕ ಇರಿಸಿಕೊಂಡು ಓಡಾಡುತ್ತಿದ್ದಾರೆ. ಇವರೊಂದಿಗೆ ನಾಯಕ ಜನಾಂಗದ ಜನಪ್ರಿಯ ನಾಯಕ ಅಪ್ಪಣ್ಣ ಹೇಗೂ ಸಿದ್ದು ಜೊತೆಯಲ್ಲೇ ಇದ್ದಾರೆ. ಈ ಎಲೆಕ್ಷನ್‌ಗೆ ಇನ್ನಷ್ಟು ಖದರ್ ಬರುತ್ತಿರುವುದು ಸಂಸದ, ಕೇಂದ್ರ ಸಚಿವ ಅಂಬರೀಷ್‌ರಿಂದಾಗಿ. ಸಿದ್ದು ಪರ ಅಂಬಿ ಪೂರ್ಣವಾಗಿ ಪ್ರಚಾರಕಾರ್ಯ ನಡೆಸಲಿದ್ದಾರೆ. ಜೊತೆಗೆ ಡಿ.ಕೆ. ಶಿವಕುಮಾರ್‌ಗೂ ಮೈಸೂರು ರಾಜಕೀಯದಲ್ಲಿ ಅಲ್ಪಸ್ವಲ್ಪ ಹತೋಟಿ ಇದೆ. ಎಚ್. ವಿಶ್ವನಾಥ್ ಹೇಗೂ ಸಿದ್ದೂ ಪರ ಇದ್ದೇ ಇದ್ದಾರೆ. ಮಾಜಿ ಸಚಿವ ವಿ. ಶ್ರೀನಿವಾಸ ಪ್ರಸಾದ್ ಕೂಡ ಸಿದ್ಧರಾಮಯ್ಯಗೆ ಬೆಂಬಲ ಸೂಚಿಸಿದ್ದಾರೆ.

ಆದರೆ ಗೌಡರ ಪಾಳೆಯದ ಪರಿಸ್ಥಿತಿ ಹೇಗಿದೆ ಗೊತ್ತೆ? ಜಿ.ಟಿ. ದೇವೇಗೌಡ ಒಬ್ಬರನ್ನು ಬಿಟ್ಟರೆ ಗೌಡಾಗೆ ಜೈ ಅನ್ನುವ ಇನ್ನೊಬ್ಬ ಲೀಡರ್ ಅಲ್ಲಿಲ್ಲ. ಸಚಿವ ಡಿ.ಟಿ. ಜಯಕುಮಾರ್ ಅನಾರೋಗ್ಯದ ಕಾರಣ ಚೆನ್ನೈನಲ್ಲಿದ್ದಾರೆ. ಅವರ ಆರೋಗ್ಯ ಸರಿ ಇದ್ದಿದ್ದರೂ ಸಕ್ರಿಯವಾಗಿ ಚುನಾವಣಾ ಪ್ರಚಾರಕ್ಕೆ ಹೋಗುತ್ತಿರಲಿಲ್ಲ. ಏಕೆಂದರೆ ಅವರ ವೈರಿ ಜಿ.ಟಿ. ದೇವೇಗೌಡ ಜಯಕುಮಾರ್‌ಗೆ ಪರ್ಯಾಯವಾಗಿ ಚಿಕ್ಕಮಾದುರನ್ನು ಬೆಳೆಸುತ್ತಿದ್ದಾರೆಂಬ ಸಿಟ್ಟು ದಿಟಜೆಗಿದೆ.

ಹೀಗೆ ಪ್ರತಿಯೊಬ್ಬರಿಗೂ ಅವರವರ ಸ್ವಹಿತಾಸಕ್ತಿಗಳೇ ಮುಖ್ಯವಾಗಿ ಬಿಟ್ಟಿರುವುದರಿಂದ ದೇವೇಗೌಡರ ಮರ್ಯಾದೆ ಉಳಿಸಬೇಕೆಂಬ ಜೆಡಿಎಸ್ ಪಾರ್ಟಿ ಬೆಳೆಸಬೇಕೆಂಬ ಇರಾದೆ ಯಾರಿಗೂ ಇಲ್ಲದಂತಾಗಿದೆ.

ಹೀಗಿರುವಾಗ ಗೌಡರು ಸಿದ್ಧರಾಮಯ್ಯನವರನ್ನು ಸೋಲಿಸುವ ಮಾತೆಲ್ಲಿ! ■

ಮೈಸೂರು ನಗರಪಾಲಿಕೆ ಎಲೆಕ್ಷನ್ ಲೆಕ್ಕಾಚಾರ

ಚಾಮುಂಡೇಶ್ವರಿಯಲ್ಲಿ ಬಿಜೆಪಿ ಅಸ್ತಿತ್ವದಲ್ಲೇ ಇರದಿದ್ದಾಗಲೂ ಕ್ಯಾಂಡಿಡೇಟ್ ಹಾಕುವ ಬಿಜೆಪಿ ಬ್ಲ್ಯಾಕ್‌ಮೇಲಿಗೆ ಮುಂಬರುವ ಮೈಸೂರು ನಗರ ಪಾಲಿಕೆ ಎಲೆಕ್ಷನ್ನೇ ಕಾರಣ ಎನ್ನಲಾಗುತ್ತಿದೆ.

ಈ ಡಿಸೆಂಬರ್‌ಗೆ ಹಾಲಿ ಸದಸ್ಯರ ಅವಧಿ ಮುಗಿಯಲಿದೆ. ಚಾಮುಂಡೇಶ್ವರಿ ಕ್ಷೇತ್ರದ ವ್ಯಾಪ್ತಿಗೆ ನಗರ ಪಾಲಿಕೆಯ ಒಂಭತ್ತು ಕ್ಷೇತ್ರಗಳೂ ಸೇರಿವೆ. ಹಾಗಾಗಿ ಮುಂಬರುವ ಪಾಲಿಕೆ ಎಲೆಕ್ಷನ್‌ನಲ್ಲಿ ಜೆಡಿಎಸ್‌ನೊಂದಿಗೆ ಸೀಟು ಹೊಂದಾಣಿಕೆ ಮಾಡಿಕೊಂಡು ಹೆಚ್ಚು ಅವಕಾಶ ಗಿಟ್ಟಿಸುವ ಯೋಚನೆ ಬಿಜೆಪಿಗಳಿಗಿದೆ. ಅದಕ್ಕಾಗೇ ಸುಖಾಸುಮ್ಮನೆ 'ಚಾಮುಂಡೇಶ್ವರಿಲೀ ಸ್ಪರ್ಧಿಸುತ್ತೇವೆ' ಎಂದು ಗುಮ್ಮ ತೋರಿಸಿ ಜೆಡಿಎಸ್ ಅನ್ನು ಬಗ್ಗಿಸಲು ಬಿಜೆಪಿ ನೋಡುತ್ತಿದೆ. ಬಿಜೆಪಿ ಷರತ್ತುಗಳಿಗೆ ಜೆಡಿಎಸ್ ಏನಾದರೂ ಒಪ್ಪಿಕೊಂಡರೆ ಆಗ ಮಾತ್ರ ಚಾಮುಂಡೇಶ್ವರಿಯಲ್ಲಿ ತ್ರಿಕೋನ ಸ್ಪರ್ಧೆ ತಪ್ಪಿಸಲು ಸಾಧ್ಯ ಎನ್ನುತ್ತಿದೆ ಬಿಜೆಪಿ ಮೂಲಗಳು.

ಒಂದು ರೀತಿಯಲ್ಲಿ ಇದೂ ಕೂಡ ಬಿಜೆಪಿಗಳು ದೇವೇಗೌಡರಿಗೆ ಇಡುತ್ತಿರುವ ಫಿಟ್ಟಿಂಗ್!

ರಾಜಶೇಖರಮೂರ್ತಿ ನಾಪತ್ತೆ!

ಸಂಸದ ರಾಜಶೇಖರಮೂರ್ತಿ ಚಾಮುಂಡೇಶ್ವರಿ ಕ್ಷೇತ್ರದಲ್ಲೆಲ್ಲೂ ಕಾಣುತ್ತಿಲ್ಲ. ಅವರು ಮೈಸೂರು, ಬೆಂಗಳೂರು, ಕೊನೆಗೆ ದೆಹಲಿಯಲ್ಲೂ ಇಲ್ಲ... ದೇವೇಗೌಡರ ಮಾನ-ಪ್ರಾಣ ಎರಡೂ ಆಗಿರುವ ಈ ಎಲೆಕ್ಷನ್ ಸಮಯದಲ್ಲಿ ಮೂರ್ತಿಗಳು ಸೀದಾ ಲಕ್ನೋಗೆ ಹೋಗಿ ಪರಿಚಿತರೊಬ್ಬರ ಮನೆಯಲ್ಲಿ ಕುಳಿತುಬಿಟ್ಟಿದ್ದಾರೆ.

'ಸಿದ್ಧರಾಮಯ್ಯನ ಸೋಲಿಸೋದು ನಿಮ್ಮ ಜವಾಬ್ದಾರಿ' ಎಂದು ದೇವೇಗೌಡರು ಗಂಟುಬಿದ್ದಿರುವುದರಿಂದ ಗೌಡರ ಕಾಟದಿಂದ ಪಾರಾಗಲು ಮೂರ್ತಿ ಹೀಗೆ ಮಾಡಿದ್ದಾರಂತೆ.

ಅಷ್ಟೇ ಅಲ್ಲ, ಸಿದ್ಧರಾಮಯ್ಯ ಗೆಲುವನ್ನು ಹೇಗೂ ತಡೆಯಲು ಸಾಧ್ಯವಿಲ್ಲ ಎಂಬುದು ಗೊತ್ತಾಗಿರುವುದರಿಂದ ಗೌಡರು ಅದೇ ನೆಪವಿಟ್ಟುಕೊಂಡು ಮೂರ್ತಿಯವರನ್ನು ಬಲಿ ಹಾಕುವ ದುರುದ್ದೇಶ ಇಟ್ಟುಕೊಂಡಿದ್ದಾರೆಂಬ ಪುಕಾರುಗಳೂ ಎದ್ದಿವೆ.

ಶಿವಬಸಪ್ಪನವರನ್ನು ಮೂರ್ತಿ ಕ್ಯಾಂಡಿಡೇಟ್ ಎಂದೇ ಬಿಂಬಿಸಿ ಆತ ಸೋತ ನಂತರ ಮೂರ್ತಿಯವರಿಗೆ ನಿಮ್ಮ ಅಭ್ಯರ್ಥಿಯನ್ನೇ ಗೆಲ್ಲಿಸಿಕೊಳ್ಳಲಿಕ್ಕಾಗಲಿಲ್ಲವಾ ನಿಮಗೆ' ಎಂದು ಗೂಬೆ ಕೂರಿಸಿ ಪಾರ್ಟಿಯಲ್ಲಿ ಬೆಲೆ ಇರದಂತೆ ಮಾಡುವ ತಂತ್ರ ಗೌಡರದ್ದು.

ಮೂರ್ತಿಗೆ ಇದು ಗೊತ್ತಾಗೆ ಲಕ್ನೋಗೆ ಹಾರಿ ಹೋಗಿದ್ದಾರೆ.

---

45 ಹುದ್ದೆಗಳನ್ನು ಹೆಚ್ಚಿಗೆ ಸೇರಿಸಿ ಒಟ್ಟೂ 190 ಹುದ್ದೆಗಳಿಗೆಂದು ಕೆಪಿಎಸ್‌ಸಿ ಸಂದರ್ಶನಕ್ಕೆ ಮುಂದಾಯಿತು. ತಲಾ ಹುದ್ದೆಯೊಂದಕ್ಕೆ ಐದು ಅರ್ಜಿಗಳಂತೆ ಪರಿಗಣಿಸಿ ಅಂತಿಮವಾಗಿ ಒಂಬೈನೂರೈವತ್ತು ಅಭ್ಯರ್ಥಿಗಳನ್ನು ಕೆಪಿಎಸ್‌ಸಿ ಅಧ್ಯಕ್ಷ ಕೃಷ್ಣ ಎತ್ತಿಟ್ಟುಕೊಂಡಿದ್ದಾರೆ. ಇದೇ ನವೆಂಬರ್ 16 ರಿಂದ 24 ರ ತನಕ ಸಂದರ್ಶನ ನಿಗದಿಕೊಂಡಿದೆ.

ಇದೊಂದು ಕಪಟ ನಾಟಕ ಎಂಬುದು ಸಂದರ್ಶಕರಿಗೂ ಗೊತ್ತು, ಅಭ್ಯರ್ಥಿಗಳಿಗೂ ಗೊತ್ತು, ಸಾಮಾನ್ಯವಾಗಿ ಮೆಕಾನಿಕಲ್, ಆಟೋಮೊಬೈಲ್ ಡಿಪ್ಲೊಮಾದವರ್‍ಯಾರಾದರೂ ಯಾರಿಗೋ ಬಗ್ಗಿಗೋ ಹೇಗೆ ಬಾಲಕರಾಗಿರಲು ಸಾಧ್ಯ? ಸರ್ಕಾರ ವಿಶಾವಿಕಪ್ಪ ನೇಮಕಾತಿ ನಿಯಮಗಳಿಗೇ ಉಲ್ಟಾ ಹೊಡೆಯಬಹುದೆಂದು ಅವರಿಗೇನು ಕನಸು ಬಿದ್ದಿರುತ್ತಾ?

ಆದರೆ ವಾಸ್ತವವೇ ಬೇರೆಯಿತ್ತು, ಇಲ್ಲಿಗೆ ಮೂರು ತಿಂಗಳ ಹಿಂದೆಯೇ ಬಹುಪಾಲು ಬ್ರೇಕ್ ಇನ್ಸ್‌ಪೆಕ್ಟರ್ ಹುದ್ದೆಗಳು ಹರಾಜಾಗಿಹೋಗಿತ್ತು, ಮಂತ್ರಿ ಚೆಲುವನ ಚೇಲಾಗಳು ಮೊದಲೇ ಗಿರಾಕಿಗಳನ್ನು ಹಿಡಿತಂದು ವ್ಯಾಪಾರ ಮುಗಿಸಿದ್ದರು. ಮೊದಲೇ ಖರೀದಿಗೊಂಡ ಹುದ್ದೆಗಳಿಗೆ ಬಾಕಿ ಉಳಿದದ್ದು ಕೇವಲ ಕಾಟಾಚಾರದ ಸಂದರ್ಶನ ಮಾತ್ರ. ಅದಕ್ಕೇನು ಬೇಕೋ ಅಂಥ ನಿಯಮಾವಳಿಗಳನ್ನೇ ರೂಪಿಸಿಕೊಳ್ಳಲಾಗಿತ್ತು.

ನೇಮಕಾತಿಗೆ ಜಾಹೀರಾತು ಕೊಟ್ಟ ಬರೇ ಒಂದು ತಿಂಗಳಲ್ಲಿ ಡ್ರೈವಿಂಗ್ ಕಲಿತು ಲೈಸೆನ್ಸ್ ಪಡೆಯುವುದು ಕೇವಲ ಕಾಸು ಕೊಟ್ಟು ಮೊದಲೇ ಖರೀದಿಸಿದವನಿಗಷ್ಟೇ ಸಾಧ್ಯ. ಹಾಗೆ ನಲವತ್ತೋ ಐವತ್ತೋ ಲಕ್ಷ ಕೊಟ್ಟು ಬ್ರೇಕ್ ಇನ್ಸ್‌ಪೆಕ್ಟರ್ ಆಗುವವನು ಲಿಖಿತ ಪರೀಕ್ಷೆಯಲ್ಲಿ ದುಮುಕಿ ಹೊಡೆದರೆ? ಮುಂದೊಮ್ಮೆ ಕೋರ್ಟ್ ಇದನ್ನೆಲ್ಲ ಪರಿಶೀಲಿಸಿಬಿಟ್ಟರೆ? ಜೊತೆಗೆ ಕುಟ್ಟಾ ಕುರುಡನೋ ರೋಗಿಯೋ ಆಗಿದ್ದು ಅರ್ಧ ಫರ್ಲಾಂಗ್ ಓಡುವುದಕ್ಕೂ ಆಗದೇ ಹೋದರೆ? ಅದಕ್ಕೆಂದೇ ಲಿಖಿತ ಪರೀಕ್ಷೆ ಮತ್ತು ದೈಹಿಕ ಪರೀಕ್ಷೆಗಳೆರಡನ್ನೂ ರದ್ದುಗೊಳಿಸಲಾಯಿತು. ನೂರೋ ಇನ್ನೂರೋ ಕೊಟ್ಟರೆ ಡಾಕ್ಟರ್ ಸರ್ಟಿಫಿಕೇಟು ಸಿಕ್ಕಿಬಿಡುತ್ತದೆ. ಆಂಧ್ರಕ್ಕೋ ತಮಿಳುನಾಡಿಗೋ ಹೋಗಿ ಕಾಸು ಕೊಟ್ಟರೆ ಒಂದೇ ದಿನಕ್ಕೆ ಡ್ರೈವಿಂಗ್ ಲೈಸೆನ್ಸು ಸಿಕ್ಕಿಬಿಡುತ್ತದೆ.

ಡ್ರೈವಿಂಗ್ ಬರದೇ ಹೋದರೂ ಹಾಗಂಥ ಲೈಸೆನ್ಸು ಕೊಟ್ಟರೆ ಸಾಕಲ್ಲ? ಒಂದು ಪಕ್ಷ ಮೊದಲೇ ಡ್ರೈವಿಂಗ್ ಲೈಸೆನ್ಸ್ ಇಲ್ಲದೇ ಒಂದೇ ಕಂತಿನಲ್ಲಿ ಐವತ್ತು ಲಕ್ಷ ಕೊಟ್ಟುಬಿಟ್ಟರೆ ಸಾಕು, ಚೆಲುವನ ಬಂಟರೇ ಆಂಧ್ರಕ್ಕೆ ಕರೆದೊಯ್ದು ಬೋಗಸ್ ಡ್ರೈವಿಂಗ್ ಲೈಸೆನ್ಸ್ ಕೊಡಿಸುವ ವ್ಯವಸ್ಥೆಯೂ ಇದೆ. ಇಂಥಾ ಗೋಲ್‌ಮಾಲ್ ನೇಮಕಾತಿಯ ಲಾಭವಾಗುವುದೇನಿದ್ದರೂ ಬೆಂಗಳೂರಿನ ಖದೀಮ ಅಭ್ಯರ್ಥಿಗಳಿಗೆ ಮಾತ್ರ. ಎಲ್ಲೋ ಉಡುಪಿಯ ಬಿಜಾಪುರದ ಗ್ರಾಮೀಣ! ಅಭ್ಯರ್ಥಿಯೊಬ್ಬನಿಗೆ ಈ ರೀತಿ ರೊಕ್ಕ ಕೊಟ್ಟು ಬೋಗಸ್ ಸರ್ಟಿಫಿಕೇಟುಗಳನ್ನು ಹೊಂದಿಸುವುದು ಸಾಧ್ಯವೇ?

ಲೋಕಸೇವಾ ಆಯೋಗದ ನೇಮಕಾತಿ ಸಮಿತಿಯಲ್ಲಿ ಸಾರಿಗೆ ಇಲಾಖೆಯ ಒಬ್ಬ ಪ್ರತಿನಿಧಿಯಿದ್ದು ಆತನೇ ಮೌಖಿಕ ಸಂದರ್ಶನ ನಡೆಸುತ್ತಾನೆ. ಈ ಮೌಖಿಕ ಸಂದರ್ಶನ ಅದೆಷ್ಟು ಸಿನಿಮೀಯ ಮತ್ತು ಹಾಸ್ಯಾಸ್ಪದವೆಂದರೆ, ಅಲ್ಲಿ ಡೀಲಿನ ಹೊರತು ಬೇರೆ ಪ್ರಶ್ನೆಗಳೇ ಇರುವುದಿಲ್ಲ. ಇಂಥ ಗೋಲ್‌ಮಾಲ್ ನೇಮಕಾತಿ ವಿರುದ್ಧ ಈಗಾಗಲೇ [illegible] ನ್ಯಾಯವಾದಿಗಳಾದ ರವಿವರ್ಮ ಕುಮಾರ್, [illegible] ಮತ್ತು [illegible] ನ್ಯಾಯಮೂರ್ತಿ ನರಸಿಂಹನ್ ನೂರಕ್ಕೂ ಹೆಚ್ಚು [illegible] ಕೆಪಿಎಸ್‌ಸಿಗೂ, ಕರ್ನಾಟಕ ಆಡಳಿತ ನ್ಯಾಯಮಂಡಳಿಗೂ (ಕೆಎಟಿ) ದೂರು ಕೊಟ್ಟಿದ್ದಾರೆ. ದುರಂತವೆಂದರೆ ಇದಕ್ಕೆ ತಡೆಯಾಜ್ಞೆ ಕೊಡಬೇಕಿದ್ದ ಕೆಎಟಿ ಸಾರಿಗೆ ಇಲಾಖೆ, ಕಾಟಾಚಾರಕ್ಕೊಂದು ನೋಟೀಸ್‌ನಷ್ಟೇ ಕೊಟ್ಟು ತಿಪ್ಪೆ ಸಾರಿಸುತ್ತಿದೆ. ಲೋಕಸೇವಾ ಆಯೋಗದ ಅಧ್ಯಕ್ಷ ಹಾ. ಕೃಷ್ಣ ಇಂಥ ಯಾವುದೇ ದೂರಿಗೆ ಕವಡೆ ಕಿಮ್ಮತ್ತು ಕೊಟ್ಟಿಲ್ಲ.


ಒಂದು ಹುದ್ದೆಗೆ ಕನಿಷ್ಠ ನಲವತ್ತು ಲಕ್ಷದ ಲೆಕ್ಕ ಹಾಕಿದರೂ ಅದು 74 ಕೋಟಿ ರೂಪಾಯಿಗಳ ಕರ್ಮಕಾಂಡ! ಇದರಲ್ಲಿ ಸಿಂಹಪಾಲು ಮಂತ್ರಿ ಚೆಲುವನ ಕೈ ಸೇರುತ್ತದೆ. ಗೌಡರ ಫ್ಯಾಮಿಲಿಯ ಕಾಣಿಕೆಯೆಂದು ಕನಿಷ್ಠ ಇಪ್ಪತ್ತೈದು ಕೋಟಿಯಷ್ಟನ್ನು ಬಾಲಕೃಷ್ಣೇಗೌಡರ ಕೈಗಿತ್ತರೂ ಎಲ್ಲಾ ಕಳೆದು ಸಾರಿಗೆ ಮಂತ್ರಿಗೆಂದು ನಲವತ್ತು ಕೋಟಿ ಮಿಕ್ಕುತ್ತದೆ

[illegible] ■

ಎಚ್.ಜಿ.ರಾಮುಲು ಜೊತೆ ಅನಿಲ್ ಲಾಡ್: ಅನ್ಸಾರಿಗೆ ಅಡ್ಡಗಾಲು?

ಕೊಪ್ಪಳ

ಜುಲೈ 16ರಂದು ಕೂಡ್ಲಿಗಿ ಎಂ.ಎಲ್.ಎ. ಗಣಿ ಧಣಿ ಅನಿಲ್ ಲಾಡ್ ಕೊಪ್ಪಳಕ್ಕೆ ಬಂದುಹೋಗಿದ್ದು ಇಲ್ಲಿ ಕೆಲವರಿಗೆ ಚಳಿಜ್ವರ ಬರಿಸಿತ್ತೇನೋ? ಈಗ ಮತ್ತೆ ನವೆಂಬರ್ 4ರಂದು ಗಂಗಾವತಿಗೆ ಬಂದ ಅನಿಲ್ ಲಾಡ್‌ನ ಹೆಲಿಕಾಪ್ಟರ್ ಕಾಂಗ್ರೆಸ್‌ನ ಮಾಜಿ ಸಂಸದ ಎಚ್.ಜಿ. ರಾಮುಲುರನ್ನು ಕರೆದುಕೊಂಡು ಹೋದದ್ದೇ ತಡ, ಜಿಲ್ಲೆಯ ಅದರಲ್ಲೂ ಗಂಗಾವತಿಯ ರಾಜಕಾರಣದಲ್ಲಿ ಕರೆಂಟ್ ಶಾಕ್ ಹೊಡೆದಂತಾಗಿದೆ.


ಅನಿಲ್ ಲಾಡ್

ಬಲ್ಲ ಮೂಲಗಳ ಪ್ರಕಾರ, ಎಲ್ಲ ಅಂದುಕೊಂಡಂತೆ ನಡೆದರೆ ಮುಂದಿನ ಚುನಾವಣೆಯಲ್ಲಿ ಗಂಗಾವತಿಗೆ ಅನಿಲ್ ಲಾಡ್ ಇಳಿಯುವುದು ಖಚಿತ. ಏಕೆಂದರೆ ಇಲ್ಲೀಗ ರಾಮುಲು ಆಸ್ಥಾನದಿಂದ ಹೊರ ಬಂದು ಜೆಡಿಎಸ್ ಸೇರಿ ಮಂತ್ರಿಯಾಗಿರುವ ಇಕ್ಬಾಲ್ ಅನ್ಸಾರಿಯ ಅಬ್ಬರಕ್ಕೆ ಕಡಿವಾಣ ಹಾಕಲು ಅನ್ಸಾರಿಯಷ್ಟೇ ಯಂಗ್, ಚಾರ್ಮಿಂಗ್, ರಿಚ್ ಕ್ಯಾಂಡಿಡೇಟು ಬೇಕಿದೆಯಂತೆ! ಅದಕ್ಕಾಗಿ ಸಿಕ್ಕಿರೋ ಕುದುರೆ ಅಂದ್ರೆ ಅದು ಅನಿಲ್ ಲಾಡ್.

ಆತ ಸ್ವಕ್ಷೇತ್ರ ಬಿಟ್ಟು ಬರುವ ಅವಶ್ಯವೇನಿದೆ ಅಂತೀರಾ? ಮುಂದಿನ ಬಾರಿ ಕೂಡ್ಲಿಗಿ ಮೀಸಲು ಆಗಲಿದೆ. ಗಣಿಯಲ್ಲಿ 'ದುಡಿದಿದ್ದನ್ನು' ಸೇಫಾಗಿ ಇಟ್ಟುಕೊಳ್ಳಲು ಅನಿಲ್‌ಲಾಡ್‌ಗೆ ಅಧಿಕಾರ ಇರಲೇಬೇಕು. ಅದಕ್ಕೇ ಈಗ ಲಾಡ್‌ನ ಹೆಲಿಕಾಪ್ಟರ್ ಕೂಡ್ಲಿಗಿ ಬಿಟ್ಟು ಗಂಗಾವತಿಯಲ್ಲೇ ಪರ್ಮನೆಂಟ್ ಲ್ಯಾಂಡ್ ಆದರೂ ಆಗಬಹುದು. ಹಾಗೊಂದು ವೇಳೆ ಇದು ನಿಜವಾದರೆ, ಮುಂದೆ ಓಟಿಗೆ ಸಾವಿರ, ಮನೆಗೊಂದು ಕಲರ್ ಟಿವಿ ಯೋಜನೆಯನ್ನೂ ಚುನಾವಣೆ ಹೊತ್ತಿನಲ್ಲಿ ಗಂಗಾವತಿಯಲ್ಲಿ ಕಾಣಬಹುದು. ಎರಡೂ ಅನಾಮತ್ತು ರೊಕ್ಕದ ಗಿರಾಕಿಗಳೇ ಅಲ್ವೆ?

ಜುಲೈನಲ್ಲಿ ಕೊಪ್ಪಳಕ್ಕೆ ಬಂದು ತಾನು ಕೊಪ್ಪಳದ ಅಭ್ಯರ್ಥಿಯಾಗಬಹುದು ಎಂದು ಸುದ್ದಿ ಬಿಟ್ಟುಹೋಗಿದ್ದ ಲಾಡ್ ಈಗ ಗಂಗಾವತಿಗೆ ಗಂಟುಬಿದ್ದು, ಅದೂ ರಾಮುಲುನನ್ನು ಹೆಲಿಕಾಪ್ಟರ್‌ನಲ್ಲಿ ಕೂಡ್ರಿಸಿಕೊಂಡು ಹೋದ ಅಂದ್ರೆ ಏನಿದು? ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವನಾದರೂ ಕೇವಲ ಗಂಗಾವತಿಗೆ ಸೀಮಿತವಾಗಿ ತನ್ನ ನೆಲೆಯನ್ನು ಭದ್ರಪಡಿಸಿಕೊಳ್ಳಲು ಯತ್ನಿಸುತ್ತಿರುವ ಅನ್ಸಾರಿಯನ್ನು ಬಗ್ಗುಬಡಿಯಲು ಬರುತ್ತಿದ್ದಾನಂತೆ ಅನಿಲ್ ಲಾಡ್. ಅದಕ್ಕಾಗಿ ಬಿಜೆಪಿಯನ್ನು ಬಿಟ್ಟರೂ ಬಿಡಬಹುದು ಎಲೆಕ್ಷನ್ ವೇಳೆಗೆ ಎಂದು ಅನ್ಸಾರಿಯ ಬಾಲ ಬಡುಕರು ದಿಗಿಲು ಬಿದ್ದಿವೆ.

ಬಳ್ಳಾರಿಯಿಂದ ಗದಗಿಗೆ ಎತ್ತಿ ಒಗೆಯಲ್ಪಟ್ಟ ಶ್ರೀರಾಮುಲು ಗದಗಿನಲ್ಲೇ ಡೌಲು ಮಾಡುತ್ತಿರುವುದನ್ನು ನೋಡಿಯಾದರೂ ಅನ್ಸಾರಿ ಜಿಲ್ಲಾ ಮಂತ್ರಿಯಾಗಿ ಕಡಕ್ ಇರಬೇಕಿತ್ತು, ಯಾವ ಮುಲಾಜು ಇಲ್ಲದೆ ಕುಮಾರಸ್ವಾಮಿಗೆ ತಿರುಗಾಡಲು ಹೆಲಿಕಾಪ್ಟರ್ ಕೊಟ್ಟರೂ ಏನು ಉಪಯೋಗವಾಗುತ್ತಿಲ್ಲವಲ್ಲ ಎಂಬ ಕೊರಗು ಲಾಡ್‌ಗೆ. ತಾನೂ ಮೀಸಲು ವರ್ಗಕ್ಕೆ ಅಥವಾ ಲಿಂಗಾಯತ ಬಣಕ್ಕೆ ಸೇರಿದ್ದರೆ ತನಗೆ ಮಂತ್ರಿಗಿರಿ ದಕ್ಕೇ ಬಿಡುತ್ತಿತ್ತು ಎಂದು ಯೋಚನೆ ಮಾಡಿ ಸುಸ್ತಾದ ಲಾಡ್ ಈಗ ಎಚ್.ಜಿ. ರಾಮುಲುವನ್ನು ಭೇಟಿಯಾಗಿದ್ದನ್ನು ನೋಡಿದರೆ ಲಾಡ್ 'ಕೈವಶ' ಆಗುವುದೇನೂ ದೊಡ್ಡ ವಿಷಯವಲ್ಲ.

ತಾನು ಮಂತ್ರಿಗಿರಿಗೆ ಫಿಟ್ ಎಂದು ನಂಬಿರುವ ಲಾಡ್ 'ಈ ಸರ್ಕಾರದಲ್ಲಿ ಬರೀ ಓಟ್ ಬ್ಯಾಂಕ್ ಪಾಲಿಟಿಕ್ಸ್ ಇದೆ, ಅದಕ್ಕೆ ನಾನು ಮಂತ್ರಿಯಾಗಿಲ್ಲ' ಎಂದಿದ್ದು ನೋಡಿದರೆ ತಾನು ಬಹುಸಂಖ್ಯಾತ ಜಾತಿಗೆ ಸೇರಿದವನಲ್ಲ ಎಂಬ ನೋವು ಕಾಡಿ ಬಿಜೆಪಿ-ಜೆಡಿಎಸ್‌ಗಳಿಂದ ದೂರ ಸರಿಯುತ್ತಿರಬಹುದೆ ಎಂಬ ಅನುಮಾನ ಕಾಂಗ್ರೆಸ್ಸಿಗರನ್ನು ಕಾಡುತ್ತಿದೆ.


ಇಕ್ಬಾಲ್ ಅನ್ಸಾರಿ

ಬಿಜೆಪಿಗೇ ಬ್ರೆಯ್ಕ್!

ಸರ್ಕಾರಕ್ಕೆ ಮುಖಭಂಗವಾಗುವಂತಹ ಸಂಗತಿಗಳನ್ನು ಬಾಯಿಬಿಟ್ಟ ಲಾಡ್, ನಿಗಮ, ಮಂಡಳಿಗಳ ನೇಮಕಕ್ಕೆ ಬಿಜೆಪಿ ಕಳಿಸಿದ್ದ ಪಟ್ಟಿ ರಾಜ್ಯಪಾಲರಿಂದ ರಿಜೆಕ್ಟ್ ಆಗಿದೆ ಎಂಬುದನ್ನು ಹೇಳಿದ್ದನ್ನು ನೋಡಿದರೆ ಲಾಡ್ ಸಿಟ್ಟು ಬಿಜೆಪಿಯ ಮೇಲೆ ಟಾರ್ಗೆಟ್ ಆದಂತಿದೆ. ಲಾಡ್‌ನ ಬಿಜೆಪಿಯ ಸಿಟ್ಟು ಹಾಗೂ ರಾಮುಲುನ ಜೆಡಿಎಸ್ ಮಟ್ಟ ಹಾಕುವ ಸ್ಕೆಚ್ ಎರಡೂ ಏಕಕಾಲಕ್ಕೆ ಕೂಡಿಬಂದಂತಾಗಿದೆ.

ಹೌದು, ಏನೂ ಸೂಚನೆ ಇಲ್ಲದೇ ಗಂಗಾವತಿಗೆ ಬಂದಿದ್ದು ಏಕೆ ಎಂದರೆ, ಸುಮ್ನೆ ಬಂದಿದ್ದೆ ಎಂಬ ಉತ್ತರ ಲಾಡ್‌ನದು. ನಿತ್ಯ ಕೆರಕೊಳ್ಳಾಕೆ ಪುರುಸೊತ್ತಿಲ್ಲದೇ ಗಣಿ ದಂಧೆ ಮಾಡುವ ಲಾಡ್ ಸುಮ್ನೆ ಗಂಗಾವತಿಗೆ ಬಂದಿದ್ದೆ ಎಂದರೆ ನಂಬಲು ಇಲ್ಲಿ ಯಾರೂ ಕಿವಿಗೆ ಹೂ ಇಟ್ಟುಕೊಂಡಿಲ್ಲ. ರಾಮುಲುಗೆ ಕೇಳಿದರೆ 'ಕಾದು ನೋಡಿ' ಎಂಬ ಸಿಂಪಲ್ ಉತ್ತರ. ಆದರೆ ಈ ಘಟನೆಯನ್ನೇ ಬಳಸಿಕೊಂಡು ರಾಮುಲು ಕಾಂಗ್ರೆಸ್ಸನ್ನು ಬ್ಲ್ಯಾಕ್‌ಮೇಲ್ ಮಾಡುತ್ತಿದ್ದಾನೆ, ತನ್ನನ್ನು ಕಡೆಗಣಿಸಿದರೆ ಅಪಾಯ ಎಂಬ ಸಂದೇಶವನ್ನು ಪಾರ್ಟಿಗೆ ಕೊಡುತ್ತಿದ್ದಾರೆ ಎಂಬುದು ರಾಮುಲು ವಿರೋಧಿ ಕಾಂಗ್ರೆಸ್ಸಿಗರು ಹಬ್ಬಿಸುತ್ತಿರುವ ಸುದ್ದಿ. ಹಾಗೆ ನೋಡಿದರೆ ರಾಮುಲು ಎಐಸಿಸಿ ಮಟ್ಟದಲ್ಲಿ ರಾಜಕೀಯ ಮಾಡಿದಾತ. ಅಷ್ಟು ಹೋಲ್ಡ್ ಇರುವ ರಾಮುಲುಗೆ ಕಾಂಗ್ರೆಸ್ಸನ್ನು ಬ್ಲ್ಯಾಕ್‌ಮೇಲ್ ಮಾಡಲು ಅನಿಲ್‌ಲಾಡ್‌ನಂತಹ ಚಿಲ್ಲು ರಾಜಕಾರಣಿ ಬೇಕಿರಲಿಲ್ಲ; ಸ್ವಜಾತಿಯ ಬಂಗಾರಪ್ಪನನ್ನು ಭೇಟಿಯಾದರೆ ಸಾಕಿತ್ತಲ್ಲವೆ?


ಶ್ರೀನಾಥ್

ಇಲ್ಲಿ ಗಮನಿಸಬೇಕಾದ ಒಂದು ಅಂಶವೇನೆಂದರೆ ಜುಲೈನಲ್ಲಿ ಅನಿಲ್‌ಲಾಡ್ ಕೊಪ್ಪಳಕ್ಕೆ ಬಂದಾಗ ಬಿಜೆಪಿಯ ಜಿಲ್ಲಾಧ್ಯಕ್ಷ ಅಂದಣ್ಣ ಅಗಡಿ, ಜಿಲ್ಲಾ ಕಾಂಗ್ರೆಸ್ ಯುವ ಅಧ್ಯಕ್ಷ ಕರಿಯಣ್ಣ ಸಂಗಟಿ ಇದ್ದರು. ಈಗ ಲಾಡ್ ಗಂಗಾವತಿಗೆ ಬಂದರೆ ಬಿಜೆಪಿಯ ಅಂದಣ್ಣ ಇಲ್ಲ, ರಾಮುಲು ಇದ್ದರೂ ಮಗ MLC ಶ್ರೀನಾಥ್ ಇಲ್ಲ, ಬದಲಿಗೆ ಆಶ್ಚರ್ಯಕರವಾಗಿ ಇನ್ನೊಬ್ಬ ಮಗ ಚನ್ನಕೇಶವ ಇದ್ದ! ಅಂದ್ರೆ ತನ್ನಲ್ಲಿರುವ ಕಾಂಗ್ರೆಸ್ಸನ್ನು ರಾಮುಲು ಬಿಜೆಪಿಗೆ ಧಾರೆ ಎರೆಯುತ್ತಾನೆ, ಇಲ್ಲಾಂದ್ರೆ ಬಿಜೆಪಿಯ ಅನಿಲ್ ಲಾಡ್‌ನನ್ನು ಕಾಂಗ್ರೆಸ್ಸಿಗೆ ಕರೆತಂದು ಪಕ್ಷದಲ್ಲಿರುವ ವಿರೋಧಿಗಳನ್ನು ತಣ್ಣಗೆ ಮಾಡುತ್ತಾನೆ. ಇದು ಕೊಪ್ಪಳ ಜಿಲ್ಲೆಯ ಲೇಟೆಸ್ಟ್ ಸುದ್ದಿಯೀಗ.

ಇದರಲ್ಲಿ ಏನು ನಡೆದರೂ, ಮೆತ್ತಗಾಗುವುದು ಮಾತ್ರ ಮಂತ್ರಿ ಅನ್ಸಾರಿ! ಇದು ಗ್ಯಾರಂಟಿ.

-ವರದಿಗಾರ

ಹೊನ್ನಳ್ಳಿ ಶಿಷ್ಯರ ಪವರ್ರು

ಮಾರಾಟಕ್ಕೆ ಕಾರ್ಪೋರೇಷನ್ ನೀರು!

ಹುಬ್ಬಳ್ಳಿ

ಕಾರ್ಪೊರೇಷನ್, ಜಲಮಂಡಳಿ ಒದಗಿಸುವ ಉಚಿತ ನೀರಿಗೆ ದುಡ್ಡು ಕಟ್ಟಬೇಕು! ಕಟ್ಟಿಸಿಕೊಳ್ಳುವವರು ಯಾರು? ಕಳ್ಳ ಅಧಿಕಾರಿಗಳಾ? ನೊ. ನೊ. ಇವರು ಶಾಸಕ ಜಬ್ಬಾರ್‌ಖಾನ್ ಹೊನ್ನಳ್ಳಿಯ ನಾಲಾಯಕ್ ಶಿಷ್ಯರು.


ಇದು ಎಸ್.ಎಂ. ಕೃಷ್ಣ ನಗರದಲ್ಲಿನ 1600 ಆಶ್ರಯ ಮನೆಗಳ ಜನರ ಗೋಳಿನ ಕತೆ. ಐದು ವರ್ಷದ ಹಿಂದೆ ಆಶ್ರಯ ವಾಸಿಗಳ ಜೀವ ಹಿಂಡುತ್ತಲೇ ಹುಟ್ಟಿದ ಈ ಬಡಾವಣೆಗೆ ಶಾಸಕ ಹೊನ್ನಳ್ಳಿಯ ಹೈದರ ಕಾಟ ತಪ್ಪೇ ಇಲ್ಲ.

ಲಕ್ಕಡಹಾರ್, ಬಶೀರ್ ಅಹ್ಮದ್ ಚಿಕ್ಕಲಗಾರ, ತಾಳಿಕೋಟಿ, ಮುಸ್ತಾಕ ಬಗದಾಜಿ ಎಂಬ ಈ ಹೊನ್ನಳ್ಳಿಯ ಪಿಂಡ-ಪುಂಡಗಳಿಗೆ ಹಡಿಬಿಟ್ಟು ರೊಕ್ಕದಲ್ಲಿ ಬದುಕುವುದೇ ಅಭ್ಯಾಸವಾಗಿ ಹೋಗಿದೆ. ಬಡಜನರನ್ನು ಸುಲಿದು ತಿನ್ನುವುದು ಇವರಿಗೆ 'ಹಾಬಿ' ಆಗಿಬಿಟ್ಟಿದೆ. 'ಮನುಷ್ಯಾ ಅಂದ್ ಮ್ಯಾಲ 'ಹಾಬಿ' ಇರಬೇಕ್ರಿ... ನನ್ ಶಿಷ್ಯರ 'ಹಾಬಿ' ಚಲೋ ಐತಲ್ಲ?' ಎಂದು ಪ್ರಶ್ನಿಸುವ ಮಟ್ಟ ತಲುಪಿದ್ದಾನೆ ಹೊನ್ನಳ್ಳಿ ಮಾಸ್ತರು.

ವಾಟರ್ ಬೋರ್ಡ್ ಕಮಿಟಿಯಂತೆ!

1600 ಮನೆಗಳಿಗೆ ನೀರು ಒದಗಿಸಲು ಎರಡು ಬೋರ್‌ವೆಲ್ ಕೊರೆಸಿರುವ ಮಹಾನಗರ ಪಾಲಿಕೆ ಆರು ಟ್ಯಾಂಕ್‌ಗಳನ್ನು ನಿರ್ಮಿಸಿದೆ. ಬೋರ್‌ವೆಲ್ ನೀರು ಒಂದು ದಿನ ಸಂಗ್ರಹಿಸಿಟ್ಟರೆ ಗಬ್ಬು ನಾರಲು ಆರಂಭಿಸುತ್ತದೆ. ಜನ ಇದೇ ನೀರನ್ನು ಬಳಸುತ್ತಾ, ವಾರಕ್ಕೊಮ್ಮೆ ಬರುವ ಕುಡಿಯುವ ನೀರನ್ನು ಸಂಗ್ರಹಿಸಿಕೊಂಡು ಹೇಗೋ ಬದುಕುತ್ತಿದ್ದಾರೆ. ಆದರೆ ಎಡವಟ್ಟು ಮಾಡುವುದು, ಆ ಮೂಲಕ ಹಣ ಎತ್ತುವುದೇ ಉದ್ಯೋಗವಾಗಿರುವ ತಾಳಿಕೋಟಿ, ಬಶೀರ್, ಮುಸ್ತಾಕ, ಲಕ್ಕಡಹಾರ್ ಇಲ್ಲಿ ತಾವೇ ಒಂದು ಮಿನಿ ಸರ್ಕಾರ ನಡೆಸುತ್ತಿದ್ದಾರೆ.

ಈ ನಾಲ್ವರು ಮನೆಹಾಳರು ಸೇರಿ 'ವಾಟರ್ ಬೋರ್ಡ್ ಕಮಿಟಿ' ರಚಿಸಿಕೊಂಡಿದ್ದಾರೆ. ದೊಡ್ಡ ಸುಲಿಗೆಕೋರರು! ಕೇಳ್ತಾರೆಯೇ? ಇವರ ದಿ ಗ್ರೇಟ್ ವಾಟರ್ ಬೋರ್ಡ್ ಕಮಿಟಿ ರೂಲ್ಸ್ ಮಾಡೇ ಬಿಟ್ಟಿತು. ಈ ಬೋರ್ಡ್ ದಯಪಾಲಿಸಿದರೆ ಮಾತ್ರ ಆಶ್ರಯ ವಾಸಿಗಳಿಗೆ ನೀರಂತೆ! ಹಾಗೆ ದಯಪಾಲಿಸಬೇಕೆಂದರೆ ಪ್ರತಿ ಮನೆಯವರೂ 'ಕೇವಲ' 600 ರೂಪಾಯಿ ರೊಕ್ಕ ಕೊಟ್ಟರೆ ಸಾಕಂತೆ! ಯಾವ್ಯಾವುದೋ ಥರ್ಡ್‌ಕ್ಲಾಸ್ ಪ್ಲಾಸ್ಟಿಕ್ ಪೈಪ್‌ಗಳನ್ನು ಕದ್ದು ತಂದವರೇ, ಪ್ರತಿ ಮನೆಗೂ ನಲ್ಲಿ ಕೊಡ್ತೀವಿ ಎಂದಿದ್ದಾರೆ.


ಜಬ್ಬಾರ್ ಖಾನ್ ಹೊನ್ನಳ್ಳಿ

ಇವರಪ್ಪನ ಮನೆ ನೀರು ಕೊಡ್ತಾರಾ? ಉಹೂಂ, ಪಾಲಿಕೆ ಕಟ್ಟಿಸಿರುವ ಆರು ಟ್ಯಾಂಕ್‌ಗಳಿಂದ ನಲ್ಲಿ ಸಂಪರ್ಕ ಕೊಡಲು ಶುರುಮಾಡೇ ಬಿಟ್ಟರು. ಇವರ ಗೂಂಡಾಗಿರಿ ಹೇಗಿತ್ತೆಂದರೆ ಜನ ಹೆದರಿಬಿಟ್ಟರು. 1000 ಮನೆಗಳವರು 600 ರೂ. ಕೊಟ್ಟು ನಲ್ಲಿ ಸಂಪರ್ಕ ಪಡೆದೇಬಿಟ್ಟರು. ಹೊನ್ನಳ್ಳಿಯ ಈ ನಾಲ್ಕು ಬಾಲಗಳು ಸರ್ವಿಸ್ ಚಾರ್ಜ್ ಅಂತಾ ಪ್ರತಿ ಮನೆಯಿಂದ ತಿಂಗಳಿಗೆ ಹತ್ತು ರೂಪಾಯಿ ವಸೂಲು ಮಾಡುತ್ತಿವೆ. ಅದೇ ಹತ್ತು ಸಾವಿರವಾಯ್ತು, 600ರಂತೆ ಕಲೆಕ್ಟು ಮಾಡಿದ್ದೇ 6 ಲಕ್ಷವಾಗಿದೆ. ಸಗಣಿ ತಿನ್ನುವ ಪರಿ ಹೇಗಿದೆ ನೋಡಿ? ಕಾರ್ಪೊರೇಷನ್ ಬೋರು, ಕಾರ್ಪೊರೇಷನ್ ಟ್ಯಾಂಕುಗಳು, ಕಾರ್ಪೊರೇಷನ್ ನೀರು... ಎಲ್ಲವೂ ಜನಕಲ್ಯಾಣಕ್ಕಾಗಿ ಉಚಿತ. ಆದರೆ ಹೊನ್ನಾಳಿಯ ಪುಂಡರು ವಸೂಲಿ ಮಾಡುವುದು ಖಚಿತ.

ಸೊಂಟಕ್ಕೆ ಸೀರೆ ಕಟ್ಟಿದವರು ನೋಡಿ

ಎಷ್ಟು ದಿನಾಂತ ಈ ಪಂಡರಪಟ್ಟಿಗಳ ದೌರ್ಜನ್ಯ ಸುಲಿಗೆ ಸಹಿಸುವುದು? ಮುನಿದರು ನೋಡಿ ಇಲ್ಲಿಯ ಮಾರಿಯರು. ಪದ್ಮಶ್ರೀ ಕೊಟ್ಯಾನ್, ಲಕ್ಷ್ಮಿಬಾಯಿ ಕೃಷ್ಣಾಪುರ, ಲಕ್ಷ್ಮಿಬಾಯಿ ಬೆಟಗೇರಿ ಎನ್ನುವವರ ನೇತೃತ್ವದಲ್ಲಿ ನೀರೆಯರು ಸೊಂಟಕ್ಕೆ ಸೀರೆ ಕಟ್ಟೇಬಿಟ್ಟರು. ಮೊನ್ನೆ 9ನೇ ತಾರೀಖು ಬೇಜವಾಬ್ದಾರಿ ಪಾಲಿಕೆಗೆ ನೀರು ಇಳಿಸಿಯೇ ಬಿಟ್ಟರು. 'ಹುಬ್ಬಳ್ಳಿ-ಧಾರವಾಡ ಆಶ್ರಯ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ'ದ ಅಡಿಯಲ್ಲಿ ಆಯುಕ್ತರ ಕಚೇರಿ ಎದುರು ಧರಣಿ ನಡೆಯುತ್ತಿದ್ದಾಗ ಮನವಿ ಸ್ವೀಕರಿಸಲು ಬಂದ ಅಸಿಸ್ಟೆಂಟ್ ಕಮಿಶನರ್ ನಾಯಕ್ ಹೆಣ್ಣುಮಕ್ಕಳ ಪ್ರಶ್ನೆಗಳಿಗೆ ಉತ್ತರಿಸದೇ ಪ್ಯಾಲಿ ಆಗಿಹೋದ.

'ಟ್ಯಾಕ್ಸ್ ಕಟ್ರಿ, ಮನೆ ಕಂತು ಕಟ್ರಿ ಅಂತಾ ಕೇಳ... ಬರ್ತೀರಲ್ಲ... ನಾಚಿಗಿ ಐತನು? ನಾಕು ಬಾಡ್ಯಾಗ... ಕಾರ್ಪೊರೇಷನ್ ಹೆಸರನ್ಯಾಗ ವಸೂಲಿ ಮಾಡ... ಹತ್ಯಾವು... ಅರಿವು ಐತನು ನಿಮಗ?' ಎಂ... ಜಾಡಿಸಿಬಿಟ್ಟರು. ಕೊನೆಗೆ ಅಲ್ಲಿಗೆ ಜಲಮಂಡಳಿ... ಜಯರಾಂ ಬಂದರು. 'ಈ ಆಶ್ರಯ ಬಡಾವಣೆ ನ... ವ್ಯಾಪ್ತಿಗೆ ಬಂದಿಲ್ಲ. ಆದರೂ ಮಾನವೀಯತೆ... ದೃಷ್ಟಿಯಿಂದ ವಾರಕ್ಕೆ ಉಚಿತವಾಗಿ 25 ಟ್ಯಾಂಕ... ನೀರು ಕೊಡ್ತಾ ಇದ್ದೀವಿ' ಎಂದರು.

ನೀವೇನು ಫ್ರೀ ಕೊಡ್ತೀರಿ ಸಾಹೇಬ್ರ... ಆದರೆ ನಕಲಿ ವಾಟರ್ ಬೋರ್ಡ್‌ನವರು ಅದಕ... ಪ್ರತಿ ಮನೆಯಿಂದ 5ರೂ ವಸೂ... ಮಾಡ್ತಾರಲ್ಲ' ಎಂದು ಜನ ಪ್ರಶ್ನಿ...ದಾಗ ಜಯರಾಂ ಮೇಲೆ ಕೆ... ನೋಡೋದೊಂದೇ ಬಾಕಿ.

ನಾಲ್ವರೂ ಮುಠ್ಠಾಳರನ್ನು ಒದ್ದು ಜೈಲಿಗೆ ಹಾಕ... ಬೇಕೆಂದು ಜನ ಬಿಗಿಪಟ್ಟು ಹಿಡಿದಾಗ ಬಂದ ಶಹ... ಸಿಪಿಐ ಬಿ.ಎಸ್. ಅಂಗಡಿಗೆ ಸ್ಪಾಟ್‌ನಲ್ಲೇ ಜನ ಕಂಪ್ಲೆಂ... ಕೊಟ್ಟೇ ಬಿಟ್ಟರು.

ನಾಚಿಕೆ ಬಿಟ್ಟಪ್ಪೋ ಹೊನ್ನಳ್ಳಿ!

ಪತ್ರಿಕೆಯವರು ಈ ಕುರಿತು ಕೇಳಿದ... "ಕಮಿಷನರ್‌ಗೆ ಹತ್ ಸಲಾ ಹೇಳ್ದೆ. ಕೇರ್ ಮಾಡ್ಲಿ... ಅದಕ್ಕಾ ನಾನೇ ನಮ್ ಹುಡುಗ್ರುಗೆ ಈ ಕೆ... ಮಾಡಾಕ ಹೇಳೀನಿ" ಎಂದು ನಾಚಿಕೆ ಬಿಟ್ಟು ಒದರಿದ... ನಾನ್‌ಸೆನ್ಸ್ ಹೊನ್ನಳ್ಳಿ.

ಜನರ ಸಿಟ್ಟು ಹೇಗಿರುತ್ತೆಂದರೆ ಕೊನೆಗೂ ಪೊಲೀಸ... ಆ ನಾಲ್ವರು ಸುಲಿಗೆಕೋರರನ್ನು ಸ್ಟೇಷನ್‌ಗೆ ತಂ... ಕೂಡ್ರಿಸಿದರು. ಆದರೆ ಒಳಗೆ ಹಾಕಲಿಲ್ಲ! ಆದು ಶಾ... ಹೊನ್ನಳ್ಳಿಯ ಕಿತಾಪತಿ. ರಾಜ್ಯದಲ್ಲಿ ಸರಕಾರದ ನೀರ... ಮಾರಿಕೊಳ್ಳುವ ಶಾಸಕನೆಂದರೆ ಅದು ಇವನೊಬ್ಬ... ಅಂತಾ ಕಾಣುತ್ತೆ.

ಇದ್ದುದರಲ್ಲಿ ಪರವಾಗಿಲ್ಲ ಎನಿಸಿಕೊಂಡಿರು... ಆಯುಕ್ತ ಮಣಿವಣ್ಣನ್‌ಗೇನಾಗಿದೆ ದಾಡಿ?

-ವರದಿಗಾ...


ಚಳ್ಳಕೆರೆ ಶಾಸಕ ಸುಧಾಕರನೂ ಅವನ ಬೂಟೇಟಿನ ಖಯಾಲಿಯೂ...



ಶಾಸಕ ಸುಧಾಕರ್ ಕಾಳಿಕಾಂಬ ಜ್ಯುಯಲರ್ಸ್‌ನ ನಾಗರಾಜಚಾರಿಗೆ ಬೂಟಲ್ಲಿ ಹೊಡೆದ್ನಂತೆ! ನಾಗರಾಜಚಾರು ಸುಧಾಕರ್ ಮ್ಯಾಲೆ ಕೇಸು ಕೊಟ್ಟವ್ನಂತೆ....! ಎಂಬೆರಡು ಸಾಲಿನ ಡೈಲಾಗುಗಳು ಕಳೆದೊಂದು ವಾರದಿಂದ ಚಳ್ಳಕೆರೆ ಜನರ ಬಾಯಲ್ಲಿ ಹರಿದಾಡುತ್ತಿವೆ. ಶಾಸಕ ಸುಧಾಕರ್‌ಗೂ ಬೂಟನೇಟಿನ ಹೊಡೆದಾಟಗಳಿಗೂ ಅವಿನಾಭಾವ ಸಂಬಂಧ ಇದ್ದಂತಿದೆ. ಕಳೆದ ಆಗಸ್ಟ್‌ನಲ್ಲಿ ಶಾಸಕ ಸುಧಾಕರನ ಹೆಸರು ಇಂಥದ್ದೇ ಪ್ರಕರಣವೊಂದರಲ್ಲಿ ಕೇಳಿಬಂದಿತ್ತು. ಅದು ಶಾಸಕ ಸುಧಾಕರ್ ಮತ್ತು ಮಾಜಿ ಕಾಂಗ್ರೆಸ್ಸಿಗ ಬಿ.ಸಿ. ಸಂಜೀವಮೂರ್ತಿಗೆ ಸಂಬಂಧಿಸಿದ್ದು.

ಪ್ರಕರಣ 1:

ಸಂಜೀವಮೂರ್ತಿಯದು ಚಳ್ಳಕೆರೆ ರಾಜಕೀಯದಲ್ಲಿ ಚಲಾವಣೆಯಲ್ಲಿರುವ ಹೆಸರು. ಮಾಜಿ ಮುಖ್ಯ ಸಚೇತಕರಾಗಿದ್ದ ಜಯಣ್ಣನವರ ನಿಧನಾನಂತರ ಅವರ ವಂಶದ ಕುಡಿ ಸುಧಾಕರ್‌ಗೆ ರಾಜಕೀಯದ ತೆವಲಿನ ರುಚಿ ಹತ್ತಿಸಿದ್ದು ಇದೇ ಸಂಜೀವಮೂರ್ತಿ. ಬರೀ ವ್ಯವಹಾರದ ರಗಳೆಗಳಲ್ಲೇ ಮುಳುಗಿದ್ದ ಸುಧಾಕರ್‌ಗೆ ರಾಜಕೀಯ ತಂತ್ರಗಾರಿಕೆಗಳನ್ನು ಕಲಿಸಿ ಚುನಾವಣಾ ಅಖಾಡಕ್ಕಿಳಿಸುವಲ್ಲಿ ಈತನದ್ದೇ ಪ್ರಮುಖ ಪಾತ್ರ. ಸುಧಾಕರ್ ಕೈಯಿಂದ ಕೋಟಿಗಟ್ಟಲೇ ಕರಗಿಸಿ ಚುನಾವಣಾ ಪೂರ್ವದಲ್ಲೇ ಜನಸೇವಕನಂತೆ ಬಿಂಬಿಸಿದ. ಜನರು ಸುಧಾಕರ್ ಮೇಲೆ ವಿಶ್ವಾಸವಿಟ್ಟು ಗೆಲ್ಲಿಸಿದರು.



ಬೂಟೇಶಿ ಸುಧಾಕರನ ಹೆಸರಲ್ಲೊಂದು ನಗರ!


ಸುಧಾಕರ್ ಮತ್ತು ಸಂಜೀವಮೂರ್ತಿ ನಡುವೆ ಗಳಸ್ಯ-ಕಂಠಸ್ಯ ಸಂಬಂಧಗಳಿದ್ದ ದಿನಗಳಲ್ಲಿ ಸಂಜೀವಮೂರ್ತಿ ಹೇಳಿದ್ದಕ್ಕೆಲ್ಲಾ ಸುಧಾಕರ್ ಓ.ಕೆ. ಅನ್ನುತ್ತಿದ್ದ. ಲಕ್ಷಗಳು ಅಲಕ್ಷಗಳಾಗಿ ಹರಿದಾಡಿದ ದಿನಗಳವು. ಇಂತಹ ದಿನಗಳಲ್ಲೇ ಕಷ್ಟದಲ್ಲಿದ್ದ ಸಂಜೀವಮೂರ್ತಿಗೆ ಸುಧಾಕರ್ ಲಕ್ಷಾಂತರ ಹಣಕೊಟ್ಟಿದ್ದ. ಇದು ಕಾಂಗ್ರೆಸ್ಸಿಗರಿಗೆಲ್ಲಾ ಗೊತ್ತಿದ್ದ ವಿಷಯ. ಆದರೆ ಈ ಹಣ ಸಾಲ ಕೊಟ್ಟಿದ್ದಾ....? ರಾಜಕೀಯ ವಿಶ್ವಾಸಕ್ಕಾಗಿ ಕೊಟ್ಟಿದ್ದಾ....? ಎಂಬುದು ಮಾತ್ರ ಸ್ಪಷ್ಟವಾಗಿತ್ತು. ನಂತರದ ದಿನಗಳಲ್ಲಿ ನಡೆದ ಜಿ.ಪಂ. ಚುನಾವಣೆ, ಟಿಎಪಿಸಿಎಂಎಸ್ ಚುನಾವಣೆಗಳಲ್ಲಿ ಶಾಸಕ ಸುಧಾಕರ್ ಜೊತೆ ಸಂಜೀವಮೂರ್ತಿಗೆ ಮನಸ್ತಾಪ ಬೆಳೆಯಿತು. ಸಂಜೀವಮೂರ್ತಿ ಮಾಜಿ ಸಚಿವ ತಿಪ್ಪೇಸ್ವಾಮಿಯ ಮನೆ ಅಂಗಳದಲ್ಲಿ ಕಾಣಿಸಿಕೊಂಡ.

ಈ ಬೆಳವಣಿಗೆಗಳ ನಂತರವೇ ಶಾಸಕ ಸುಧಾಕರ್ ತನಗೆ ಕೊಡಬೇಕಾದ ಹಣ ಕೊಡುವಂತೆ ಒತ್ತಡ ತಂದಾಗಲೆಲ್ಲಾ ಸಂಜೀವಮೂರ್ತಿ ನಿರಾಕರಿಸುತ್ತಲೇ ಬಂದ. ಸುಧಾಕರ್ ತೀರಾ ಒತ್ತಡ ತಂದು ಅಬ್ಬರಿಸಿದಾಗ ಸಂಜೀವಮೂರ್ತಿ ಶಾಸಕ ಸುಧಾಕರ್ ಮೇಲೆ ಪ್ರಾಣ ಬೆದರಿಕೆಯ ದೂರು ಕೊಟ್ಟು ಪೊಲೀಸರ ರಕ್ಷಣೆ ಪಡೆದುಕೊಂಡ. ಇದಾದ ನಾಲ್ಕು ತಿಂಗಳ ಬಳಿಕ ಆಗಸ್ಟ್ ಮೊದಲ ವಾರದಲ್ಲಿ ಟಿಎಪಿಸಿಎಂಎಸ್ ಕಟ್ಟಡದ ಬಳಿ ಶಾಸಕ ಸುಧಾಕರ್‌ಗೂ ಮತ್ತು ಸಂಜೀವಮೂರ್ತಿಗೂ ಬೀದಿಜಗಳ ಶುರುವಾಯಿತು. ಚಳ್ಳಕೆರೆಯ ಜನ 'ಸುಧಾಕರ್ ಸಂಜೀವಮೂರ್ತಿಗೆ ಮೆಟ್ಟುಮೆಟ್ನಲ್ಲಿ ಹೊಡೆದನಂತೆ ಎಂದು ಮಾತನಾಡಿಕೊಂಡರು. ಇನ್ನೂ ಕೆಲವರು ಇದು 'ಕೊಟ್ಟವನು ಕೋಡಂಗಿ-ಇಸ್ಕಂಡೋನು ವೀರಭದ್ರ' ಅಂತ ಗಾದಿ ನೆನಪಿಗೆ ತರುವಂತಹ ಜಗಳ ಅಂದರು. ಹಾಗೆ ಕೊಟ್ಟ ಕೋಡಂಗಿ ಸುಧಾಕರನೆಂದೂ, ಈಸ್ಕೊಂಡ ವೀರಭದ್ರ ಸಂಜೀವಮೂರ್ತಿಯೆಂದೂ ವ್ಯಾಖ್ಯಾನಿಸಿದರು. ಪರಸ್ಪರ ದೂರು ದಾಖಲಿಸಿಕೊಂಡರೂ ಬೂಟನೇಟಿನ ಪ್ರಸ್ತಾಪವಾಗಲಿಲ್ಲ. ಜೊತೆಗೆ ಸುಧಾಕರ್ ಮತ್ತು ಸಂಜೀವಮೂರ್ತಿ ನಡುವೆ ಇದ್ದ ರಾಜಕೀಯ ವ್ಯವಹಾರಿಕ ಸಂಬಂಧಗಳ ಸ್ವರೂಪದ ಹಿನ್ನೆಲೆ ತಿಳಿದದ್ದೇ ಆಗಿದ್ದರಿಂದ ಈ ಪ್ರಕರಣ ತಣ್ಣಗಾಯಿತು.

ಪ್ರಕರಣ 2:

ಕಳೆದ 30 ರಂದು ವೈ. ನಾಗರಾಜಚಾರಿ ಜೊತೆ ನಡೆದಿದೆಯೆನ್ನಲಾದ ಬೂಟನೇಟಿನ ಪ್ರಕರಣ ತುಸು ಭಿನ್ನವಾದದು. ಮತ್ತು ಶಾಸಕ ಸುಧಾಕರನ ಚುನಾವಣಾಪೂರ್ವ ಹುಚ್ಚಾಟಕ್ಕೆ ಸಂಬಂಧಿಸಿದ್ದು.

ಕಳೆದ ಸಾರ್ವತ್ರಿಕ ಚುನಾವಣೆಗೂ ಮುನ್ನ ಚಳ್ಳಕೆರೆಗೆ ಸಮೀಪವಿರುವ ಲಂಬಾಣಿ ಹಟ್ಟಿಯೊಂದರಲ್ಲಿ ಜಗಳ ನಡೆದು ಅದರಲ್ಲೊಂದು ಗುಂಪು ಸುಧಾಕರ್ ಬಗೆ ಧಾವಿಸಿ ತಮಗೆ ರಕ್ಷಣೆ-ಆಶ್ರಯ ಕೊಡಬೇಕೆಂದೂ, ನಾವು ನಿಮ್ಮನ್ನು ಬೆಂಬಲಿಸುವುದಾಗಿಯೂ ಮನವಿ ಮಾಡಿಕೊಂಡಿದೆ.



ಸಂಜೀವಮೂರ್ತಿ


ಶಾಸಕ ಸುಧಾಕರ್ ನಾಯಕನಹಟ್ಟಿ ರಸ್ತೆ ಬಳಿ ಇದ್ದ ಐದು ಎಕರೆ ಜಮೀನನ್ನು ಅದರ ಮಾಲೀಕರಾದ ವೈ. ನಾಗರಾಜಚಾರಿ ಸಹೋದರರಿಂದ ಖರೀದಿಸಿದ್ದಾನೆ. ಈ ಖರೀದಿಗೆ ಎಪಿಎಂಸಿ ಸದಸ್ಯ ಪೊಲೀಸ್ ವೀರಣ್ಣನವರು ಮಧ್ಯಸ್ಥಿಕೆ. ಐದು ಎಕರೆಯಲ್ಲಿ 7 ಗುಂಟೆ ಜಮೀನನ್ನು ಉಳಿಸಿಕೊಂಡು ಉಳಿದದ್ದನ್ನು ಡಾಣ್ಯನಾಯ್ಕ, ಚಂದ್ರಾನಾಯ್ಕ, ಗೌರಿಬಾಯಿ ಮುಂತಾದ ಆರು ಜನರ ಹೆಸರಿಗೆ ಕರಾರುಪತ್ರ ಮಾಡಿಸಿ ಎರಡು ಲಕ್ಷ ರೂ. ಪಡೆದು ಉಳಿದ ಹಣವನ್ನು ಒಂದು ವರ್ಷ ದೊಳಗಾಗಿ ಪಾವತಿಸುವುದಾಗಿ ಸುಧಾಕರ್ ಹೇಳಿದ್ದಾನೆ. ಆನಂತರ ಸದರಿ ಜಮೀನಿನಲ್ಲಿ ಸುಧಾಕರ್ ನಗರ ಎಂಬುದೊಂದು ಬಡಾವಣೆ ತಲೆಯೆತ್ತಿ ಹತ್ತಿಪ್ಪತ್ತು ಗುಡಿಸಲುಗಳನ್ನು ನಿರ್ಮಿಸಲಾಗಿದೆ. ಇದೇ ಸುಧಾಕರ ನಗರಕ್ಕೊಂದು ಸ್ಕೂಲು ಮಂಜೂರಾಗಿದೆ. ಇದೆಲ್ಲಾ ನಡೆದು ಎರಡು ವರ್ಷ ಕಳೆದರೂ ನಾಗರಾಜಚಾರಿ ಸಹೋದರರಿಗೆ ಸುಧಾಕರ್ ಹಣ ಕೊಟ್ಟಿಲ್ಲ. ಸುಧಾಕರ್ ವಾರಕ್ಕೊಮ್ಮೆ ಬಂದಾಗಲೆಲ್ಲಾ ನಾಗರಾಜಚಾರಿ ಹಣ ಕೊಡುವಂತೆ ದುಂಬಾಲು ಬಿದ್ದಿದ್ದಾನೆ.

ಕಳೆದ 30 ರಂದು ತಾರೀಕು ಬೆಳಿಗ್ಗೆ 9.15 ರ ಹೊತ್ತಿಗೆ ಶಾಸಕ ಸುಧಾಕರ್ ಜ್ಯೋತಿಪ್ರಕಾಶ್ ಹೋಟೆಲ್ ಬಳಿ ಇರುವುದನ್ನು ನೋಡಿದ ನಾಗರಾಜಚಾರಿ 'ಸಾರ್... ತುಂಬಾ ದಿನ ಆಯ್ತು... ನನ್ನ ದುಡ್ಡು ಕೊಡಿ' ಅಂತಾ ಕೇಳಿದ್ದಾನೆ. ಹೋಟೆಲ್ ಮುಂಭಾಗದಲ್ಲಿ ತನ್ನನ್ನು ಹಣ ಕೇಳಿದನಲ್ಲಾ ಅಂತಾ ಕೋಪದಿಂದ ಸುಧಾಕರ್ 'ಏನೋ ಆಚಾರಿ....' ಎಂದು ಶುರು ಹಚ್ಚಿಕೊಂಡು ತರಾಟೆಗೆ ತೆಗೆದುಕೊಂಡಿದ್ದಾನೆ. ಈ ಜಗಳ ಅಲ್ಲೇ ಜ್ಯೋತಿಪ್ರಕಾಶ್ ಹೋಟೆಲ್‌ನಲ್ಲಿ ತಿಂಡಿ ತಿನ್ನುತ್ತಿದ್ದ ಶಾಸಕ ಎಸ್.ವೈ. ಗೋಪಾಲಕೃಷ್ಣ ಹಾಗೂ ಸಂಸದ ಎನ್.ವೈ. ಹನುಮಂತಪ್ಪನವರ ಗಮನಕ್ಕೂ ಬಂದಿದೆ. ಶಾಸಕ ಸುಧಾಕರ್ ಅಲ್ಲಿಂದ ನೇರವಾಗಿ ಚಿತ್ರದುರ್ಗ ರಸ್ತೆಯಲ್ಲಿನ ಟೆನ್ನಿಸ್ ಕೋರ್ಟಿನತ್ತ ಹೊರಡುತ್ತಿದ್ದಂತೆ ನಾಗರಾಜಚಾರಿ ಹಿಂಬಾಲಿಸಿ 'ಸಾರ್ ಹಣ ಕೇಳಿದ್ರೆ ಬೈಯ್ತಿರಲ್ಲಾ ಸಾರ್'... ದಯವಿಟ್ಟು ನನ್ನ ದುಡ್ಡು ಕೊಡಿ ಸಾರ್' ಎಂದಿದ್ದಾನೆ. ಪಿತ್ತ ನೆತ್ತಿಗೇರಿಸಿಕೊಂಡ ಶಾಸಕ ಸುಧಾಕರ್ ಕಾಲಲ್ಲಿದ್ದ ಬೂಟನ್ನು ತೆಗೆದುಕೊಂಡು ಹೊಡೆಯಲು ಮುಂದಾದಾಗ ಅಲ್ಲಿದ್ದವರು ತಡೆದಿದ್ದಾರೆ. ಇಷ್ಟನ್ನು ನಾಗರಾಜಚಾರಿ ತನ್ನ ದೂರಿನಲ್ಲಿ ದಾಖಲಿಸಿದ್ದಾನೆ. ಆದರೆ ಪ್ರತ್ಯಕ್ಷದರ್ಶಿಗಳ ಪ್ರಕಾರ ಸುಧಾಕರ್ ಬೂಟಲ್ಲಿ ಹೊಡೆದಿದ್ದಾರೆ.

ಈ ಎರಡೂ ಘಟನೆಗಳಿಗೆ ಸಂಬಂಧಿಸಿದ ಸತ್ಯಾಸತ್ಯತೆಗಳೇನೇ ಇರಲಿ. ಒಬ್ಬ ಜನಪ್ರತಿನಿಧಿಯಾಗಿ ಶಾಸಕ ಸುಧಾಕರ್ ನಡವಳಿಕೆ ಪ್ರಶ್ನಾರ್ಹವಾದುದು. ಜನಪ್ರತಿನಿಧಿಯಾದವನು ಸಂಯಮದಿಂದ ವರ್ತಿಸಬೇಕೆಂಬ ಸಾಮಾನ್ಯ ತಿಳಿವಳಿಕೆಯಿಲ್ಲದೇ ವರ್ತಿಸಿ ತಾನೊಬ್ಬ ಅಪ್ರಬುದ್ಧ ಎಂಬುದನ್ನು ಸಾಬೀತುಪಡಿಸಿದ್ದಾನೆ.


ಸುಧಾಕರ್ ಶಾಸಕನಾದ ಹೊಸತರಲ್ಲಿ ಊರೂರಿಗೆ ಭರವಸೆಗಳನ್ನೇ ಕೊಟ್ಟು ಅವುಗಳನ್ನು ಈಡೇರಿಸಲಾಗದೇ ಪರಿತಪಿಸುತ್ತಿದ್ದಾನೆ. ಕಾಂಗ್ರೆಸ್-ದಳ ಮೈತ್ರಿ ಸರ್ಕಾರವಿದ್ದಾಗ ಈತನ ಮಾತು ನಡೆಯುತ್ತಿತ್ತು. ಈಗ ಏನೂ ನಡೆಯುತ್ತಿಲ್ಲ. ಡಿಸಿಸಿ ಬ್ಯಾಂಕ್ ಅಧ್ಯಕ್ಷಗಿರಿ ಹೋಯ್ತು. ತಾಲ್ಲೂಕು ಟಿಎಪಿಸಿಎಂಎಸ್ ಕೈ ಜಾರಿತು. ಚಳ್ಳಕೆರೆಯ ಕೆಲ ಶೆಟ್ಟಿಗಳು ಮತ್ತು ಮಾರ್ವಾಡಿಗಳ ಮೂಲಕ ಬೆಂಗಳೂರಿನಲ್ಲಿ ರಿಯಲ್ ಎಸ್ಟೇಟ್ ಬಿಸಿನೆಸ್ಸಿಗೆ ಅಂದು ಹಾಕಿದ ಕೋಟಿಗಟ್ಟಲೆ ಹಣ ಇನ್ನೂ ವಾಪಸು ಬಂದಿಲ್ಲ. ಹೀಗೆ ಏನೇನೋ ಬಿಸಿನೆಸ್ ಟೆನ್ಷನ್ನಿನಲ್ಲಿರುವಾಗ ದಳದವರು ಹಚ್ಚಿಕೊಟ್ಟು ಹೀಗೆ ಮಾಡಿಸ್ತಾರೆ ಅನ್ನೋದು ಸುಧಾಕರ್ ಬೆಂಬಲಿಗರ ಅಳಲು. ಕುಮಾರಸ್ವಾಮಿ ತಮ್ಮ ಪುಂಡ ಮಗನನ್ನು ಸಮರ್ಥಿಸಿಕೊಳ್ಳುವ ಶೈಲಿಯಲ್ಲೇ ಶಾಸಕ ಸುಧಾಕರನನ್ನು ಸಮರ್ಥಿಸಿಕೊಳ್ಳುತ್ತಾರೆ. ಭಟ್ಟಂಗಿತನಕ್ಕೆ ಎಲ್ಲಿಯ ಮಿತಿ?

-ವರದಿಗಾರ



ನಾಗರಾಜಚಾರಿ ಎಂಥವನು ?

ಕಾಳಿಕಾಂಬ ಜ್ಯುಯಲರ್ಸ್‌ನ ನಾಗರಾಜಚಾರಿ ಎಂಥವನು....? ಎಂಬ ಕುತೂಹಲದಿಂದ ಒಳಹೊಕ್ಕರೆ ಆತನದ್ದೇ ಒಂದು ಕತೆಯಾಗುತ್ತದೆ. ಮೀರಾಸಾಬಿ ಹಳ್ಳಿಯ ಈ ನಾಗರಾಜಚಾರಿ ಚಳ್ಳಕೆರೆಯಲ್ಲಿ ಬಂಗಾರದ ಅಂಗಡಿ ಹಾಕಿಕೊಂಡು ಹತ್ತಿಪ್ಪತ್ತು ವರ್ಷಗಳಲ್ಲಿ ಅಗಾಧವಾಗಿ ಬೆಳೆದಿದ್ದಾನೆ. ಪಾವಗಡ ರಸ್ತೆ ಬೆಂಗಳೂರು ರಸ್ತೆ ಬಳ್ಳಾರಿ ರಸ್ತೆ ಹೀಗೆ ಸಕಲೆಂಟು ದಿಕ್ಕುಗಳಲ್ಲಿ ಲಕ್ಷಾಂತರ ಬೆಲೆ ಬಾಳುವ ಬಿಲ್ಡಿಂಗುಗಳನ್ನು ಹೊಂದಿದ್ದಾನೆ. ಈಗ ಕಾಳಿಕಾಂಬ ಜ್ಯುಯಲರ್ಸ್ ಅಂಗಡಿ ಇರುವ ರಾಮಕೃಷ್ಣ ಹೋಟೆಲ್ ಕಟ್ಟಡದ ಮಾಲೀಕ ಈತನನ್ನು ಎತ್ತಂಗಡಿ ಮಾಡಲು ಪ್ರಯತ್ನಿಸಿದಾಗ ಆತನ ವಿರುದ್ಧವೇ ಕೇಸು ಜಡಿದು ಕುಂತಿದ್ದಾನೆ.




ಬಹಳ ಹಿಂದೆ ಬೆಂಗಳೂರು ಮೂಲದ ಸೇಠ್‌ಜಿಯೊಬ್ಬನಿಂದ ಗೋಲ್ಡ್‌ಬಿಸ್ಕೆಟ್‌ಗಳನ್ನು ಹೊತ್ತು ತಂದನೆಂಬ ಆರೋಪದ ಮೇಲೆ ಹತ್ತಾರು ಕೋರ್ಟಿಗೆ ಅಲೆದಾಡಿದ ಇತಿಹಾಸವಿದೆ. ಆಂಧ್ರದಲ್ಲಿ ಡಕಾಯಿತಿ ನಡೆಸಿದ್ದ ಕೆಲವರು ತಾವು ಕದ್ದ ಮಾಲನ್ನು ಈತನ ಅಂಗಡಿಗೆ ಕೊಟ್ಟಿದ್ದೇವೆಂದು ಪೊಲೀಸರಿಗೆ ಹೇಳಿಕೆ ನೀಡಿದಾಗ ಆಂಧ್ರ ಪೊಲೀಸರೂ ಇವನ ದರ್ಶನ ಮಾಡಿ ಹೋದದ್ದುಂಟು. ಇನ್ನೂ ಈತನ ಮೂಗುಬೊಟ್ಟಿನ ಶೋಕಿಗಳಿಗೆ ರಂಗುರಂಗಿನ ಕತೆಗಳಿವೆ.

ಈಗ ಹಾಲಿ ಸುಧಾಕರ್ ಜೊತೆ ಗುದ್ದಾಟಕ್ಕೆ ಕಾರಣವಾಗಿರುವ ಡಿ.ಎಸ್. ನಗರದ ಜಮೀನನ್ನು ಬ್ಯಾಂಕೊಂದರಲ್ಲಿ ಅಡವಿಟ್ಟು ಲೋನು ಎತ್ತಿದ್ದಾನೆಂಬ ವದಂತಿಗಳಿವೆ. ಅದು ತನಗಾಗಿ ಉಳಿಸಿಕೊಂಡ 7 ಗುಂಟೆ ಜಮೀನಿನ ಹೆಸರಲ್ಲೋ, ಕರಾರುಪತ್ರ ಬರೆದುಕೊಟ್ಟ ಜಮೀನಿನ ಹೆಸರಲ್ಲೋ ಎಂಬುದು ಇನ್ನೂ ಬಯಲಾಗಿಲ್ಲ, ಹಾಗೇನಾದರೂ ಆದರೆ ಸುಧಾಕರ್ ಕೊಟ್ಟ 2 ಲಕ್ಷ ರೂ. ಹರೋಹರ! ಸುಧಾಕರ್‌ನನ್ನು ನಂಬಿಕೊಂಡ ಮಂದಿಯೂ ಹರೋಹರ....!

ಚಳ್ಳಕೆರೆಯ ಜನ ಎಂಥಾ ವಂಚನೆ-ನಯವಂಚನೆಯ ಸರಪಳಿಗಳ ನಡುವೆ ಬದುಕುತ್ತಿದ್ದಾರಲ್ಲವೇ?

ದಲಿತರಿಗೂ ಕೆನೆ ಪದರ ಸವರಿಕೆ



ಮೀಸಲಾತಿಯ ಮೂಲಕ ಜಾತಿ - ಜಾತಿಗಳ ನಡುವೆ ಸಮಾನತೆ ತರುವುದು ಸಾಮಾಜಿಕ ನ್ಯಾಯದ ಗುರಿಯಾಗಿರುವಾಗ ಮೇಲ್ಜಾತಿಗಳಿಗೂ, ಮೀಸಲಾತಿ ಕ್ಷೇತ್ರದಲ್ಲಿ ಬರುವ ಕೆಳಜಾತಿಗಳಿಗೂ ಇರುವ ಕಂದಕವನ್ನು ಹೆಚ್ಚಿಸುವುದೇ ಕೆನೆಪದರದ ಸಾಧನೆಯಾಗಿದೆ. ಅದರಲ್ಲೂ ಮೇಲ್ಜಾತಿಯ ವ್ಯಕ್ತಿಗಳು ವಂಶಪಾರಂಪರ್ಯವಾಗಿ ಅಧಿಕಾರವನ್ನು ಸವಿಯುತ್ತಿರುವಾಗ ಮೀಸಲಾತಿ ದೊರೆತ ದಲಿತರ ಮಕ್ಕಳನ್ನು ಮೀಸಲಾತಿಯಿಂದ ವಂಚಿಸುವುದು ಸಾಮಾಜಿಕ ನ್ಯಾಯಕ್ಕೆ ಧಕ್ಕೆ ತಂದಂತೆ.

ವಿಶೇಷ ಲೇಖನ

ಪ್ರೊ. ರವಿವರ್ಮ ಕುಮಾರ್

ಕರ್ನಾಟಕದ ಸಾವಿರಾರು ದಲಿತ ಇಂಜಿಯರ್‌ಗಳಿಗೆ ಮಾರಕವಾದ 'ಬಡಪ್ಪನವರ್' ತೀರ್ಪಿನ ಹಿನ್ನೆಲೆಯಲ್ಲಿ, ಅವರುಗಳಿಗೆ ದಕ್ಕಿದ್ದ ಬಡ್ತಿಯಲ್ಲಿ ಮೀಸಲಾತಿ ಮತ್ತು ನೇಮಕವಾದ ದಿನಾಂಕದಿಂದಲೇ ಸೇವಾಹಿರಿತನ, ಪುನಃ ಉಳಿಯುವುದು ದೇಶದ ಒಕ್ಕೊರಲ ಧ್ವನಿಯಾಗಿದ್ದಾಗ, ಭಾರತದ ಸಂಸತ್ತು ಸಂವಿಧಾನಕ್ಕೆ ತಿದ್ದುಪಡಿ ಮಾಡಿತು. ಈ ಮೊದಲೇ 'ಮಂಡಲ್ ಮೊಕದ್ದಮೆ' ತೀರ್ಪಿನ ಹಿನ್ನೆಲೆಯಲ್ಲಿ ದಲಿತರಿಗೆ ಬಡ್ತಿಯಲ್ಲಿ ಮೀಸಲಾತಿ ಕೊಡಬಹುದು ಎಂಬ ಪರಿಚ್ಛೇದ 16 (4) (ಎ)ನ್ನು ನೇ ಇಸವಿಯಲ್ಲಿ ಸಂವಿಧಾನದ 77ನೇ ತಿದ್ದುಪಡಿಯ ಮೂಲಕ ಪುನಃ ಸ್ಥಾಪಿಸಲ್ಪಟ್ಟಿತ್ತು. ತದನಂತರ 'ವಿರುಪಾಲ್ ಸಿಂಗ್ ಚೌಹಾಣ್' ಅಜಿತ್‌ಸಿಂಗ್-2 ಮತ್ತು ಬಡಪ್ಪನವರ್ ಮೊಕದ್ದಮೆಯ ಹಿನ್ನೆಲೆಯಲ್ಲಿ ನೀಡಿದ ತೀರ್ಪುಗಳಲ್ಲಿ ನೇಮಕಾತಿ ದಿವಸದಿಂದಲೇ ಸೇವಾಹಿರಿತನ ಕೊಡಲು 2001ನೇ ಇಸವಿಯ 85ನೇ ತಿದ್ದುಪಡಿಯ ಮೂಲಕ ಮತ್ತೆ ಸಂವಿಧಾನವನ್ನು ತಿದ್ದುಪಡಿ ಮಾಡಲಾಯಿತು.

ಏತನ್ಮಧ್ಯೆ ಸರ್ವೋಚ್ಚ ನ್ಯಾಯಾಲಯ ಆರ್.ಕೆ. ಸಬರವಾಲ್ ಮೊಕದ್ದಮೆಯಲ್ಲಿ ನೀಡಿದ ತೀರ್ಪಿನಲ್ಲಿ ಒಟ್ಟಾರೆ ಮೀಸಲಾತಿಯು 50% ಮೀರದಂತೆ ಪ್ರತಿಬಂಧನವನ್ನು ಹೇರಿ ಲಕ್ಷ್ಮಣರೇಖೆ ಹಾಕಿದ ಹಿನ್ನೆಲೆಯಲ್ಲಿ ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬಲು ಅಸಾಧ್ಯವೆನಿಸಿದ ಸಮಸ್ಯೆಯನ್ನು ಬಗೆಹರಿಸಲು ಬ್ಯಾಕ್‌ಲಾಗ್ ಹುದ್ದೆಗಳನ್ನು 50% ಪ್ರತಿಬಂಧನವನ್ನು ಕಾಪಾಡುವುದರ ಸಲುವಾಗಿ 50% ಬಳಿಕ ಕುರಿತಾದ ಪರಿಚ್ಛೇದ 16(4)(ಬ) ತಿದ್ದುಪಡಿಯನ್ನು 2000ನೇ ಇಸವಿಯಲ್ಲಿ ಸಂವಿಧಾನದ 81ನೇ ತಿದ್ದುಪಡಿಯ ಮೂಲಕ ಮಾಡಲಾಯಿತು. ಏತನ್ಮಧ್ಯೆ ವಿನೋದ್ ಕುಮಾರ್ ಮೊಕದ್ದಮೆಯಲ್ಲಿ ಬಡ್ತಿಯಲ್ಲಿ ಮೀಸಲಾತಿ ಕೊಡುವಾಗ ಅರ್ಹತಾ ಪರೀಕ್ಷೆಯ ಅಂಕಗಳನ್ನಾಗಲಿ ಬಡ್ತಿ ಕೊಡುವ ಮಾನದಂಡಗಳಲ್ಲಾಗಲಿ ಯಾವುದೇ ವಿನಾಯಿತಿ ತೋರಿಸಲು ಬರುವುದಿಲ್ಲವೆಂದು ತೀರ್ಪು ಕೊಟ್ಟ ಹಿನ್ನೆಲೆಯಲ್ಲಿ 2000ನೇ ಇಸವಿಯಲ್ಲಿ ಸಂವಿಧಾನದ 82ನೇ ತಿದ್ದುಪಡಿಯ ಮೂಲಕ ಪರಿಚ್ಛೇದ 335ನ್ನೂ ಸಹ ತಿದ್ದುಪಡಿ ಮಾಡಿ ಅಂತಹ ವಿನಾಯ್ತಿ ಸಂವಿಧಾನಬದ್ಧವಾಗಿ ಮಾಡಲು ಅನುವು ಮಾಡಿಕೊಡಲಾಯಿತು. ಇವೆಲ್ಲಾ ತಿದ್ದುಪಡಿಗಳನ್ನು ಸಹ ಸಂಸತ್ತಿನ ಅಧಿಕಾರ ಮೀರಿ ಸಂವಿಧಾನದ ಮೂಲ ತತ್ವಕ್ಕೆ ಮಾಡಿದ ಅಪಚಾರಗಳೆಂದು ಸರ್ವೋಚ್ಚ ನ್ಯಾಯಾಲಯದಲ್ಲಿ ಇವುಗಳ ಸಂವಿಧಾನಬದ್ಧತೆಯನ್ನು ಪ್ರಶ್ನಿಸಲಾಯಿತು. ಆ ಪ್ರಶ್ನೆಗಳಿಗೆ ಸರ್ವೋಚ್ಚ ನ್ಯಾಯಾಲಯ ನೀಡಿರುವ ತೀರ್ಪೇ ಎಂ. ನಾಗರಾಜ್ ವಿರುದ್ಧ ಕೇಂದ್ರ ಸರ್ಕಾರ ಮೊಕದ್ದಮೆಯಲ್ಲಿ ನೀಡಿದ ತೀರ್ಪು. 19-10-2006ರಂದು ಹೊರಡಿಸಲಾದ ಸಂವಿಧಾನ ಪೀಠ (5 ಜನ ನ್ಯಾಯಮೂರ್ತಿಗಳು) ಕೊಟ್ಟ ತೀರ್ಪೇ ಇಂದು ದಲಿತರಿಗೂ, ಕೆನೆ ಪದರ ಹಚ್ಚುತ್ತಿರುವ ಬಗ್ಗೆ ಇಡೀ ರಾಷ್ಟ್ರಕ್ಕೂ ಆತಂಕ ಹುಟ್ಟಿಸಿದೆ.

ಈ ಹಿನ್ನೆಲೆಯಲ್ಲಿ ಕೆನೆ ಪದರದ ಬಗ್ಗೆ ಸ್ವಲ್ಪ ಸವಿಸ್ತಾರವಾಗಿ ತಿಳಿದುಕೊಳ್ಳುವುದು ಉತ್ತಮ.

ಪರಿಶಿಷ್ಟ ಜಾತಿಯ ಅರ್ಥ


ಕೆನೆ ಪದರದ ಕಲ್ಪನೆ ಭಾರತದ ಸಂವಿಧಾನದಲ್ಲಿ ಸಾಮಾಜಿಕ ನ್ಯಾಯದ ಸಲುವಾಗಿ ಹಿಂದುಳಿದವರನ್ನೇ ಆಗಲಿ, ದಲಿತರನ್ನೇ ಆಗಲಿ ಗುರುತಿಸುವ ಸಂದರ್ಭದಲ್ಲಿ ಕೆನೆ ಪದರದ ಬಗ್ಗೆ ಎಲ್ಲಿಯೂ ಪ್ರಸ್ತಾಪಿಸಿರುವುದಿಲ್ಲ. ಹಾಗಾಗಿ ಕೆನೆ ಪದರ ಸಂವಿಧಾನದಲ್ಲಿ ಉಲ್ಲೇಖ ಮಾಡಿರುವ ನೀತಿಯಲ್ಲಿ, ಪರಿಶಿಷ್ಟ ಜಾತಿಯವರು ಯಾರು? ಎಂದು ಪರಿಚ್ಛೇದ 366(24) ರಲ್ಲಿ ನಿಖರವಾಗಿ ಅರ್ಥೈಸಲಾಗಿದೆ. ಈ ಪರಿಚ್ಛೇದದ ಪ್ರಕಾರ ಪರಿಶಿಷ್ಟ ಜಾತಿಗಳೆಂದರೆ ಪರಿಚ್ಛೇದ 341ರ ಅಡಿಯಲ್ಲಿ ಪಟ್ಟಿ ಮಾಡಲ್ಪಟ್ಟ ಜಾತಿಗಳು, ಜನಾಂಗಗಳು ಮತ್ತು ಬುಡಕಟ್ಟುಗಳು. ಹೀಗೆ ಪಟ್ಟಿ ಮಾಡಲ್ಪಟ್ಟ ಜಾತಿಗಳು, ಜನಾಂಗಗಳು ಮತ್ತು ಬುಡಕಟ್ಟುಗಳನ್ನು ಆಯಾ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಪರಿಶಿಷ್ಟ ಜಾತಿಯವರು ಎಂದು ಪರಿಗಣಿಸಬೇಕೆಂಬ ಕಟ್ಟಪ್ಪಣೆಯಾಗಿದೆ. ಅಂದರೆ ಪರಿಚ್ಛೇದ 341ರ ಪ್ರಕಾರ ತಯಾರಿಸಿದ ಪಟ್ಟಿ ಸಂವಿಧಾನದ ಎಲ್ಲಾ ಪ್ರಯೋಗಗಳಿಗೂ ಪರಿಶಿಷ್ಟ ಜಾತಿಗಳೆಂದೇ ಪರಿಗಣಿಸಲ್ಪಡುತ್ತದೆ. ಮೀಸಲು ಕ್ಷೇತ್ರದಿಂದ ಚುನಾವಣೆಗೆ ಸ್ಪರ್ಧಿಸಲಾಗಲಿ, ಶಾಲಾ ಕಾಲೇಜುಗಳಿಗೆ ಪ್ರವೇಶ ಪಡೆಯುವುದಕ್ಕಾಗಲಿ, ಶಿಕ್ಷಣದಲ್ಲಿ ಶುಲ್ಕ ವಿನಾಯಿತಿ, ವಿದ್ಯಾರ್ಥಿವೇತನ, ವಿದ್ಯಾರ್ಥಿ ನಿಲಯಗಳಿಗೆ ಪ್ರವೇಶ.... ಇಂತಹ ಎಲ್ಲಾ ಅವಕಾಶಗಳಿಗೂ ಜಾತಿಗಳಲ್ಲಿನ ಎಲ್ಲರೂ ಸಹ ಪರಿಶಿಷ್ಟ ಜಾತಿಯವರೇ ಎಂದು ಪರಿಗಣಿಸಬೇಕು.

ಹಾಗೆಯೇ ಸರ್ಕಾರಿ ಸೇವೆಯಲ್ಲಿ ನೇಮಕಾತಿಗೆ ಆಗಲಿ, ಬಡ್ತಿಗೆ ಆಗಲಿ ಇವರೆಲ್ಲರೂ ಪರಿಶಿಷ್ಟ ಜಾತಿಯವರೇ ಎಂದು ಪರಿಗಣಿಸಲ್ಪಡುತ್ತಾರೆ. ಹಾಗೆಯೆ ಪರಿಶಿಷ್ಟ ಜಾತಿಯವರು ಯಾರು? ಎಂಬುದರ ಬಗ್ಗೆ ಸಂವಿಧಾನ ಸ್ಪಷ್ಟವಾಗಿ ಅರ್ಥೈಸಿದ್ದು ಆ ಬಗ್ಗೆ ಕಾರ್ಯಾಂಗವೇ ಆಗಲಿ, ನ್ಯಾಯಾಂಗವೇ ಆಗಲಿ, ಯಾವುದೇ ರೀತಿಯಲ್ಲಾಗಲಿ ಹಸ್ತಕ್ಷೇಪ ಮಾಡಲು ಅವಕಾಶವಿರುವುದಿಲ್ಲ. ಪರಿಚ್ಛೇದ 341ರ ಪಟ್ಟಿಗೆ ತಿದ್ದುಪಡಿಯನ್ನಾಗಲೀ ಬದಲಾವಣೆಯನ್ನಾಗಲಿ ಇನ್ನಿತರ ಮಾರ್ಪಾಡನ್ನಾಗಲಿ ಮಾಡಲು ಕಾರ್ಯಾಂಗಕ್ಕಾಗಲಿ, ನ್ಯಾಯಾಂಗಕ್ಕಾಗಲಿ ಅಧಿಕಾರವಿಲ್ಲ, ಡಾ|| ಮಿಲನ್ ಮೊಕದ್ದಮೆಯಲ್ಲಿ ನೀಡಿರುವ ಸಂವಿಧಾನ ಪೀಠದ ತೀರ್ಪಿನಲ್ಲಿ ಘಂಟಾಘೋಷವಾಗಿ ಸರ್ವೋಚ್ಚ ನ್ಯಾಯಾಲಯವೇ ಇದನ್ನು ಸಾರಿದೆ. ಇದೇರೀತಿ ಸಂವಿಧಾನದ ಕಟ್ಟಪ್ಪಣೆ ಪರಿಶಿಷ್ಟ ವರ್ಗಗಳಿಗೂ ಸಹ ಇದೆ. ಪರಿಚ್ಛೇದ 366(25), 341 ಮತ್ತು 342ರ ಪರಿಚ್ಛೇದಗಳಲ್ಲಿ ಮಾಡಲಾಗಿದೆ. ಹಾಗಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರು ಯಾರು ಎಂಬುದರ ಬಗ್ಗೆ ಅತ್ಯಂತ ನಿಖರವಾಗಿ ಸಂವಿಧಾನ ಘೋಷಣೆ ಮಾಡಿರುವಹಿನ್ನೆಲೆಯಲ್ಲಿ ಕಾರ್ಯಾಂಗ ಮತ್ತು ನ್ಯಾಯಾಂಗಗಳ ಹಸ್ತಕ್ಷೇಪ ಸಲ್ಲದು.

ಪರಿಶಿಷ್ಟ ಜಾತಿಗಳ ವರ್ಗೀಕರಣ

ಕರ್ನಾಟಕದ ಪರಿಶಿಷ್ಟ ಜಾತಿಗಳಲ್ಲಿ 101 ಜಾತಿಗಳಿವೆ. ಈ 101 ಜಾತಿಗಳು ಸಹ ಸರಿಸಮಾನವಾದ ಸ್ಥಾನ ಉಳ್ಳವುಗಳಲ್ಲ, ಅದೇರೀತಿ ಆಂಧ್ರ ಪ್ರದೇಶದ ಪರಿಶಿಷ್ಟ ಜಾತಿಗಳ ಪಟ್ಟಿಯಲ್ಲಿ 57 ಜಾತಿಗಳಿದ್ದು ಅವುಗಳೂ ಸಹ ಸರಿಸಮನಾದ ಸ್ಥಾನಮಾನದಲ್ಲಿಲ್ಲ, ಅಲ್ಲಿನ ಎಡಗೈ ಮತ್ತು ಬಲಗೈ ಜಾತಿಗಳು ತೀವ್ರತರವಾದ ಅಸಮಾನತೆಯನ್ನು ಎದುರಿಸುತ್ತಿವೆ ಎಂಬ 'ಮಾದಿಗ ದಂಡೋರ' ಹೋರಾಟದ ಹಿನ್ನೆಲೆಯಲ್ಲಿ ಹಲವಾರು ವಿಫಲ ಪ್ರಯತ್ನಗಳ ನಂತರ ಆಂಧ್ರಪ್ರದೇಶ ಶಾಸಕಾಂಗ 2000ನೇ ಇಸವಿಯಲ್ಲಿ ಈ 57 ಜಾತಿಗಳನ್ನು 4 ಸಮೂಹಗಳಾಗಿ ವಿಂಗಡಿಸಿತು. ಹಾಗೆಯೇ ಒಟ್ಟಾರೆ ಕೊಟ್ಟಿದ್ದ 15% ಮೀಸಲಾತಿಯನ್ನೂ ಸಹ ಈ ನಾಲ್ಕು ಗುಂಪುಗಳಲ್ಲಿ ಹಂಚಲಾಯಿತು. ಈ ವಿಂಗಡಣೆಯನ್ನು 57 ಜಾತಿಗಳಲ್ಲಿರುವ ವಿವಿಧ ಹಂತದ ಹಿಂದುಳಿದಿರುವಿಕೆಯನ್ನು ಗಮನದಲ್ಲಿಟ್ಟುಕೊಂಡು 'ಜಸ್ಟಿಸ್ ರಾಮಚಂದ್ರ ರಾಜು' ಆಯೋಗ ಈ ಕೆಳಗಿನಂತೆ ನಾಲ್ಕು ಗುಂಪುಗಳನ್ನಾಗಿ ಮಾಡಿ ಅವುಗಳಿಗೆ ಮೀಸಲಾತಿಯನ್ನು ನೀಡಲು ತನ್ನ ವರದಿಯಲ್ಲಿ ಶಿಫಾರಸ್ಸು ಮಾಡಿತ್ತು,

ಎ - 1%
ಬಿ - 7%
ಸಿ - 6%
ಡಿ - 1%



ಒಂದು ರಾಜ್ಯದ ಶಾಸಕಾಂಗ ಈ ರೀತಿಯ ವರ್ಗೀಕರಣವನ್ನು ಮಾಡುವ ಅಧಿಕಾರವನ್ನು ಹೊಂದಿಲ್ಲ, ಒಮ್ಮೆ 341ನೇ ಪರಿಚ್ಛೇದದ ಪ್ರಕಾರ ಪರಿಶಿಷ್ಟ ಜಾತಿಗಳೆಂದು ಪರಿಗಣಿಸಿದ ಮೇಲೆ ಆ ಜಾತಿಗಳನ್ನು ಸಂವಿಧಾನದ ಎಲ್ಲಾ ಪ್ರಯೋಗಗಳಿಗೂ ಸಹ ಪರಿಶಿಷ್ಟ ಜಾತಿಗಳೆಂದೇ ಪರಿಗಣಿಸಬೇಕು, ಆ ಎಲ್ಲಾ ಜಾತಿಗಳು ಸಹ ಒಂದು ವರ್ಗ ಆದ್ದರಿಂದ ಅವುಗಳ ಮರು ವರ್ಗೀಕರಣ ಸಂವಿಧಾನಬಾಹಿರ- ಎಂದು ಸರ್ವೋಚ್ಚ ನ್ಯಾಯಾಲಯವು 'ಈ.ವಿ. ಚಿನ್ನಯ್ಯ' ವಿರುದ್ಧ 'ಆಂಧ್ರಪ್ರದೇಶ ರಾಜ್ಯ' ಎನ್ನುವ ಮೊಕದ್ದಮೆಯಲ್ಲಿ 2005ರಲ್ಲಿ ತೀರ್ಪು ನೀಡಿತ್ತು,

ಈ ಹಿನ್ನೆಲೆಯಲ್ಲಿ ಪರಿಶಿಷ್ಟ ಜಾತಿಗಳೆಂದರೆ ಯಾರು? ಪರಿಶಿಷ್ಟ ವರ್ಗಗಳೆಂದರೆ ಯಾರು? ಎಂಬುದರ ಬಗ್ಗೆ ಸ್ಪಷ್ಟವಾಗಿ ಮತ್ತು ನೇರವಾಗಿ ಸಂವಿಧಾನದಲ್ಲಿ ಹೇಳಲಾಗಿದೆಯಲ್ಲದೆ, ಅವರ ನಡುವೆ ಯಾವುದೇ ರೀತಿಯ ವರ್ಗೀಕರಣಕ್ಕಾಗಲಿ, ಪುನರ್ ವರ್ಗೀಕರಣಕ್ಕಾಗಲಿ, ಸೂಕ್ಷ್ಮ ವಿಂಗಡಣೆಗಾಗಲಿ ಅವಕಾಶ ಮಾಡಿಕೊಟ್ಟಿಲ್ಲ,

ಎಲ್ಲಾ ಪರಿಶಿಷ್ಟ ಜಾತಿಗಳು ಪರಿಶಿಷ್ಟ ಜಾತಿಗಳೇ. ಕೋಲಾರ ಅಥವಾ ಚಾಮರಾಜನಗರ ಲೋಕಸಭಾ ಕ್ಷೇತ್ರಕ್ಕೆ ಕರ್ನಾಟಕದ ಎಲ್ಲಾ 101 ಪರಿಶಿಷ್ಟ ಜಾತಿಗಳ ಎಲ್ಲಾ ಸದಸ್ಯರು ಸಹ ಅರ್ಹ ಅಭ್ಯರ್ಥಿಗಳು. ಪರಿಶಿಷ್ಟ ಜಾತಿಗಳಿಗೆ ಮೀಸಲಾದ ಪ್ರತಿಯೊಂದು ಹುದ್ದೆಗೂ ಎಲ್ಲಾ 101 ಜಾತಿಯ ಅಭ್ಯರ್ಥಿಗಳು ಸಹ ನೇಮಕಾತಿ ಬಯಸಿ ಅರ್ಜಿ ಹಾಕುವ ಅರ್ಹತೆ ಹೊಂದಿದ್ದಾರೆ. ಹಾಗೆಯೇ ವೃತ್ತಿಪರ ಶಿಕ್ಷಣ ಪ್ರವೇಶಗಳಿಗೂ ಸಹ ಎಲ್ಲಾ 101 ಜಾತಿಗಳ ಅಭ್ಯರ್ಥಿಗಳು ಅರ್ಹರು. ಈ ಪರಿಶಿಷ್ಟ ಜಾತಿಗಳಲ್ಲಿ ಮುಂದುವರಿದವರೆಂಬುದಿಲ್ಲ, ಹಾಗೆಯೇ ಹಿಂದುಳಿದವರೆಂಬುದಿಲ್ಲ; ಅವರೆಲ್ಲರೂ ಸರಿಸಮಾನರು. ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ವರ್ಗಗಳನ್ನು ಸಂವಿಧಾದಲ್ಲಿ ನಿಖರವಾದ ವ್ಯಾಕರಣದ ಮೂಲಕ ಅರ್ಥೈಸಿರುವಾಗ ಹಿಂದುಳಿದ ವರ್ಗಗಳಿಗೆ ಸಂವಿಧಾನದಲ್ಲಿ ಈ ಸೌಭಾಗ್ಯ ದೊರೆತಿಲ್ಲ,

ಪರಿಚ್ಛೇದ 16(4)ರಲ್ಲಿ ಬರೀ ಹಿಂದುಳಿದ ವರ್ಗಗಳು ಎಂಬ ಪದಗಳನ್ನು ಬಳಸಲಾಗಿದೆ. (ಸರ್ಕಾರಿ ಸೇವೆಗೆ ಮಾತ್ರ) ಪರಿಚ್ಛೇದ 15(4)ರಲ್ಲಿ ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದವರು ಎಂಬ ಪದಗಳನ್ನು ಬಳಸಲಾಗಿದೆ. ಇದೇ ಪದಗಳನ್ನು ಹಿಂದುಳಿದ ವರ್ಗಗಳನ್ನು ಕುರಿತಾದ ಆಯೋಗದ ಸಂಬಂಧದಲ್ಲಿ ಪರಿಚ್ಛೇದ 340ರಲ್ಲಿಯೂ ಸಹ ಬಳಸಲಾಗಿದೆ. ಪರಿಚ್ಛೇದ 338ರಲ್ಲಿ ಪರಿಶಿಷ್ಟ ಜಾತಿಗಳ ರಾಷ್ಟ್ರೀಯ ಆಯೋಗಗಳ ಬಗ್ಗೆ ಹೇಳುವಾಗ ಪರಿಶಿಷ್ಟ ಜಾತಿಗಳು ಎಂಬ ಪದಗಳಲ್ಲಿ 'ಇತರ ಹಿಂದುಳಿದ ವರ್ಗಗಳು' ಸೇರಲ್ಪಡುತ್ತವೆ ಎಂದು ಹೇಳಲಾಗಿದೆ. ಇಡೀ ಸಂವಿಧಾನವನ್ನು ಜಾಲಾಡಿಸಿದರೂ ಹಿಂದುಳಿದ ವರ್ಗಗಳು ಯಾರೆಂದು ಪತ್ತೆ ಹಚ್ಚಲು ಸಿಗುವ ಪ್ರಮಾಣಗಳು ಮತ್ತು ಮಾರ್ಗದರ್ಶನಗಳು ಇಷ್ಟೇ. ಈ ಹಿನ್ನೆಲೆಯಲ್ಲಿ ಹಿಂದುಳಿದ ವರ್ಗದವರಾರೆಂದು ಅವರವರ ಇಷ್ಟ ಬಂದಂತೆ ವ್ಯಾಖ್ಯಾನ ಮಾಡಲಾಗುತ್ತಿದೆ.

ಈ ರೀತಿ ವ್ಯಾಖ್ಯಾನ ಮಾಡುವಾಗ ನಾನಾ ರೀತಿ ಅರ್ಥೈಸಿ ಕಾಲಕಾಲಕ್ಕೆ ವಿವಿಧ ಬಣ್ಣಗಳ, ವಿವಿಧ ರೂ ಹಿಂದುಳಿದ ವರ್ಗಗಳು ಸೃಷ್ಟಿಯಾಗಿವೆ. ಸಂವಿಧಾನಬ ವಿಂಗಡಣೆಯಾದಾಗ ಹಿಂದುಳಿದ ವರ್ಗಗಳು ಪ್ರಮುಖ ವನ್ನೇ ಮುಖ್ಯ ಕಸುಬಾಗಿಸಿಕೊಂಡ, ಹೀನವೃತ್ತಿ ತೊಡಗಿರುವ, ಸಾಮಾಜಿಕವಾಗಿ ಹಿಂದುಳಿದ ಜಾತಿ ಹೊಂದಿದ್ದರೆ, ಮೇಲ್ಜಾತಿಗಳವರು ಇದನ್ನು ವಿ ಮಾಡಿದಾಗ ಯಾವುದೇ ಜಾತಿಗಳನ್ನು ಸೇರಿಸದೆ ಜಾತಿಗಳಿಗೂ ಮೀಸಲಾತಿ ದೊರೆಯುವಂತೆ ಈ ಗಳನ್ನು ಅರ್ಥೈಸಿದ್ದಾರೆ. ಉದಾ : ಬಾಲಾಜಿ ಮೊಕದ್ದ ನಂತರ ಮೈಸೂರು ಸರ್ಕಾರ ಮಾಡಿದ ವರ್ಗೀಕರಣ ಬ್ರಾಹ್ಮಣಾಪಾದಿಯಾಗಿ ಎಲ್ಲಾ ಜಾತಿಗಳನ್ನು ಹಿಂದುಳಿದ ಹೆಸರಿನಲ್ಲಿ ಸೇರಿಸಲಾಗಿತ್ತು,

ಸಂವಿಧಾನದಲ್ಲಿ ನಿಖರವಾದ ವ್ಯಾಖ್ಯಾನ ಇಲ್ಲದಿ ಹಿನ್ನೆಲೆಯಲ್ಲಿ ನ್ಯಾಯಾಂಗವೂ ಸಹ ಹಲವಾರು ತಪ್ಪು ವ್ಯಾಖ್ಯಾನಗಳನ್ನು ಮಾಡಿದ ಸಂದರ್ಭಗಳಿವೆ. ಆದರೆ ಬ ಪ್ರಮುಖವಾಗಿ ಹಿಂದುಳಿದ ಜಾತಿಗಳನ್ನು ಹಿಂದು ವರ್ಗಗಳಾಗಿ ಗುರುತಿಸಬಹುದೆನ್ನುವಾಗ ತಂದಿರುವ ಬ ದೊಡ್ಡ ಬದಲಾವಣೆ ಎಂದರೆ ಆ ಜಾತಿಗಳನ್ನು ಪದರದಿಂದ ಹೊರಗಿಡುವ ಘೋಷಣೆ. ಈ ಘೋಷ ಸರ್ವೋಚ್ಚ ನ್ಯಾಯಾಲಯ ಮಾಡಿರುವುದರಿಂದ ಇಡೀ ರಾಷ್ಟ್ರಕ್ಕೆ ಅನ್ವಯಿಸುವ ಕಾನೂನಾಗಿದೆ. ಹಾ ಇಂದು ಯಾವುದೇ ರಾಜ್ಯದಲ್ಲಿ ಹಿಂದುಳಿದ ವರ್ಗ ಗುರುತಿಸುವಿಕೆ ನಡೆದಾಗ ಅಂತಹ ವರ್ಗಗಳಿಂದ ಆ ಜಾತಿಗಳಲ್ಲಿ ಅತ್ಯಂತ ಸೂಕ್ತವಾದ ವ್ಯಕ್ತಿಗಳು ಕೆನೆ ಪದ ಹೆಸರಿನಲ್ಲಿ ಮೀಸಲಾತಿಯಿಂದ ವಂಚಿತರಾಗುತ್ತಿದ್ದಾರೆ. ಸಂದರ್ಭಗಳಲ್ಲಿಯೂ ಸಹ ಮೀಸಲಾತಿಯ ಕಾರ್ಯ ಗಳು ಅನೂರ್ಜಿತಗೊಳಿಸುವಾಗ ಆಡಳಿತ ಸಾಮರ್ಥ ಧಕ್ಕೆಯಾಗುತ್ತದೆ ಎಂದು 330ನೇ ಪರಿಚ್ಛೇದ ನ್ಯಾಯಾಂಗ ಉಲ್ಲೇಖಿಸಿದಾಗ್ಯೂ ಸಮರ್ಥ ಹಿಂದು ವರ್ಗಗಳನ್ನು ಕೆನೆ ಪದರದ ಹೆಸರಿನಲ್ಲಿ ಮೀಸಲಾತಿಯಿ ಹೊರಗುಳಿಸಲಾಗುತ್ತದೆ. ಆದರೆ ಆ ಜಾತಿಯಿಂದ ಕ ಸಮರ್ಥರು ಮೀಸಲಾತಿ ಸೌಲಭ್ಯ ಪಡೆಯುವ ಆಡಳಿತದ ಸಾಮರ್ಥ್ಯಕ್ಕೆ ಧಕ್ಕೆ ಉಂಟು ಮಾಡಬಹುದು ವಿಚಾರವನ್ನು ನ್ಯಾಯಾಂಗ ಪರಿಗಣಿಸಿಲ್ಲ,

ಕೆನೆಪದರದ ಅರ್ಥ

ಮಂಡಲ್ ಮೊಕದ್ದಮೆಯಲ್ಲಿ ಕೆನೆಪದರ ಕಡ್ಡಾಯವಾಗಿ ಹಿಂದುಳಿದ ವರ್ಗಗಳಿಂದ ಹೊ ಬೇಕೆಂದು ಸರ್ವೋಚ್ಚ ನ್ಯಾಯಾಲಯ ತೀರ್ಪಿ ಹಾಗಾಗಿ ಕೆನೆ ಪದರವನ್ನು ಯಾರೆಂದು ಪರಿಗಣಿಸುವು ನಂತರ ಒಂದು ಮೊಕದ್ದಮೆಯಲ್ಲಿ ಕೆನೆ ಪದರ ಎ ಏನು ಎಂಬುದರ ಬಗ್ಗೆ ಸರ್ವೋಚ್ಚ ನ್ಯಾಯಾಲಯ ವ್ಯಾಖ್ಯಾನಿಸಿದೆ. ಐ.ಎ.ಎಸ್., ಐ.ಪಿ.ಎಸ್. ಮತ್ತು ಅ ಭಾರತ ಸೇವೆಗಳಲ್ಲಿ ಬರುವವರು, ಅಂತಹ ಸೇವ ಸಮೀಪ ಅಂತಸ್ತಿನಲ್ಲಿರುವವರು, ಸಾಕಷ್ಟು ಶ್ರೀಮಂತರಾ ವವರು, ಸಾಮಾಜಿಕ ಅಂತಸ್ತಿನಲ್ಲಿ ಮೇಲ್ಮಟ್ಟದಲ್ಲಿರುವ ದೊಡ್ಡ ಹಿಡುವಳಿದಾರರು ಮತ್ತು ತಮ್ಮ ಆಸ್ತಿ ಪಾಸ್ತಿಗಳಿಂದ ಸಾಕಷ್ಟು ವರಮಾನ ಬರುವವರನ್ನು ಪದರವೆಂದು ಹೊರಗಿಡಬೇಕೆಂದು 1999ರಲ್ಲಿ ಇಂದ್ರ ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯ ವ್ಯಾಖ್ಯಾನಿಸಿದೆ. ಹಾಗಾಗಿ ಕೇಂದ್ರ ಸರ್ಕಾರಿ ಸೇವೆಯಲ್ಲಾ ರಾಜ್ಯ ಸೇವೆಯಲ್ಲಾಗಲಿ ಮೀಸಲಾತಿ ಕೊಡು ಹಿಂದುಳಿದ ವರ್ಗಗಳಲ್ಲಿ ಈ ಎಲ್ಲಾ ವರ್ಗದ ಜನ ಕೆನೆ ಪದರವೆಂದು ಹೊರಗಿಡಲಾಗಿದೆ.

ಮೂಲಭೂತ ತತ್ವಕ್ಕೇರಿದ ಕೆನೆ ಪದ

ನಾಗರಾಜ್ ಮೊಕದ್ದಮೆಯಲ್ಲಿ ಸಂಪೂ ತದ್ವಿರುದ್ಧವಾಗಿರುವ ಎರಡು ತೀರ್ಮಾನಗಳೆಂದರೆ ಪರಿ 16 (4) (ಬ) ಎತ್ತಿ ಹಿಡಿದಾಗ್ಯೂ ಅದನ್ನು 50 ಮಿತಿಗೆ ಒಳಪಡಿಸಿ ಬ್ಯಾಕ್‌ಲಾಗ್ ಹುದ್ದೆಗಳ 50%ರ ಮೇಲಿರಲಿ ಎನ್ನುವ ದೃಷ್ಟಿಯಲ್ಲಿ ಸಂವಿಧಾನ ತಿದ್ದುಪಡಿ ಮಾಡಿದರೆ, 50% ಮಿತಿಗೆ ಒಳಪ ಇದರ ಸಂವಿಧಾನಬದ್ಧತೆಯನ್ನು ಎತ್ತಿ ಹಿಡಿಯುತ್ತ ಎಂದು ಸರ್ವೋಚ್ಚ ನ್ಯಾಯಾಲಯ ಹೇಳಿತು. ಅದ ಬಲಗೈಯಿಂದ ನೀಡಿದನ್ನು ಎಡಗೈಯಿಂದ ಕಸಿ ಕೊಂಡಿದೆ.

50% ರ ಮಿತಿ ಮತ್ತು ಕೆನೆಪದರ ಸಂವಿಧಾನ ಬರೆದ ತತ್ವಗಳಲ್ಲ, ಇವೆರಡೂ ನ್ಯಾಯಾಂಗ ಸೃಷ್ಟಿ ಶಿಶುಗಳು. ಸಂವಿಧಾನದ ತಿದ್ದುಪಡಿ ಎಂದರೆ ಸಂಸ ಪರಮೋಚ್ಚ ಅಧಿಕಾರದ ಪ್ರಯೋಗ, ಆ ಪ್ರಯೋ ಸಂವಿಧಾನದ ಯಾವುದೇ ಪರಿಚ್ಛೇದ ಅಡ್ಡಿ ಬರಬಾರ ಯಾವುದೇ ಮೂಲಭೂತ ಸ್ವತಂತ್ರಗಳು ಮತ್ತು ಮೂ ಭೂತ ಹಕ್ಕುಗಳೂ ಸಹ ಇದನ್ನು ಅಡ್ಡಿಪಡಿಸಲಾ ಎಂದು ಸರ್ವೋಚ್ಚ ನ್ಯಾಯಾಲಯ ಕೇಶವಾನಂದ ಭಾ ಮೊಕದ್ದಮೆಯಲ್ಲಿ ಘೋಷಿಸಿದೆ. ಸಂವಿಧಾನದ ಮು ಆಶಯಗಳಿಗಷ್ಟೇ ಧಕ್ಕೆ ತರಬಾರದೆಂದು ಹೇ ಸಂವಿಧಾನದ ಪೀಠಿಕೆ (ಪ್ರಿಯಾಂಬಲ್)ಯಲ್ಲಿ ಹೇಳಿ ಜಾತ್ಯತೀತತೆಯನ್ನು ಸಂವಿಧಾನದ ಆಶಯವೆಂದು ಸರ್ವೋ ನ್ಯಾಯಾಲಯ ಘೋಷಿಸಿದೆ.

ಸಾಮಾಜಿಕವಾದ ಮತ್ತು ಸಾಮಾಜಿಕ ನ್ಯಾಯ ಎರಡು ...ಪೀಠಿಕೆಯಲ್ಲಿ ಹೇಳಿರುವ ವಿಚಾರಗಳು. ಸಾಮಾಜಿಕ ನ್ಯಾಯದ ತತ್ವ ಸಂವಿಧಾನದ ಮೂಲ ಆಶಯವಾದ ಸಮಾನತೆಯನ್ನು ಸಾಧಿಸುವ ಸಾಧನವಾಗಿದೆ. ಆದ್ದರಿಂದ ಸಾಮಾಜಿಕ ನ್ಯಾಯವನ್ನು ಮೂಲಭೂತ ಆಶಯವೆಂದು ಘೋಷಿಸದೇ ತಾನೇ ಸೃಷ್ಟಿಸಿದ 50% ಮಿತಿ ಮತ್ತು ಕೆನೆ ಪದರದ ನೀತಿಗಳಿಗೆ ಬದ್ಧವಾಗಿ ಸಂವಿಧಾನದ ತಿದ್ದುಪಡಿಗಳನ್ನು ಎತ್ತಿಹಿಡಿಯುತ್ತೇವೆ ಎಂದು ಹೇಳಿದರೆ ಇದು ಸಂವಿಧಾನಕ್ಕೆ ಮಾಡಿದ ಘೋರ ಅಪಚಾರವಾಗುತ್ತದೆ.

ನಾಗರಾಜ ಮೊಕದ್ದಮೆಯ ಪರಿಣಾಮಗಳು

ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳು ಮತ್ತು ಹಿಂದುಳಿದ ವರ್ಗಗಳು ಒಂದೇ ಸಮೂಹದ ಅಥವಾ ವರ್ಗಕ್ಕೆ ಅನ್ವಯಿಸಬಹುದಾದಂತಹ ತತ್ವಗಳು. ಆದರಲ್ಲಿಯೂ ವ್ಯಕ್ತಿಗತವಾಗಿ ಅನ್ವಯಿಸಬಹುದಾದಂತಹ ಕೆನೆಪದರದ ನೀತಿ ಆ ವರ್ಗ ಸಂಕಲ್ಪಕ್ಕೆ ಧಕ್ಕೆ ತರುವಂತಹ ನೀತಿಯಾಗಿದೆ. ಯಾವ ಜಾತಿಗಳಿಗೆ ಪ್ರಾತಿನಿಧ್ಯ ಕೊಡಲೆಂದು ಮೀಸಲಾತಿಯನ್ನು ಯೋಜಿಸಲಾಗಿದೆಯೋ ಆ ಜಾತಿಗಳಿಗೆ ಅಂತಹ ಪ್ರಾತಿನಿಧ್ಯ ತಪ್ಪಿಸುವ ನೀತಿ ಈ ಕೆನೆಪದರದ ತತ್ವ.

ದಲಿತರಲ್ಲಿರುವ ಪ್ರತಿಭೆಗಳನ್ನು ಕೆನೆ ಪದರದ ಹೆಸರಿನಲ್ಲಿ ಹೊರಗಿಟ್ಟರೆ ಪರಿಚ್ಛೇದ 335ರಲ್ಲಿ ಹೇಳಿರುವ ಆಡಳಿತ ಸಾಮರ್ಥ್ಯ ಕುಸಿಯುವುದರಲ್ಲಿ ಯಾವುದೇ ಅನುಮಾನವಿಲ್ಲ. ಅದರಲ್ಲೂ ಹಿಂದುಳಿದ ವರ್ಗಗಳನ್ನು ಗುರುತಿಸುವಾಗ ಈ ಕೆನೆಪದರದಲ್ಲಿ ಬರುವ ಜನರನ್ನು ಸೇರಿಸಿ ಅವರ ಹಿಂದುಳಿದಿರುವಿಕೆಯನ್ನು ಗುರುತಿಸಿರುವಾಗ ಅಂತಹ ಸರ್ಕಾರಿ ನೌಕರರನ್ನು ಅಥವಾ ಇತರೆ ಕೆನೆಪದರವೆಂದು ...ರೆದ ವ್ಯಕ್ತಿಗಳನ್ನು ಮೀಸಲಾತಿಯಿಂದ ಹೊರಗಿಡುವುದು ಎಷ್ಟು ನ್ಯಾಯ?


ಮೀಸಲಾತಿಯ ಮೂಲಕ ಜಾತಿ - ಜಾತಿಗಳ ನಡುವೆ ಸಮಾನತೆ ತರುವುದು ಸಾಮಾಜಿಕ ನ್ಯಾಯದ ಗುರಿಯಾಗಿರುವಾಗ ಮೇಲ್ಜಾತಿಗಳಿಗೂ, ಮೀಸಲಾತಿ ಕ್ಷೇತ್ರದಲ್ಲಿ ಬರುವ ಕೆಳಜಾತಿಗಳಿಗೂ ಇರುವ ಕಂದಕವನ್ನು ಹೆಚ್ಚಿಸುವುದೇ ಕೆನೆಪದರದ ಸಾಧನೆಯಾಗಿದೆ. ಹಾಗಾಗಿ ಸಾಮಾಜಿಕ ನ್ಯಾಯದ ಮೂಲತತ್ವಕ್ಕೆ ಗಂಭೀರವಾದ ಚ್ಯುತಿಯನ್ನುಂಟು ಮಾಡುವುದೇ ಈ ಕೆನೆಪದರದ ನೀತಿ. ಅದರಲ್ಲೂ ಮೇಲ್ಜಾತಿಯ ವ್ಯಕ್ತಿಗಳು ವಂಶಪಾರಂಪರ್ಯವಾಗಿ ಅಧಿಕಾರವನ್ನು ಸವಿಯುತ್ತಿರುವಾಗ ಮೀಸಲಾತಿ ದೊರೆತ ದಲಿತರ ಮಕ್ಕಳನ್ನು ಮೀಸಲಾತಿಯಿಂದ ವಂಚಿಸುವುದು ಸಾಮಾಜಿಕ ನ್ಯಾಯಕ್ಕೆ ಧಕ್ಕೆ ತಂದಂತೆ. ಮತ್ತು ಮೇಲ್ಜಾತಿಯವರಿಗೆ ಯಾವತ್ತೂ ಸ್ಪರ್ಧೆ ಬಾರದಿರುವಂತೆ ನೋಡಿಕೊಳ್ಳುವ ಒಂದು ಅಸ್ತ್ರವಾಗಿದೆ. ಮೇಲ್ಜಾತಿಗಳಿಗೆ ಇಲ್ಲದ ಕೆನೆ ಪದರದ ಕೊಡೆತ ಕೆಳಜಾತಿಗಳ ಮೇಲೆ ಮಾಡಿದ ಗಂಭೀರವಾದ ತಾರತಮ್ಯವಾಗಿದೆ. ಬಡ್ತಿ ಪಡೆಯಬೇಕಾದರೆ ಉದ್ಯೋಗದಲ್ಲಿರಲೇ ಬೇಕು, ಉದ್ಯೋಗಕ್ಕೆ ಬಂದ ಕೂಡಲೇ ಕೆನೆ ಪದರ ಮೆತ್ತಿಕೊಳ್ಳುತ್ತದೆ. ಹಾಗಾಗಿ ಬಡ್ತಿಯಲ್ಲಿ ಮೀಸಲಾತಿಯನ್ನು ಎತ್ತಿ ಹಿಡಿದರೂ ಆ ಉದ್ಯೋಗಗಳನ್ನು ತುಂಬಲಾರದಂತೆ ಮಾಡುವುದೇ ಈ ಕೆನೆ ಪದರ. ಆದ್ದರಿಂದ ಈ ತೀರ್ಪು "Operation Success Patient Died" ಎಂಬಂತಾಗುತ್ತದೆ.

ಹಿನ್ನೋಟ

ಮೊಟ್ಟ ಮೊದಲ ಸಂವಿಧಾನದ ತಿದ್ದುಪಡಿಯ ಮೂಲಕ ಸಾಮಾಜಿಕ ನ್ಯಾಯವನ್ನು ಶಿಕ್ಷಣ ಕ್ಷೇತ್ರಕ್ಕೆ ...ಳವಡಿಸಿದಾಗಿನಿಂದ ನ್ಯಾಯಾಂಗಕ್ಕೂ - ಶಾಸಕಾಂಗಕ್ಕೂ ...ಟಾಪಟಿ ನಡೆಯುತ್ತಿದೆ. ಅದರಲ್ಲೂ ವಿಶೇಷವಾಗಿ ಸಾಮಾಜಿಕ ನ್ಯಾಯದ ವಿರುದ್ಧ ನ್ಯಾಯಾಂಗ ನೀಡಿರುವ ತೀರ್ಪುಗಳ ಸರಮಾಲೆ ಸಂಸತ್ತಿನ ಮೂಲಭೂತ ಅಧಿಕಾರಕ್ಕೆ ...ತ್ತರಿ ಹಾಕಿವೆ. ಒಂದು ಸಂವಿಧಾನದ ತಿದ್ದುಪಡಿ ಮಾಡಲು 368ರ ಪರಿಚ್ಛೇದದ ಪ್ರಕಾರ ಸಂಸತ್ತು ಅತ್ಯಂತ ಕ್ಲಿಷ್ಟವಾದ ಮತ್ತು ಸಮಸ್ಯಾತ್ಮಕವಾದಂತಹ ಹಾದಿಯಲ್ಲಿ ಸಾಗಿ ಬಹುತೇಕ ತಿದ್ದುಪಡಿಗಳಿಗೆ ಸಂಸತ್ತಿನ 2/3 ರಷ್ಟು ಸದಸ್ಯರು ಮತಹಾಕುವುದಲ್ಲದೆ ಅನೇಕ ಸಂದರ್ಭಗಳಲ್ಲಿ ಕನಿಷ್ಠ ...ಷ್ಟದಲ್ಲಿರುವ ಅರ್ಧದಷ್ಟಾದರೂ ರಾಜ್ಯ ವಿಧಾನಮಂಡಲಗಳು ಅನುಮೋದಿಸಿದ್ದಾಗಿವೆ.

ಇಂತಹ ಪ್ರಯಾಸಪಟ್ಟು ಮಾಡಿದ ಸಂವಿಧಾನ ತಿದ್ದುಪಡಿಯನ್ನು ಐದು ಮಂದಿ ನ್ಯಾಯಮೂರ್ತಿಗಳು ...ಳಿತುಕೊಳ್ಳುವ ಸಂವಿಧಾನ ಪೀಠ ಅನೂರ್ಜಿತಗೊಳಿಸಿರುವ ...ಕ್ರಿಯೆಯನ್ನೇ ಗಂಭೀರವಾಗಿ ಪುನರಾಲೋಚಿಸಬೇಕು. ಇಂತಹ ಬೃಹತ್ ಸಂಸತ್ತಿನ ಆಶಯಗಳನ್ನು ನ್ಯಾಯಾಲಯದಲ್ಲಿ ಕಾಪಾಡಿಕೊಳ್ಳಲು ವಿಫಲರಾಗಿರುವ ಕಾನೂನು ...ಬದ್ಧರಾದ ಕಾನೂನುಮಂತ್ರಿಗಳ ಬಗ್ಗೆ ಸಂಸತ್ತು ...ವಾಗಿ ನಿಗಾ ಇಡಬೇಕು.

ಸಾಮಾಜಿಕ ನ್ಯಾಯಕ್ಕೆ ಮತ್ತು ಸಾಮಾಜಿಕ ನ್ಯಾಯದ ...ಚಾರಗಳಿಗೆ ಪ್ರತ್ಯೇಕ ಅಟಾರ್ನಿ ಜನರಲ್‌ರನ್ನು ನೇಮಕ ...ಮಾಡುವುದು ಕೂಡಲೇ ಆಲೋಚಿಸಬಹುದಾದಂತಹ ...ದು ಸಂವಿಧಾನದ ಪ್ರಸ್ತಾವ್ಯ ಇದುವರೆಗೆ ಸರ್ವೋಚ್ಚ ...ಲಯವು ನೀಡಿರುವ ಸಾಮಾಜಿಕ ನ್ಯಾಯದ ಎಲ್ಲಾ ...ರ್ಪುಗಳನ್ನು ಸಹ ಪುನರ್‌ವಿಮರ್ಶೆ ಮಾಡಿದಾಗ ಮಾತ್ರ ...ವಿಧಾನಕ್ಕೆ ಮತ್ತು ಸಂವಿಧಾನದ ಮೂಲ ಆಶಯವಾದ ...ತಹ ಸಾಮಾಜಿಕ ನ್ಯಾಯಕ್ಕೆ ಮತ್ತು ಸಮಾನತೆಗೆ ...ತಹ ನಿಜವಾದ ಗೌರವವಾಗುತ್ತದೆ. ●



Hi everybody,

'ತನನಂ ತನನಂ' ಇಂಟರ್‌ನ್ಯಾಷನಲ್ ಫಿಲ್ಮ್ ಫೆಸ್ಟಿವಲ್‌ಗೆ ಆಯ್ಕೆಯಾಗಿದ್ದು ಕೇಳಿ ನಾನು ಥ್ರಿಲ್ ಆಗಿರುವೆ.

ನಾನು ನಿಮ್ಮ ಬ್ಯಾಂಗ್ಲೂರ್ ಬಾಯ್ ಶ್ಯಾಮ್..... ಸದ್ಯದಲ್ಲೇ ಮೊದಲ ಬಾರಿ ನಿಮ್ಮನ್ನು ಅಂದರೆ ಕನ್ನಡ ಚಿತ್ರ ಪ್ರೇಕ್ಷಕರನ್ನು ಎದುರುಗೊಳ್ಳುತ್ತಿದ್ದೇನೆ. ನಿಮ್ಮ valuation ನಲ್ಲಿ ನಾನು ಖಂಡಿತಾ ಪಾಸ್ ಆಗ್ತೀನಿ... that too in First class...

ಏಕೆಂದರೆ ನಾಯಕನ ಸುತ್ತ ನಡೆಯುವ ಈ ಚಿತ್ರಕತೆಯಲ್ಲಿ ಇಬ್ಬರು ನಾಯಕಿಯರ ಪ್ರೇಮಿಯ ಪಾತ್ರದಲ್ಲಿ ಸಂಗೀತದ ವಿದ್ಯಾರ್ಥಿಯ ಪಾತ್ರದಲ್ಲಿ, ಕೊನೆಕೊನೆಗೆ .... ಪಾತ್ರದಲ್ಲಿ (ಯಾವ ತರಹ ಪಾತ್ರ? ಅದು ಸೀಕ್ರೆಟ್- - - -ಸಿನಿಮಾ ನೋಡಿದರೆ ತಿಳಿಯುತ್ತೆ) ನನ್ನಿಂದ ಪ್ರಬುದ್ಧ acting ಹೊರತೆಗೆದಿದ್ದಾರೆ ಕವಿತಾರವರು.


ಈ ಮೊದಲು ಕನ್ನಡದ ಹಲವರಿಂದ ನನಗೆ ಆಫರ್ ಬಂದಾಗ ತಿರಸ್ಕರಿಸಿದ್ದೆ. ಕವಿತಾರು ನನ್ನನ್ನು ಸಂಪರ್ಕಿಸಿ ಒನ್‌ಲೈನ್ ಸ್ಟೋರಿ ಹೇಳಿದಾಕ್ಷಣವೇ ಒಪ್ಪಿಕೊಂಡುಬಿಟ್ಟೆ.

ನನ್ನ ಹಿನ್ನೆಲೆ ಸ್ವಲ್ಪ ಹೇಳ್ಲಾ?

ನಾನು ಬೆಂಗಳೂರಿನ ಶಿವಾಜಿನಗರದ ಹುಡುಗ. ನನ್ನ ಬಾಲ್ಯ, ಸ್ಕೂಲು, ಕಾಲೇಜು ಅಭ್ಯಾಸಗಳೆಲ್ಲ ನಡೆದಿದ್ದು ಬೆಂಗಳೂರಲ್ಲೇ. ಹಲವು ಆ್ಯಡ್ ಚಿತ್ರಗಳಲ್ಲಿ ಅಭಿನಯಿಸಿದ ನಂತರ, ನಾನು ಕನ್ನಡ ಚಿತ್ರದಲ್ಲಿ ಚಾನ್ಸ್ ಪಡೆಯಲು ಯತ್ನಿಸಿದೆ. ನನಗೆ ಗಾಂಧಿನಗರದ ಜನರನ್ನು ರೀಚ್ ಆಗಲು ಆಗಲೇ ಇಲ್ಲ, ನನ್ನ ಕುಟುಂಬದಲ್ಲಿ ಸಿನಿಮಾ ಬ್ಯಾಕ್‌ಗ್ರೌಂಡ್ ಇಲ್ಲದೇ ಇರೋದೇ ಇದಕ್ಕೆ ಕಾರಣ ಅನಿಸುತ್ತೆ.

ನಂತರ ನಾನು ಚಾನ್ಸ್ ಹುಡುಕುತ್ತಾ ಮುಂಬೈಗೆ ಹೋದೆ. ಅಲ್ಲಿ ಚಾನ್ಸ್‌ಗಳು ಅಧಿಕವಿರುವುದರಿಂದ try ಮಾಡ್ದೆ. ಚಿಕ್ಕವನಿದ್ದಾಗಿನಿಂದಲೂ ಈ ಬಣ್ಣದ ಸಿನಿಮಾ ಜಗತ್ತು ನನ್ನನ್ನು ಸೆಳೆಯುತ್ತಲೇ ಬಂದಿದೆ. ಸಿನಿಮಾದಲ್ಲಿ ಅಭಿನಯಿಸಬೇಕೆಂಬುದು ನನ್ನ long dream ಆಗಿತ್ತು.

ಆ್ಯಡ್ ಏಜೆನ್ಸಿ ನಡೆಸುವ ಬಿಜು ಎನ್ನುವವರು ಒಮ್ಮೆ ನನ್ನನ್ನು ಸಂಪರ್ಕಿಸಿ "ಡೈರೆಕ್ಟರ್ ಜೀವಾ ಹೊಸ ತಮಿಳು ಚಿತ್ರಕ್ಕಾಗಿ ಹೊಸ ಕಲಾವಿದರ ತಲಾಶ್‌ನಲ್ಲಿದ್ದಾರೆ. Try ಮಾಡಿನೋಡು" ಎಂದಾಗ ನಾನು ಥ್ರಿಲ್ಲಾದೆ. ಜೀವಾ ಸಕ್ಸಸ್‌ಫುಲ್ ಡೈರೆಕ್ಟರ್. ಅವರ ಚಿತ್ರದಲ್ಲಿ ಒಂದು ಚಿಕ್ಕ ಪಾತ್ರ ಸಿಕ್ಕರೂ O.K. ಎಂದುಕೊಂಡು ಜೀವಾರನ್ನು ಭೇಟಿಯಾದೆ.



ತಮಿಳೇ ಯಾಕೆ? ತನನಂ ಓಕೆ....

Oh! it was a glorious moment of my career! ಹೀರೋ ರೋಲ್‌ಗೆ ಫ್ರೆಶ್ ಮುಖದ ಹುಡುಕಾಟದಲ್ಲಿದ್ದ ಜೀವಾ ಅವರು ನನ್ನನ್ನೇ ಹೀರೋ ರೋಲ್‌ಗೆ ಸೆಲೆಕ್ಟ್ ಮಾಡಿಬಿಟ್ಟರು. ವಿಭಿನ್ನ ನಿರೂಪಣೆಯ ಆ `12B' ಚಿತ್ರ ಸೂಪರ್ ಹಿಟ್ ಆದದ್ದು ನಿಮಗೂ ಗೊತ್ತಿದೆ. ಮೊದಲ ಚಿತ್ರದಲ್ಲೇ ದಕ್ಷಿಣ ಭಾರತದ ಇಬ್ಬರು ಟಾಪ್ ನಟಿಯರ ಎದುರು ಅಭಿನಯಿಸಬೇಕಲ್ಲ ಎಂದು ಸ್ವಲ್ಪ ಭಯವಾಗಿತ್ತು. ಆದರೆ ಜ್ಯೋತಿಕಾ, ಸಿಮ್ರಾನ್ ಫ್ರೆಂಡ್ಲಿ ಆಗಿ ಮೂವ್ ಆಗಿ, ಆಗಾಗ ಸಲಹೆ ಕೊಡುತ್ತ encourage ಮಾಡಿದರು. ಇಲ್ಲೂ ಕನ್ನಡದಲ್ಲೂ ಮೊದಲ ಚಿತ್ರದಲ್ಲೇ ಮತ್ತೆ ಇಬ್ಬರು ಟಾಪ್ ಹೀರೋಯಿನ್‌ಗಳ ಜೊತೆ ನಟಿಸುವ ಭಾಗ್ಯ ಲಭಿಸಿದೆ.... ನಾನೇ ಲಕ್ಕಿ ಅಲ್ವಾ?

ಅಂದಂತೆ, `12B' ತಮಿಳಿನಲ್ಲಿ ಟ್ರೆಂಡ್ ಸೆಟ್ಟಿಂಗ್ ಸಿನಿಮಾ ಎನಿಸಿಕೊಂಡಿತು. ಚೆನ್ನೈ, ಮಧುರೈ, ತಿರುಚ್ಚಿ ಮುಂತಾದ ಎಲ್ಲ ಸಿಟಿಗಳಲ್ಲೂ ನೂರಕ್ಕೂ ಹೆಚ್ಚು ದಿನ ಓಡಿತ್ತು. ನನ್ನ ಅಭಿನಯ, ಫ್ರೆಶ್ ಮುಖವನ್ನು ತಮಿಳುನಾಡು ಒಪ್ಪಿಕೊಂಡಿತ್ತು. ಅದು ನನ್ನ ಮೊದಲ ಗೆಲುವು. ಇಲ್ಲಿವರೆಗೆ ನಾನು ಸುಮಾರು ಒಂಭತ್ತು ತಮಿಳು ಚಿತ್ರಗಳಲ್ಲಿ ನಟಿಸಿದ್ದೇನೆ. ಕೆಲವು ಸೂಪರ್‌ಹಿಟ್ ಆದರೆ, ಇನ್ನು ಕೆಲವು ಆವರೇಜ್ ಹಿಟ್ ಆಗಿವೆ.

ಖ್ಯಾತ ನಿರ್ದೇಶಕ ಪ್ರಿಯದರ್ಶನ್‌ರವರ 'ಸೇತಾ ಸೇತಾ'ದಲ್ಲಿ ಹೀರೋ ಆಗಿ ಒಳ್ಳೆ ಪ್ರಶಂಸೆ ಗಿಟ್ಟಿಸಿದೆ. ಕನ್ನಡದ ಕುಟ್ಟಿ ರಾಧಿಕಾ ಅಭಿನಯಿಸಿರುವ ಜನಾರವರ 'ಇಯರ್ಕೈ' ಚಿತ್ರದಲ್ಲೂ ನಾನೇ ನಾಯಕ. ಈ ಚಿತ್ರ ರಾಷ್ಟ್ರಪ್ರಶಸ್ತಿ ಪಡೆಯಿತು ಎನ್ನುವುದು ನನಗೆ ಹೆಮ್ಮೆಯ ವಿಷಯ.

ಕವಿತಾರ ಸ್ಪೆಷಾಲಿಟಿ ಏನು? 'ಬೌಂಡೆಡ್ ಸ್ಕ್ರಿಪ್ಟ್' ಅನ್ನು ಫಸ್ಟ್ ಟೈಮ್ ನಾನು ನೋಡಿದ್ದೇ ಇಲ್ಲಿ. ಬೇರೆಲ್ಲ ನಿರ್ದೇಶಕರು ಸ್ಟೋರಿಲೈನ್ ಹೇಳ್ತಾರಷ್ಟೇ. ಸ್ಕ್ರಿಪ್ಟ್ ಪ್ರಕಾರವೇ ಶೂಟ್ ಮಾಡಿದ್ದು ಕವಿತಾರವರ ಪ್ರೊಫೆಷನಲಿಸಂ ತೋರಿಸುತ್ತದೆ. ಕವಿತಾ ತುಂಬಾ intelligent, dedicated ಆದ್ದರಿಂದಲೇ ಅಲ್ಲವೆ ಅವರು ರಮ್ಯಾ, ರಕ್ಷಿತಾ ಇಬ್ಬರನ್ನೂ ಇಟ್ಟುಕೊಂಡು ಚಿತ್ರ ಮಾಡಲು ಸಾಧ್ಯವಾಗಿದ್ದು. ಈ ಚಿತ್ರದಲ್ಲಿ ವಯೋಲಿನ್ ನುಡಿಸುವ ಪಾತ್ರ ನನ್ನದು. ವಯೋಲಿನ್ ಹಿಡಿದು ಹೇಗೆ ಪೊಸಿಷನ್ ತೆಗೆದುಕೊಳ್ಳಬೇಕು, ಹೇಗೆ ನುಡಿಸಬೇಕು ಎಂಬುದನ್ನು ಕಲಿಸಲು ಡಾ.ಎಲ್.ಎಸ್.ರವರ ಶಿಷ್ಯರನ್ನೇ ಕರೆಸಿದ್ದರು ಕವಿತಾ... ಪ್ರತಿ ಶಾಟ್‌ನಲ್ಲೂ ಪರಿಪೂರ್ಣತೆ ಇರಬೇಕು ಎಂಬ ಹಠ ಅವರದು.

ರಮ್ಯಾ, ರಕ್ಷಿತಾರ ಸಹಕಾರವನ್ನು ನಾನು ಮರೆಯುವಂತೆಯೇ ಇಲ್ಲ. ಹೊಸ ಯುನಿಟ್ ಆದ್ದರಿಂದ ಆರಂಭದಲ್ಲಿ ಸ್ವಲ್ಪ ಒತ್ತಡ ಅನುಭವಿಸಿದೆ. ಆದರೆ ಅತೀ ಬೇಗನೆ ನಮ್ಮ ಮನೆಯ ವಾತಾವರಣವನ್ನೇ ಅಲ್ಲಿ ಕಂಡುಕೊಂಡೆ. ರಕ್ಷಿತಾ matured performance ನೀಡಿದ್ದಾಳೆ. ರಮ್ಯಾ ತುಂಬಾ ಡಿಫರಂಟ್‌ಗರ್ಲ್, ನಿಜಕ್ಕೂ ಪ್ರೊಫೆಷನಲ್ ಕಲಾವಿದೆ. ಜಾಣೆ ರಮ್ಯ ಸರಿಯಾದ ಪಾತ್ರಗಳನ್ನೇ choose ಮಾಡಿಕೊಳ್ಳುತ್ತಾಳೆ. ಚಿತ್ರೀಕರಣದ ವೇಳೆ ಆಕೆಯ ಕಿಡಿಗೇಡಿತನಗಳು ಮಜಾ ನೀಡುತ್ತಿದ್ದವು. ಅಯ್ಯಯ್ಯೋ, ನನಗೆ ಚಿಲ್ಲಿ ಕಷಾಯ ಕುಡಿಸಿ ಉರಿಸಿ ಬಿಟ್ಟಿದ್ದಳು. ಇಡೀ ಯುನಿಟ್ಟೇ enjoy ಮಾಡಿತ್ತು ಅವಳ ತುಂಟತನವನ್ನು. ಗಿರೀಶ್ ಸರ್ ಜೊತೆ ಅಭಿನಯಿಸುವುದೇ ಸೌಭಾಗ್ಯ. ಅವರು ಒಂದು ಯುನಿವರ್ಸಿಟಿ ಇದ್ದಂತೆ. ಒಂದಿಷ್ಟೂ Ego ಇಲ್ಲ, ಭಾರತಿ ಮೇಡಂ ಸಹ ತುಂಬಾ ಒಳ್ಳೆಯವರು. ಅಷ್ಟೇ ಬ್ಯೂಟಿಫುಲ್ ಕೂಡ... ರಮ್ಯಾ, ರಕ್ಷಿತಾ ಗಿಂತಲೂ!

ಈ ಚಿತ್ರದ ಎಲ್ಲಾ ಹಾಡುಗಳೂ ಅದ್ಭುತವಾಗಿವೆ. 'ಕಲಿತ ಹುಡುಗಿ' ತುಂಬಾ ಇಷ್ಟ ಆಯ್ತು, ಎಷ್ಟು ಇಷ್ಟು ಆಯ್ತು ಅಂದ್ರೆ ಆ ಹಾಡಲ್ಲಿ ಒಂದೆರಡೇ ಎರಡು ಸ್ಟೆಪ್ಸ್ ಹಾಕ್ತೀನಿ ಅಂದೆ. ಆದರೆ ಕವಿತಾರವರು 'ನೀನೀಗ ನಾಟಕದ ಪ್ರೇಕ್ಷಕ ಅಷ್ಟೇ. ಅಲ್ಲೇ ಕುಕ್ಕರಿಸಿಕೊ ಎಂದರು.

ನಿರ್ಮಾಪಕ ಸುರೇಶ್‌ರವರು sweet heart...
ಅವರಿಗೆ ನಾನು ತುಂಬಾ thankful ಆಗಿದ್ದೇನೆ.

Drama, music ಹಿನ್ನೆಲೆಯ ಈ ಲವ್‌ಸ್ಟೋರಿ ಎಮೋಷನಲ್ ಆಗಿ, ರೋಚಕವಾಗಿ ಮೂಡಿ ಬಂದಿದೆ. ನೀವು ನೋಡಿ ಖುಷಿಗೊಳ್ಳಿ.

ಸದ್ಯಕ್ಕೆ ನಮಸ್ಕಾರ...

-ಶ್ಯಾಮ್

(ನಿರೂಪಣೆ : ಪಿ.ಕೆ. ಮಲ್ಲನಗೌಡರ್)

ಈ ಚಿತ್ರ ನೋಡಬೇಕೆ?



ಹುಬ್ಬಳ್ಳಿ ಆತು ನೋಡ್ರಿ ಗಬ್ಬಳ್ಳಿ....

ಕ್ಷಮಿಸಿ, ನಾನು ಹುಬ್ಬಳ್ಳಿ ನಗರವನ್ನು, ಹುಬ್ಬಳ್ಳಿ ಜನತೆಯನ್ನು ಕುರಿತು ಈ ರೀತಿ ಹೇಳ್ತಿಲ್ಲ. 'ಹುಬ್ಬಳ್ಳಿ' ಎನ್ನೋ ಗಬ್ಬು ಸಿನಿಮಾಕ್ಕೆ ಹೀಗೆ ಹೇಳಲೇಬೇಕಾಗಿದೆ.

ಖರೆ ಹೇಳ್ಬೇಕಂದ್ರ ಹುಬ್ಬಿಯವು ಈ ಪಿಚ್ಚರು ನೋಡಿದ್ರ ಕ್ಯಾಕರಿಸಿ ಉಗೀತಾರ ನೋಡ್ರಿ ಆಕ್ಕಾರ$_{sss}$. ಈ ಸಿನಿಮಾಕ್ಕೂ, ಉತ್ತರ ಕರ್ನಾಟಕಕ್ಕೂ ಒಂದೀಟೂ ಸಂಬಂಧ ಇಲ್ಲ.

ಏನ್ ಚಂದಕ್ಕೆ ಅಂತಾ ಈ ಹೆಸರು ಇಟ್ಟರೋ ನಿರ್ದೇಶಕ 'ದಿ ಗ್ರೇಟ್' ಓಂಪ್ರಕಾಶ್‌ರಾವ್! ನಾಲ್ವರು ದುಷ್ಟರು ಆವಾಗ ಈವಾಗ ಬಂದು 'ಯಾಕ್ಲೇ ಮಗನಾ, ಹೆಂಗೈತಿ ಮೈಯಾಗ' ಅಂದುಬಿಟ್ಟರೆ ಮುಗೀತಾ? ಅಷ್ಟಕ್ಕ 'ಹುಬ್ಬಳ್ಳಿ' ಅಂತಾ ಹೆಸ್ರು ಇಟ್ ಬಿಡೋದನ್ರಿ?

ಸಿನಿಮಾ ಶುರುವಾದ ಕೂಡಲೇ ಅಜಯ್ (ಸುದೀಪ್) ಹಾಫ್ ಮರ್ಡರ್ ಆಗಿ ಬಿದ್ದಿರುತ್ತಾನೆ. ಯಾರೋ ಕಾಪಾಡ್ತಾರೆ. ಯಾರು ಎನ್ನೋದು ಇಲ್ಲಿ ಬರೆಯೋ ಅವಶ್ಯ ಇಲ್ಲ ಬಿಡಿ. ಪ್ರಿಯಾ (ರಕ್ಷಿತಾ) ಸೀರೆ ಯುಟ್ಟು, ರಂಗೋಲಿ ಹಾಕ್ತಾ ಸಂಪ್ರದಾಯಸ್ಥ ಹುಡುಗಿ ತರಹ ಇರ್ತಾಳೆ. ಕಾಲೇಜಲ್ಲಿ ಮಾತ್ರ ಯಾರಾದರೂ ಚುಡಾಯಿಸಿದರೆ ಸಾಕು, ಸೆರಗು, ಲಂಗ-ಗಿಂಗ ಎಲ್ಲಾ ಕಿತ್ತೆಸೆದು ಜಕ್ಕನಕ್ಕ ಜಕ್ಕನಕ್ಕ ಅಂತಾ ಸಿಕ್ಕಾಪಟ್ಟೆ ಕುಣಿದುಬಿಡ್ತಾಳೆ!

ಸುದೀಪ್‌ಗೊಮ್ಮೆ ರಕ್ತ ಬೇಕಾಗಿರುತ್ತೆ, ರಕ್ಷಿತಾ ಬಂದವಳೇ ಧಾರಾಳವಾಗಿ ಒಂದೆರಡು ಬಾಟಲ್ ರಕ್ತ ಕೊಟ್ಟೇ ಬಿಡ್ತಾಳೆ. ಆದರೆ ಕೋಮಾದಿಂದ ಹೊರಬಂದ ಸುದೀಪ್‌ಗೆ ಹಿಂದಿನದೆಲ್ಲಾ ಮರೆತುಹೋಗಿರುತ್ತೆ! ನಮಗೂ ಹೀಗಾಗಿದ್ರೆ ಎಷ್ಟು ಚೆನ್ನಾಗಿರುತ್ತಿತ್ತು? ಅಂತಾ ಅನಿಸ್ತು. ಯಾಕೆಂದರೆ ಈಗಗಾಲೇ ನೋಡಿರೊ ಇಂತಹ ಸಾವಿರಾರು ಚಿತ್ರಗಳು ಮರೆತು ಹೋಗಿದ್ದರೆ, ನಾವೂ ಕೂಡ 'ಹುಬ್ಬಳ್ಳಿ'ಯನ್ನು ಸಹಿಸಿಕೊಳ್ಳಬಹುದಿತ್ತು. ಮತ್ತೆ ಒಮ್ಮೊಮ್ಮೆ ಸಡನ್ನಾಗಿ ಸುದೀಪ್ 'ವಾಂಯ್' ಅಂತಾನೋ 'ಕೊಂಯ್' ಅಂತಾನೋ ಎತ್ತೆತ್ತಲೋ ಮುಖ ಮಾಡಿ ಚೀರಿಬಿಡುತ್ತಾನೆ! ಇದು ನಿಮ್ಮ ತಲೆಯಲ್ಲೂ ಗರಬರಾ ಮಾಡಿಬಿಡುತ್ತೆ. ಹೀಗ್ಯಾಕಾಗುತ್ತೆ ಅಂದರೆ, ಸುದೀಪ್‌ಗೆ ಆಗ ಹಳೆದು ನೆನಪಾಗುತ್ತಂತೆ. ಆಗ ಅವನ ವೈರಿಯ ಮುಖಗಳೆಲ್ಲ ಸ್ಕ್ರೀನ್ ಮೇಲೆ ಚೆಲ್ಲಾಪಿಲ್ಲಿಯಾಗಿ ಬರುತ್ತವೆ! ಅಂದ್ರೆ ಸುದೀಪ್‌ಗೆ ಕ್ಲಿಯರ್ರಾಗಿ ನೆನಪಾಗ್ತಿಲ್ಲ ಅಂತಾ ಅರ್ಥ! ಇಂತಹ ಸುದೀಪನನ್ನು ಪೊಲೀಸರು ಸಖತ್ ಆಗಿ ಹೊಡೆದು, ಚಡ್ಡಿಯಲ್ಲಿ ನಿಲ್ಲಿಸ್ತಾರೆ, ಪಾಪ... ಸುದೀಪನನ್ನು ಚಡ್ಡಿಯಲ್ಲಿ ನೋಡ್ಬಹುದು ಅಂತಾ ಬಂದಿದ್ದ ನನ್ನ ಗೆಳತಿಗೆ ಸುದೀಪನ ಈ ಅವತಾರ ನೋಡಿ ನಿರಾಶೆಯೋ ನಿರಾಶೆ.

ಅದಿರಲಿ, ಯಾವನೋ ಒಬ್ಬ ಹೇಳಿದ ಮೇಲೆ ಪೊಲೀಸರಿಗೆ ಗೊತ್ತಾಗುತ್ತೆ: ಸುದೀಪು ತಮ್ಮ ಹೈಯರ್ ಆಫೀಸರ್ ಅಂತಾ! ಪೊಲೀಸರಿಗೆ ಗೂಂಡಾ, ರೌಡಿಗಳು ಗೊತ್ತಿಲ್ಲದೇ ಇರ್ಬಹುದು; ಅವರ ಆಫೀಸರೂ ಗೊತ್ತಿಲ್ಲಾಂದ್ರೆ ಹೇಗೆ? Anyway, ಸುದೀಪ್ ಹುಬ್ಬಳ್ಳಿಗೆ ಹೋಗಿ, ಏನೇನೋ ರಗಳೆಗಳಾಗಿ, ಕತೆ ಎಲ್ಲೆಲ್ಲೊ ಅಡ್ಡಾದಿಡ್ಡಿ ಸುತ್ತಿ ನಿಮಗೆ ತಲೆಸುತ್ತು ಬರಿಸುತ್ತೆ. ಹುಬ್ಬಳ್ಳಿ ಭಾಷೆ ಮಾತಾಡುವ (ಮಾತಾಡಲ್ಲ, ಸುಮ್ನೆ ತಿಣುಕಾಡಿದ್ದಾರೆ) ಸುದೀಪನ ಭಾವಂದಿರು ಅಕ್ರಮ ಶಸ್ತ್ರಾಸ್ತ್ರ ಡೀಲ್‌ನಲ್ಲಿರುತ್ತಾರೆ. ಸುದೀಪ್‌ಗೆ ಆ ಗತಿ ಬರಲು ಅವರೇ ಕಾರಣರಾಗಿರುತ್ತಾರೆ. ಸುದೀಪ್ ಬಿಡ್ತಾನಾ? ಹುಬ್ಬಳ್ಳಿಯಲ್ಲೇ ಆ ದುಷ್ಟರ ತಲೆ ಮೇಲೆ ಕುಕ್ಕುತ್ತಾನೆ... ನಮ್ಮ ತಲೆಯ ಮೇಲೂ ಅನ್ನಿ.... ನೀವು ಇನ್ನೇನು 'ವಾಂಯ್' ಅಂತಾ ಚೀರ್ಬೇಕು ಅನ್ನೋ ಹೊತ್ತಿಗೆ ಸಿನಿಮಾ ಖತಂ ಆಗುತ್ತೆ. thanks to Om Prakash!

ಬಹಳ ದಿನದಿಂದ ವಿಮರ್ಶೆ ಬರೆದಿಲ್ಲಾಂತ ಈ ಸಿನಿಮಾಕ್ಕೆ ಹೋದೆ. ನೋಡದೇ ಇದ್ದಿದ್ರೆ ವಾಸಿ ಅನಿಸ್ತು, ಈಗ ಇದರ ಬಗ್ಗೆ ಹೆಚ್ಚಿಗೆ ಬರೆಯದಿರೋದೇ ವಾಸಿ ಅನಿಸುತ್ತಿದೆ.

-ಕವಿತಾ ಲಂಕೇಶ್



ಜ್ಯೋತಿಷಿಗಳ ಅವಶ್ಯಕತೆ ಇಲ್ಲ ಎಂದ ದಿವಾನರು!

ಟಿಪ್ಪು ಪತನದ ನಂತರ ರಾಜ್ಯದ ಆಡಳಿತವನ್ನು ಮೈಸೂರು ಅರಸರ ವಂಶಸ್ಥರಿಗೆ ನೀಡಲಾಯಿತಷ್ಟೆ. ಆಗ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರಿಗೆ ಕೇವಲ ಐದು ವರ್ಷ ವಯಸ್ಸು. ದಿವಾನ್ ಪೂರ್ಣಯ್ಯನವರೇ ಅಧಿಕಾರವನ್ನು ರಾಜರ ಹೆಸರಿನಲ್ಲಿ ನಡೆಸುತ್ತಿದ್ದರು. ಮಹಾರಾಜರು ವಯಸ್ಸಿಗೆ ಬಂದ ನಂತರ ಅವರಿಗೂ ಪೂರ್ಣಯ್ಯನವರಿಗೂ ಹಲವು ವಿಷಯಗಳಲ್ಲಿ ಮನಸ್ತಾಪ ಬಂದಿತು. ದಿವಾನರು 1811ರಲ್ಲಿ ರಾಜೀನಾಮೆ ನೀಡಿದರು.


ಯಾರ ನಿಯಂತ್ರಣವೂ ಇಲ್ಲದ ಮಹಾರಾಜರು ತಾವಿರುವುದು ಜನರ ಪಾಲನೆಗೆ ಎಂಬುದನ್ನು ಮರೆತು ಜನರಿರುವುದೇ ತಮ್ಮ ಪಾಲನೆಗೆ ಎಂದು ತಿಳಿದು ಮಧ್ಯಮಾನಿನಿಯರ ಸಹವಾಸದಿಂದ ಐಶಾರಾಮಿ ಜೀವನ ಸಾಗಿಸುತ್ತಾ ನಡೆದರು. ತಮ್ಮ ಖರ್ಚನ್ನು ಭರಿಸಲು ತೆರಿಗೆ ಹಾಕಿದರು. ಇದರಿಂದ ಜನರು ಕ್ಷೋಭೆಗೊಂಡರು. ಅಲ್ಲಲ್ಲಿ ದಂಗೆಗಳು ಎದ್ದವು. ಇದೇ ಸಂದರ್ಭವನ್ನು ಬಳಸಿಕೊಂಡ ಬ್ರಿಟಿಷ್ ಸರ್ಕಾರ ಮೈಸೂರು ರಾಜ್ಯವನ್ನು ಮತ್ತೆ ತನ್ನ ವಶಕ್ಕೆ 1831ರಲ್ಲಿ ತೆಗೆದುಕೊಂಡಿತು. ಮುಂದಿನ ಐವತ್ತು ವರ್ಷಗಳ ಕಾಲ ಅಂದರೆ 1881ರವರೆವಿಗೆ ಅದು ಬ್ರಿಟಿಷರ ಆಳ್ವಿಕೆಯಲ್ಲೇ ಇದ್ದಿತು.

ಈ ಹಿಂದೆ ಆಗಿದ್ದ ಒಡಂಬಡಿಕೆಯಂತೆ 1881ರಲ್ಲಿ ಮತ್ತೆ ರಾಜ್ಯವನ್ನು ಮೈಸೂರು ರಾಜರ ವಂಶಸ್ಥರಿಗೆ ನೀಡಲಾಯಿತು. 25.3.1881ರಂದು ಯುವರಾಜ ಜಯಚಾಮರಾಜೇಂದ್ರ ಒಡೆಯರ್ ಅವರ ಪಟ್ಟಾಭಿಷೇಕ ವಿದ್ಯುಕ್ತವಾಗಿ ವಿಜೃಂಭಣೆಯಿಂದ ನಡೆಯಿತು.

ಮೈಸೂರಿನ ಪುಣ್ಯ ಎಂದೇ ಹೇಳಬೇಕು. ಏಕೆಂದರೆ ಅಂದು ದಿವಾನರಾಗಿ ನೇಮಕ ಆದವರು ಜನಪರ ಚಿಂತಕರೂ, ದೇಶೀಯರ ಆಡಳಿತದಲ್ಲಿ ನಂಬಿಕೆ ಇಟ್ಟಿದ್ದವರೂ, ಪ್ರಗತಿಪರ ಆಲೋಚಕರೂ ಆಗಿದ್ದ ರಂಗಾಚಾರ್ಲು ಅವರು. ಅವರಿಗೆ ಈ ಹಿಂದೆ ಪ್ರಜೆಗಳ ಹಿತವನ್ನು ಮರೆತು ಐಷಾರಾಮಿ ಜೀವನದಲ್ಲಿ ತೊಡಗಿದ್ದ ಮಹಾರಾಜರ ದೆಸೆಯಿಂದಾಗಿ ಮೈಸೂರು ರಾಜ್ಯ ಬ್ರಿಟಿಷರ ಹಿಡಿತಕ್ಕೆ ಸಿಗಬೇಕಾಯಿತು ಎಂಬುದರ ಅರಿವಿತ್ತು. ಮುಂದೆ ಇಂತಹ ಅನಾಹುತಗಳು ಆಗದಿರಬೇಕಾದರೆ ಆಡಳಿತದಲ್ಲಿ ಪ್ರಜೆಗಳೂ ಪಾಲ್ಗೊಳ್ಳಬೇಕು, ಒಂದು ರೀತಿಯ ನಿಯಂತ್ರಣವನ್ನು ಮಹಾರಾಜರ ಮೇಲೆ ಹೇರಬೇಕು ಎಂದು ಮನಗಂಡಿದ್ದರು. ಮಹಾರಾಜರ ಪಟ್ಟಾಭಿಷೇಕಕ್ಕೆ ಸೇರಿದ್ದ ಅಪಾರಜನಸ್ತೋಮದ ಸದುಪಯೋಗ ಮಾಡಿಕೊಳ್ಳಲು ಬಯಸಿದರು. ಅಂದೇ ಮೈಸೂರಿನ ಜಗನ್ಮೋಹನ ಅರಮನೆಯಲ್ಲಿ ಅಧಿಕಾರಿಗಳನ್ನು ಮತ್ತು ವಿವಿಧ ಕ್ಷೇತ್ರಗಳ ಆಹ್ವಾನಿತ ಸದಸ್ಯರ ಸಭೆಯನ್ನು ಪ್ರತ್ಯೇಕವಾಗಿ ನಡೆಸಿ ತಮ್ಮ ಮನದಿಚ್ಛೆಯನ್ನು ಅವರ ಮುಂದೆ ಮಂಡಿಸಿದರು. ಪ್ರಜಾಪ್ರತಿನಿಧಿ ಸಭೆಗೆ ನಾಂದಿ ಹಾಡಿದರು.

ಮೊದಲಿಗೆ ಪ್ರತಿನಿಧಿ ಸಭೆಯೇ ದಸರಾ ಉತ್ಸವದ ಸಂದರ್ಭದಲ್ಲಿ ನಡೆಯುತ್ತಿತ್ತು. ನಿಗದಿತ ಕಂದಾಯ ನೀಡುವ ಹಾಗೂ ವಾಣಿಜ್ಯೋದ್ಯಮಿಗಳ ಪ್ರತಿನಿಧಿಗಳ ಅವಧಿ ಕೇವಲ ಒಂದು ವರ್ಷ ಮಾತ್ರ ಇದ್ದು ನಂತರದ ದಿನಗಳಲ್ಲಿ ಪ್ರತಿನಿಧಿಗಳ ಒತ್ತಾಯದ ಮೇರೆಗೆ ಮೂರು ವರ್ಷಕ್ಕೆ ಏರಿಸಲಾಯಿತು. 1881ರಿಂದ 1907ರವರೆಗಿನ ನಡವಳಿಕೆಯನ್ನು History of legislature (vol.1)ರಲ್ಲಿ ಕರ್ನಾಟಕ ಸರ್ಕಾರ 1989ರಲ್ಲಿ ಪ್ರಕಟಿಸಿದೆ. ಅದರಲ್ಲಿ ಕೆಲವು ಕುತೂಹಲಕರ ಸಂಗತಿಗಳಿವೆ.

ಅವಿದ್ಯಾವಂತ ರೈತರು ಮತ್ತು ವ್ಯಾಪಾರಿಗಳ ಸಲಹೆ ಕೇಳಿ ಆಡಳಿತ ನಡೆಸಬೇಕು ಅನ್ನುವ ಕಲ್ಪನೆಯೇ ಕೆಲವು ಅಧಿಕಾರಿಗಳಿಗೆ ಅನಿಷ್ಟಕಾರಕವಾಗಿ ತೋರಿತು. ಅದನ್ನು ಅವರು "ಬಹಿರಂಗಪಡಿಸಿದಾಗ ದಿವಾನ್ ರಂಗಾಚಾರ್ಲು ಅವರು ನೀವು ಸರ್ಕಾರಿ ನೌಕರರು ಯಾವುದೋ ಒಂದು ನಿರ್ದಿಷ್ಟ ಕೆಲಸವನ್ನು ಉತ್ತಮವಾಗಿ ನಿರ್ವಹಿಸಬಹುದು. ಕೆಲಸ ಬದಲಾಯಿಸಿದರೆ ನೀವು ಆ ಕೆಲಸ ನಿಭಾಯಿಸಲಾರಿರಿ. ಆದರೆ ರೈತರಿಗೆ ಮತ್ತು ವ್ಯಾಪಾರಿಗಳಿಗೆ ಅಪಾರ ಸಾಮಾನ್ಯ ಜ್ಞಾನಸಂಪತ್ತು ಇದೆ. ಅವರು ಜನರ ಮಧ್ಯೆ ಇರುವವರು. ಅವರ ಕಷ್ಟ ಸುಖ ಅರಿತವರು. ಸರ್ಕಾರದ ಕಾನೂನಿನಿಂದ ಜನರ ಮೇಲಿನ ಪರಿಣಾಮವನ್ನು ಬಲ್ಲವರು" ಎಂದು ಹೇಳಿದರಂತೆ. ಮತ್ತೊಂದು ಸಂದರ್ಭದಲ್ಲಿ ಈ ಅವಿದ್ಯಾವಂತ ಪ್ರತಿನಿಧಿಗಳನ್ನು ಅತಿಯಾಗಿ ಓಲೈಸುತ್ತಿರುವ ರೀತಿಯನ್ನು ನೋಡಿ ಕೆಲವು ಅಧಿಕಾರಿಗಳು "ಹೀಗೆ ಮುಂದುವರೆದರೆ ನಾವು ರೈತರಿಗೆ ಲಂಚ ನೀಡಬೇಕಾಗುವ ಪ್ರಸಂಗ ಬರಬಹುದು" ಎಂದು ಉದ್ಗರಿಸಿದರಂತೆ. ಇದನ್ನು ಕೇಳಿ ಕೆರಳಿ ಕೆಂಡ ಆದ ದಿವಾನರು 'ರೈತರು ತಮ್ಮ ಬೆವರು ಸುರಿಸಿ ದುಡಿಯುತ್ತಿದ್ದಾರೆ. ನಮಗೆ ಆಹಾರ



ನೀಡುತ್ತಾರೆ. ಅವರು ನೀಡುವ ತೆರಿಗೆಯಿಂದ ನೀವು ಸಂಬಳ ಪಡೆಯುತ್ತಿದ್ದೀರಿ. ಅದರೂ ನಿಮ್ಮಲ್ಲಿನ ಕೆಲವು ಆಸೆಬುರುಕರು ರೈತರಿಂದಲೇ ಲಂಚ ಕೇಳುವ ಹೀನ ಕೆಲಸ ಮಾಡುತ್ತಿದ್ದೀರಿ. ರೈತರು ನಿಮ್ಮಿಂದ ಲಂಚ ಕೇಳುವ ದಿವಸ ಬಂದರೆ ಅದು ನನ್ನ ಪಾಲಿಗೆ ಸುದಿನ" ಎಂದು ಗುಡುಗಿದರಂತೆ!

ಇವತ್ತಿನ ದಿನವೂ ಪ್ರಜಾಪ್ರತಿನಿಧಿಗಳಿಗೆ ನಿರ್ದಿಷ್ಟ ಶಿಕ್ಷಣ ಇರಲೇ ಬೇಕು ಎನ್ನುವ ಮಾತು ಅಲ್ಲಲ್ಲಿ ಕೇಳಿಬರುವುದುಂಟು. ಇದಕ್ಕೆ ದಿವಾನ್ ರಂಗಾಚಾರ್ಲು ಅವರ ಮಾತು ಉತ್ತರ ಆದೀತೇನೋ!

ಮತದಾರ ವಯಸ್ಸು ಸ್ವಾತಂತ್ರ್ಯ ಬಂದಾಗ 21 ವರ್ಷ ಇದ್ದಿತು. ರಾಜೀವ್‌ಗಾಂಧಿಯವರ ಆಳ್ವಿಕೆ ಅವಧಿಯಲ್ಲಿ ಅದನ್ನು 18 ವರ್ಷಕ್ಕೆ ಇಳಿಸಲಾಯಿತು. ಆದರೆ ಪ್ರತಿನಿಧಿಗಳ ಒತ್ತಾಯದ ಮೇರೆಗೆ 1891ರಲ್ಲಿಯೇ ಪ್ರಜಾಪ್ರತಿನಿಧಿಸಭೆ ಮತದಾರನ ವಯಸ್ಸನ್ನು 21 ರಿಂದ 18 ವರ್ಷಕ್ಕೆ ಇಳಿಸಿತ್ತೆಂಬುದು ಸೋಜಿಗದ ಸಂಗತಿಯಾಗಿದೆ.

ನಮ್ಮ ಶಾಸಕರು ಮತ್ತು ಸಂಸದರು ಸ್ಪರ್ಧೆಯ ಮೇಲೆ ತಮ್ಮ ಸಂಬಳ ಭತ್ಯೆಗಳನ್ನು ಏರಿಸಿಕೊಳ್ಳುತ್ತಿರುವುದು ಭಾರತದಲ್ಲಿ ಸಾಮಾನ್ಯ ಸಂಗತಿಯಾಗಿದೆ. ಅಂದಿನ ಪ್ರತಿನಿಧಿಗಳ ಪ್ರತಿಕ್ರಿಯೆ ಭತ್ಯೆಗಳ ಬಗ್ಗೆ ಏನಿತ್ತು ಎಂಬುದು ಕುತೂಹಲಕಾರಿಯಾಗಿದೆ.

ಪ್ರಾರಂಭದಲ್ಲಿ ಪ್ರತಿನಿಧಿಗಳಿಗೆ ಅಲ್ಪಸ್ವಲ್ಪ ಪ್ರಯಾಣಭತ್ಯೆ ನೀಡಲಾಗುತ್ತಿತ್ತು, ಅದು ಬಹಳ ಕಡಿಮೆ ಇತ್ತು, ಅವರ ಖರ್ಚನ್ನು ಸರಿದೂಗಿಸಲು ಸಾಧ್ಯವಾಗುತ್ತಿರಲಿಲ್ಲ, ಆದುದರಿಂದ ಪ್ರತಿನಿಧಿಗಳ ಭತ್ಯೆಯೇ ಬೇಡ ಎಂದು ತೀರ್ಮಾನಿಸಿದರು. ಸರ್ಕಾರಕ್ಕೂ ಈ ತೀರ್ಮಾನ ಅನುಕೂಲಕರವಾಗಿಯೇ ಇತ್ತಾದ್ದರಿಂದ ಅದನ್ನು ಒಪ್ಪಿಕೊಂಡಿತು. ನಂತರದ ವರ್ಷಗಳಲ್ಲಿ ಈ ವಿಷಯ ಮತ್ತೆ ಮತ್ತೆ ಪ್ರಸ್ತಾಪಕ್ಕೆ ಬರುತ್ತಿತ್ತು. 'ಜನ ಸೇವೆಗ ಭತ್ಯೆ ಪಡೆಯುವುದು ನಮ್ಮ ಘನತೆ ಗೌರವಗಳಿಗೆ ಕುಂದು' ಎಂದು ಬಹುಪಾಲು ಜನರು ಪ್ರತಿಪಾದಿಸಿದಾಗ ಅದು ಬಿದ್ದು ಹೋಗುತ್ತಿತ್ತು!

ಅಣಕ

1901ರಲ್ಲಿ ಮತ್ತೆ ಭತ್ಯೆ ವಿಷಯ ಪ್ರಸ್ತಾಪಕ್ಕೆ ಬಂದಿತು. ಅಮಲ್ದಾರರಿಗೆ ನೀಡುವಷ್ಟಾದರೂ ಭತ್ಯೆ ನೀಡಿ ಎಂಬ ಒತ್ತಾಯ ಒಂದು ಗುಂಪಿನಿಂದ ಬಂದಿತು. 'ಜನಸೇವೆಗೆ ಹಣ ಪಡೆಯುವುದು ತಪ್ಪು' ಎಂಬುದು ಇನ್ನೊಂದು ಗುಂಪಿನ ಅಭಿಪ್ರಾಯವಾಗಿತ್ತು. ಸದಸ್ಯರಲ್ಲಿನ ಈ ಒಡಕನ್ನು ಬಳಸಿಕೊಂಡು ಸರ್ಕಾರ ಭತ್ಯೆ ವಿಷಯವನ್ನು ತಳ್ಳಿ ಹಾಕಿತು!

ಸ್ವಾರಸ್ಯದ ಸಂಗತಿ ಎಂದರೆ ಅಂದು ರೈಲು ಪ್ರಯಾಣ ಪ್ರಯಾಸವಾಗಿರುತ್ತಿತ್ತು. ಅದೂ ದಸರಾ ಹಬ್ಬದ ಸಂದರ್ಭದಲ್ಲಿ ಇನ್ನೂ ಹೆಚ್ಚಿರುತ್ತಿತ್ತು. ಪ್ರತಿನಿಧಿಯೊಬ್ಬರ ಒತ್ತಡ ಏನು ಅಂದರೆ ಅವರವರಿಗೆ ಸೀಟುಗಳನ್ನು ಕಾಯ್ದಿರಿಸಬೇಕು ಎಂಬುದಾಗಿತ್ತು. ಆದರೆ ಮೂರನೇ ದರ್ಜೆಯ ಬೋಗಿಯಲ್ಲಿ ಹೀಗೆ ಮಾಡಲು ಅವಕಾಶ ಇರಲಿಲ್ಲ. ಇದರಿಂದಾಗಿ ಅವರ ಬೇಡಿಕೆ ಏನೆಂದರೆ ಮೂರನೆ ದರ್ಜೆ ಟಿಕೆಟ್ ಪಡೆದಿದ್ದರೂ ಮೊದಲ ದರ್ಜೆ ಬೋಗಿಯಲ್ಲಿ ಪ್ರಯಾಣಿಸಲು ಅವಕಾಶ ನೀಡಬೇಕು ಎಂಬುದಂತೆ! ಇದಕ್ಕೆ ಸರ್ಕಾರ 'ಜನಸೇವೆ ಮಾಡಲು ಇಂತಹ ಸಣ್ಣಪುಟ್ಟ ತೊಂದರೆಗಳನ್ನು ನಿಭಾಯಿಸುವುದು ಅನಿವಾರ್ಯ' ಎಂದು ದಾರ್ಶನಿಕರ ತರಹ ಉತ್ತರ ನೀಡಿತಂತೆ!

1907ರಲ್ಲಿ ಪ್ರಯಾಣಭತ್ಯೆ ವಿಷಯ ಮತ್ತೆ ಪ್ರಸ್ತಾಪಕ್ಕೆ ಬಂದಿತು. 'ಬೆಂಗಳೂರು ಮತ್ತು ಮದರಾಸಿನಲ್ಲಿ ನಡೆಯುವ ಕೌನ್ಸಿಲ್ ಸಭೆಗೆ ಹಾಜರಾಗುವ ಸರ್ಕಾರಿ ನೌಕರೇತರರಿಗೆ ಪ್ರಯಾಣದ ಖರ್ಚೆಂದು 5,000 ರೂಪಾಯಿ ನೀಡಲಾಗುತ್ತಿದೆ. ವಿಶ್ವವಿದ್ಯಾಲಯದ ಪ್ರತಿನಿಧಿಗಳಿಗೆ ಹಾಗೂ ಮದರಾಸಿನ ವಿಧಾನ ಪರಿಷತ್ತಿನ ಸದಸ್ಯರಿಗೆ ಪ್ರಯಾಣ ಭತ್ಯೆ ಮತ್ತು ಇತರೆ ಖರ್ಚುಗಳಿಗಾಗಿ ಹಣ ನೀಡಲಾಗುತ್ತಿದೆ. ನಮಗೆ ಕನಿಷ್ಠ ಎರಡನೆ ದರ್ಜೆ ರೈಲ್ವೆ ಪ್ರಯಾಣ (ಏಕಮುಖ) ಖರ್ಚನ್ನಾದರೂ ಭರಿಸಬೇಕು' ಎಂಬ ಬೇಡಿಕೆಯೂ ಬಿದ್ದು ಹೋಯಿತು.

ಕರ್ನಾಟಕ ಸರ್ಕಾರ ಶಾಸಕರ ವಾಸ್ತವ್ಯಕ್ಕೆಂದು ಭವನಗಳನ್ನು ನಿರ್ಮಿಸುತ್ತಲೇ ಹೋಗುತ್ತಿದೆಯಲ್ಲಾ. ಅಂದು ಹೇಗಿತ್ತು ಈ ವ್ಯವಸ್ಥೆ ಅಂದರೆ ಸ್ಥಳ ಸಿಕ್ಕಿದ ಕಡೆ ತಂಗಬೇಕಾಗುತ್ತಿತ್ತಂತೆ. ಹೀಗಾಗಿ ಒಂದೇ ಜಿಲ್ಲೆಯ ಪ್ರತಿನಿಧಿಗಳು ಒಟ್ಟಿಗೇ ಸೇರಿ ತಮ್ಮ ಜಿಲ್ಲೆಯ ಸಮಸ್ಯೆಗಳನ್ನು ಕುರಿತು ಚರ್ಚಿಸಲು ಅವಕಾಶವೇ ಸಿಗುತ್ತಿರಲಿಲ್ಲವಂತೆ. ಇದರಿಂದ ವಿಚಲಿತಗೊಂಡ ಕೆಲವರು 'ಸದಸ್ಯರಿಗೆ ಒಂದು ಕಡೆ ತಂಗಲು ಅವಕಾಶ ಮಾಡಿಕೊಡಬೇಕು' ಎಂದು' ಘನಸರ್ಕಾರದಲ್ಲಿ ವಿನಂತಿಸಿಕೊಂಡರಂತೆ. ಅದಕ್ಕೆ ಸರ್ಕಾರ 'ಪ್ರತಿನಿಧಿಗಳೇ ಹಣ ಹಾ... ಕಟ್ಟಡ ನಿರ್ಮಿಸಿಕೊಳ್ಳಬಹುದು' ಎಂದು ಧಾರಾಳವಾ... ಉತ್ತರ ನೀಡಿತಂತೆ. ಇದಕ್ಕೆ ಪ್ರತಿಕ್ರಿಯಿಸಿ... ಪ್ರತಿನಿಧಿಗಳು 'ಮನೆ ನಿವೇಶನ ನೀ... ಎಂದು ಸರ್ಕಾರಕ್ಕೆ ಗಂಟು ಬಿದ್ದರಂತೆ! ಇ... ನಡೆದದ್ದು 1890ರಲ್ಲಿ.

ಇಂಗ್ಲಿಷ್ ಮೇಲಿನ ವ್ಯಾಮೋಹ ಈ... ರಾಜ್ಯದ ಕಗ್ಗಂಟಾಗಿದೆಯಲ್ಲ. 1885ರಲ್ಲಿಯ... ಪ್ರತಿನಿಧಿ ಸಭೆಯಲ್ಲಿ ಇಂಗ್ಲಿಷ್ ವ್ಯಾಮೋ... ಮಡುಗಟ್ಟಿತ್ತು. ಜಿಲ್ಲಾ, ತಾಲ್ಲೂಕು ಹಾಗ... ಹೋಬಳಿ ಕೇಂದ್ರಗಳಲ್ಲಿ ಇಂಗ್ಲಿ... ಮಾಧ್ಯಮದ ಶಾಲೆಗಳನ್ನು ಪ್ರಾರಂಭಿಸಬೇಕು ಎಂಬು... ಸದಸ್ಯರ ಒತ್ತಾಯವಾಗಿತ್ತು. ಇಲ್ಲಿ ಒಂದು ವಿಷಯ... ಗಮನಿಸಬೇಕು. ಮೈಸೂರು ರಾಜ್ಯದ ಆಡಳಿತದಲ್ಲಿ ಇಂಗ್ಲಿ... ಬಳಕೆ ಯಥೇಚ್ಛವಾಗಿತ್ತು. ಪ್ರತಿನಿಧಿ ಸಭೆಗಳಲ್ಲೂ ಕೆಲವ... ಇಂಗ್ಲಿಷಿನಲ್ಲಿ ಮಾತನಾಡುತ್ತಿದ್ದರು. ಆಡಳಿತದಲ್ಲಿ ಮ... ಸದನದಲ್ಲಿ ಈ ರೀತಿ ಇಂಗ್ಲಿಷ್ ಬಳಸುವುದನ್ನು ಕಠಿ... ಪದಗಳಲ್ಲಿ ಖಂಡಿಸುತ್ತಿದ್ದವರೂ ಇಂಗ್ಲಿಷ್ ಮಾಧ್ಯ... ಶಾಲೆಗಳಿಗೆ ಒತ್ತಾಯಿಸುತ್ತಿದ್ದರಂತೆ! ತಾವಂತೂ ಇಂಗ್ಲಿ... ಕಲಿಯಲಿಲ್ಲ, ತಮ್ಮ ಮಕ್ಕಳಾದರೂ ಕಲಿಯಲಿ ಎಂ... ಈ ಭಾವನೆ ಕುತೂಹಲಕರವೂ, ಆಶ್ಚರ್ಯಕರವೂ ಆಗಿ...

1886ರಲ್ಲಿ ಈ ಇಂಗ್ಲಿಷ್ ಮಾಧ್ಯಮ ಶಾಲೆಗ... ಪ್ರಸ್ತಾಪ ಮತ್ತೆ ಬಂದಿತು. ಅಂದಿನ ದಿವಾನರಾದ ಶೇಷಾ... ಐಯ್ಯರ್ ಅವರು ಸದಸ್ಯರ ಒತ್ತಾಯಕ್ಕೆ ಕಟ್ಟು ಬಿ... 'ಕನ್ನಡ ಭಾಷೆಯನ್ನು ಚೆನ್ನಾಗಿ ಕಲಿಯಲು ಶಾಲೆಗೆ ಬಳಸು... ಶ್ರಮ ಮತ್ತು ಹಣವನ್ನು ವಿನಿಯೋಗಿಸಿಕೊಳ್ಳಬೇಕ... ಬಿಡುವಿನ ವೇಳೆಯಲ್ಲಿ ಇಂಗ್ಲಿಷ್ ಕಲಿಸಬೇಕು' ಎಂದರಂ...

ಅಂದಿನ ಆಡಳಿತ ಭ್ರಷ್ಟಾಚಾರರಹಿತ ಆಗಿತ್ತೆ?

ಕೆಲವು ಸರ್ಕಾರಿ ನೌಕರರು ಹಳ್ಳಿಯವರಿಂದ ಆಹಾ... ಪದಾರ್ಥಗಳನ್ನು ಹಣ ನೀಡದೆ ಪಡೆದುಕೊಳ್ಳುತ್ತಿದ್ದುದ... 1892ರಲ್ಲಿ ಸದಸ್ಯರು ತೀವ್ರವಾಗಿ ಪ್ರತಿಭಟಿಸಿದರ... ಇಂದಿನಂತೆ ಅಂದೂ ಸರ್ಕಾರದ ಗಮನಕ್ಕೆ ನಿದಿ... ಘಟನೆಗಳನ್ನು ತಂದರೆ ಶಿಕ್ಷಿಸುವುದಾಗಿ ಸರ್ಕಾರ ಭರವ... ನೀಡಿತು!

ಅಂದೂ ಆ ಸ್ಥಾನ ಜ್ಯೋತಿಷಿಗಳು ಇದ್ದರು. ಇದ... ಕಂಡೋ ಏನೋ 1892ರಲ್ಲಿ ಓರ್ವ ಸದಸ್ಯರು ಒಂ... ಸೂಚನೆ ತಂದರು. ಅದೇನೆಂದರೆ ಗ್ರಾಮಗಳಲ್ಲಿ... ಜ್ಯೋತಿಷಿಗಳು ಇದ್ದಾರೆ. ಪಟೇಲ, ಶ್ಯಾನಭೋಗರುಗಳ... ಹಳ್ಳಿ ಅಧಿಕಾರಿಗಳು ಎಂದು ಪರಿಗಣಿಸುವಂತೆ ಇವರ... ಪರಿಗಣಿಸಬೇಕು. ಮತ್ತೆ ಇದು ವಂಶಪಾರಂಪರಿಕ ಎಂ... ಕಾನೂನು ಮಾಡಬೇಕು ಎಂದು ಒತ್ತಾಯಿಸಿದರು. ಅದ... ಉತ್ತರವಾಗಿ ದಿವಾನರು 'ಜ್ಯೋತಿಷಿಗಳ ಸೇವೆ... ಅವಶ್ಯಕತೆಯಿಲ್ಲ' ಎಂದು ಉತ್ತರಿಸಿದರಂತೆ!

ಇಪ್ಪತ್ತೊಂದನೆ ಶತಮಾನದ ಈ ಆಧುನಿಕ ಜಗತ್ತಿನ... ರಾಜಕಾರಣಿಗಳು ಅಡಿಯಿಡಲೂ ಜ್ಯೋತಿಷಿಗ... ಮಾರ್ಗದರ್ಶನ ಪಡೆಯುತ್ತಿರುವುದನ್ನು ನೋಡಿದಾಗ ನಾ... ಮುಂದುವರೆಯುತ್ತಿದ್ದೇವೆಯೋ ಇಲ್ಲ ಹಿಂದುಳಿಯುತ್ತಿ... ವೆಯೋ ಎಂಬ ಅನುಮಾನ ಬರುತ್ತದೆ.

-ಎಚ್.ಎಲ್.ಕೇಶವಮೂರ್ತಿ

ಮನುಷ್ಯರ ಮನುಷ್ಯತ್ವವನ್ನು ಎಚ್ಚರಿಸಿತು

ಉಡುಪಿ ಸಮೀಪದ ಬ್ರಹ್ಮಾವರದ ಶಾಲೆಯೊಂದರಲ್ಲಿ ನಾನು ಅಧ್ಯಾಪಕಿ ಆಗಿದ್ದೇನೆ. ಮಂಗಳೂರಿನಲ್ಲಿ ಗಲಭೆ ಭುಗಿಲೆದ್ದಾಗ ನಮ್ಮ ಶಾಲೆಯಲ್ಲಿರುವ ಮುಸ್ಲಿಂ ಮಕ್ಕಳ ಪಾಲಕರು ಒಬ್ಬೊಬ್ಬರಾಗಿ ಬಂದು ತಮ್ಮ ಮಕ್ಕಳನ್ನು ಕಳುಹಿಸಿಕೊಡಿ ಎಂದು ಕೇಳಿ ಕರೆದುಕೊಂಡು ಹೋದರು. "ತಮಗೇನೋ ಕಾದಿದೆ" ಎಂಬ ಅಭದ್ರತೆ ಆ ಮಕ್ಕಳ ಕಣ್ಣುಗಳಲ್ಲಿ ಎದ್ದು ಕಾಣುತ್ತಿತ್ತು. ಇತ್ತೀಚಿನ ಎರಡು ವರ್ಷಗಳಲ್ಲಿ ಇದು ಸಾಮಾನ್ಯವಾಗಿದೆ. ಇಂಥ ತಲ್ಲಣದೊಂದಿಗೆ ಬೆಳೆಯುವ ಆ ಮಕ್ಕಳು "ನನ್ನ ದೇಶ ಮಹಾನ್" ಎಂದು ಹೃದಯದಿಂದ ಹೇಳುವುದು ಸಾಧ್ಯವೇ ಎನ್ನುವುದು ನನ್ನಂಥವರ ಕಳವಳ.


ತಮ್ಮ ಮೂರು ಸಂಚಿಕೆಗಳಲ್ಲಿ ಪ್ರಕಟವಾದ 'ಪೊಲೀಸ್ ಟೆರರ್' ಎದೆ ನಡುಗಿಸಿತು. ಸರ್ವಾಧಿಕಾರಿ ರಾಜರ ಆಳ್ವಿಕೆಯಲ್ಲಿ ಸೈನಿಕರ ಲೂಟಿಯನ್ನು ಆ ಬರಹಗಳು ನೆನಪಿಸಿದವು.

ಮನುಸ್ಥಿತಿಯನ್ನು ಬಿಚ್ಚಿಟ್ಟ ವ್ಯವಸ್ಥೆ ಮಾಧ್ಯಮದೆದುರು ಸ್ಥಳಕ್ಕೆ ಭೇಟಿಕೊಟ್ಟು, ಸಂತ್ರಸ್ತರ ನೋವನ್ನು ಹಂಚಿಕೊಂಡ ಜಿ. ರಾಜಶೇಖರ, ಪಟ್ಟಾಭಿರಾಮ ಸೋಮಯಾಜಿ ಮತ್ತು ಹರ್ಷದ್ ವರ್ಕಾಡಿ ತಂಡವು ಇನ್ನೂ ನಮ್ಮ ನಡುವಿರುವ 'ಮನುಷ್ಯ'ರ ಮನುಷ್ಯತ್ವವನ್ನು ಎಚ್ಚರಿಸಿದೆ. ಅವರ ಪ್ರಾಮಾಣಿಕ ಪ್ರಯತ್ನದ ದಿಟ್ಟ ಹೆಜ್ಜೆಯಾಗಿ ಮೂಡಿಬಂದ ಈ ವರದಿ ಅನ್ಯಾಯವಾದವರಿಗೆ ನ್ಯಾಯ ದೊರಕಿಸುವಲ್ಲಿ ಸಹಕರಿಸಲಿ ಎಂಬುದಷ್ಟೆ ನಮ್ಮ ಸದ್ಯದ ಹಾರೈಕೆ.

- ಅಭಿಲಾಷಾ, ಬ್ರಹ್ಮಾವರ

'ಲಂಕೇಶ್' ನಲ್ಲಿ ಕನ್ನಡ ಚಿತ್ರರಂಗ ಕುರಿತಂತೆ ಬಂದ ವರದಿ ಮತ್ತು ಸಂಪಾದಕೀಯ ತುಂಬಾ ಚೆನ್ನಾಗಿದ್ದವು. ನಮ್ಮ ಸಂಸ್ಕೃತಿ ಬಗ್ಗೆ ನಿಜವಾಗಲೂ ಕಾಳಜಿ ಹೊಂದಿರುವವರು ಈ ಲೇಖನಗಳನ್ನು ಓದಿಯಾದರೂ ತಮ್ಮ ತಪ್ಪುಗಳನ್ನು ಸರಿಮಾಡಿಕೊಂಡು ಸರಿದಾರಿಯನ್ನು ಹಿಡಿದು ಒಳ್ಳೆ ಚಿತ್ರಗಳನ್ನು ಮಾಡುವಂತಾಗಲಿ.

ಸಂದೀಪ್. ಎಸ್. ಈಮೇಲ್ ಮೂಲಕ



ಹಿಂದೊಮ್ಮೆ, ನಿಮ್ಮ ಪತ್ರಿಕೆಯಲ್ಲಿ ಶಿವರಾಜ್ ಕುಮಾರ್‌ರವರು ಸಿಖ್ ಹುಡುಗರನ್ನು ರಕ್ಷಿಸಿದ್ದನ್ನು ಓದಿ ಸಂತೋಷ ದಿಂದ ಪತ್ರ ಬರೆದಿದ್ದೆ. ಆದರೆ ಇಂದು ಅವರ ಬಗ್ಗೆ ಬೇಸರದಿಂದ ಪತ್ರ ಬರೆಯುತ್ತಿದ್ದೇನೆ. ವಿಷಯ ಇಷ್ಟೇ: ಮೊನ್ನೆ ಸುವರ್ಣ ಕರ್ನಾಟಕ ರಾಜ್ಯೋತ್ಸವ ಸಮಾರಂಭದ ಸಂದರ್ಭದಲ್ಲಿ ಇತರೆ ಚಿತ್ರತಾರೆಯರೊಂದಿಗೆ ಕುಣಿದರು ಶಿವರಾಜ್‌ಕುಮಾರ್. ಆದರೆ ಅವರು "ಹುಟ್ಟಿದರೆ ಕನ್ನಡ ನಾಡಿನಲ್ಲೇ ಹುಟ್ಟಬೇಕು" ಎಂಬ ಹಾಡಿಗೆ ಹೆಜ್ಜೆಹಾಕುತ್ತಿದ್ದಾಗ ಶಿವರಾಜ್ ಕುಮಾರ್, ವಿಜಯ ರಾಘವೇಂದ್ರರ ಟೀ ಶರ್ಟ್ ಮೇಲೆ ಆಂಗ್ಲ ಭಾಷೆಯ ಪದಪುಂಜಗಳು ನೋಡುಗರ ಕಣ್ಣಿಗೆ ರಾಚುತ್ತಿದ್ದವು.

ಹೊಗಳಿಕೆ ತೆಗಳಿಕೆ

ಚಿತ್ರನಟರ ಅನುಕರಣೆ ಮಾಡುವ ದೊಡ್ಡ ಅಭಿಮಾನಿಗಳ ಪಡೆ ಇರುವಾಗ ಇಂತಹ ವಿಷಯಗಳ ಬಗ್ಗೆ ಅವರು ಸೂಕ್ಷ್ಮತೆಯನ್ನು ಹೊಂದಿರಬೇಕು. ಕೊರಳಲ್ಲಿ ಕೆಂಪು-ಹಳದಿ ಬಣ್ಣದ ಬಟ್ಟೆ ಹಾಕಿಕೊಂಡರೆ ಸಾಲದು, ಅವರ ಹೃದಯ ಕೂಡ ಕನ್ನಡವಾಗಿರಬೇಕು.

-ವಿಜಯ ಅಮೃತರಾಜ್, ಕೊಪ್ಪಳ

ನಿರ್ಮಾಪಕರು, ನಿರ್ದೇಶಕರು ಮತ್ತು ನಟರು ಜೊತೆಗೂಡಿ ಪ್ರೇಕ್ಷಕರನ್ನು ಬಖರಾ ಮಾಡುತ್ತಿದ್ದ ಕಾಲ ಮುಗಿದು ಈಗ ನಿರ್ಮಾಪಕರು ಮತ್ತು ನಿರ್ದೇಶಕರೇ ಬಖರಾಗಳಾಗುತ್ತಿದ್ದಾರೆ. ಸಿನಿಮಾ ಎಂಬುದು ಒಂದು ಅದ್ಭುತ ಕಲಾರಂಗ. ಆದ್ದರಿಂದಲೇ "ಸಿನಿಮಾ ದಾಖಲೆಯಲ್ಲದಿರಬಹುದು ಆದರೆ ಅದೊಂದು ಕನಸು" ಎಂದು ಖ್ಯಾತ ನಿರ್ದೇಶಕ ಬರ್ಗಮನ್ ಹೇಳಿದ್ದು. ಇವತ್ತು ನಮ್ಮ ಸಿನಿಮಾರಂಗ ಹೇಗಿದೆಯೆಂದರೆ, ಕ್ಲಾಪ್ ಬೋರ್ಡ್ ಹಿಡಿಯಲೂ ಬಾರದವರು ಸಿನಿಮಾಗಳ ಬಗ್ಗೆ ದೊಡ್ಡದಾಗಿ ಚರ್ಚಿಸುತ್ತಾ ಗಾಂಧಿನಗರದಲ್ಲಿ ಅಲೆಯುತ್ತಿರುತ್ತಾರೆ. ಇವತ್ತು ಕಲೆಗಿಂತ ಹಣದ ಶಾಪ ಚಿತ್ರರಂಗಕ್ಕೆ ಅಂಟಿಕೊಂಡಿದೆ. ಯಾವುದನ್ನು ಹೇಗೆ ಹೇಳಬೇಕು, ಯಾಕೆ ಹೇಳಬೇಕು ಅನ್ನುವುದಕ್ಕಿಂತ ಯಾವುದನ್ನು ಮಾಡಿದರೆ ಹಣ ಗಿಟ್ಟೀತು ಎಂಬುದೇ ಮುಖ್ಯವಾಗಿ ಹೋಗಿದೆ.

ಖ್ಯಾತ ನಿರ್ದೇಶಕ ಅಕಿರಾ ಕುರೊ ಸಾವ ಹೇಳಿರುವಂತೆ "ಹೊರಗಿನ ಪ್ರಪಂಚವನ್ನು ಯಥಾವತ್ತಾಗಿ ಚಿತ್ರಿಸಿದರೆ ಅದು ನೈಜವಾಗುವುದಿಲ್ಲ, ಅದು ಕೇವಲ ನಕಲು ಮಾತ್ರ." ಇದು ನಮ್ಮ ಚಿತ್ರರಂಗದವರಿಗೆ ಹೇಗೆ ಗೊತ್ತಾದೀತು? ನಮ್ಮ ನಿರ್ಮಾಪಕರು ಮತ್ತು ನಿರ್ದೇಶಕರು ಎಚ್ಚೆತ್ತುಕೊಂಡು ಪಕ್ಕದ ಮನೆಯ ಹಳಸಿದ ಊಟವನ್ನು ಪ್ರೇಕ್ಷಕರಿಗೆ ಕೊಡುವುದನ್ನು ನಿಲ್ಲಿಸಿ ಸ್ವಂತ ಸಾಮಗ್ರಿಗಳಿಂದ ಅಡುಗೆಮಾಡಿ ಜನರಿಗೆ ಬಡಿಸಬೇಕಿದೆ.

-ಮುತ್ತಣ್ಣ ಪೂಜಾರ್, ಕದಲಬಾಳು

'ಕಚ್ಚೇಪುರಾಣ'ದಲ್ಲಿ ಬಿ. ಚಂದ್ರೇಗೌಡರು ಬರೆದ 'ದೇವೇಗೌಡರು ಮುಸ್ಲಿಂ ಆಗಕ್ಕೆ ಬಾರದಿಲ್ಲ ಕಣೋ...' ತುಂಬಾ ಸೊಗಸಾಗಿತ್ತು. ನಮ್ಮನ್ನು ನಕ್ಕು ನಲಿಸಿದ ಗೌಡರಿಗೆ ಧನ್ಯವಾದಗಳು.

- ಡಿ. ಎಲ್. ನಾಗರಾಜ್, ಹರಪನಹಳ್ಳಿ

'ಎಂಗಳ್ ಪುಟ್ಟಸ್ವಾಮಿ ರೊಂಬೋ ನಲ್ಲ ಪಡಿಚ್ಚರುಕ್ಕ, ಅದೆಪ್ಪಡಿ ಡ್ಯಾನ್ಸ್ ಪಣ್ಣಿರುಕ್ಕ, ಆಕ್ಟಾಲ್ ಪಣುವದಕ್ಕೇ ರೆಂಡು ಕಣ್ಣಾಲ್ ಪತ್ತಾದ್. ಎನ್ನ ಆನಾಲೂ ಅವನ್ ಎಂಗಳ್ ಪುಟ್ಟಸ್ವಾಮಿ.' ಹೀಗೆಂದು ಚಿತ್ರ ನೋಡಿದ ನನ್ನ ಇನ್‌ಸ್ಟಿಟ್ಯೂಟ್‌ನ ಗೆಳೆಯರು ಹೇಳಿ ನನ್ನ ಬೆನ್ನು ತಟ್ಟಿದಾಗ ನನಗಾದ ಸಂತೋಷಕ್ಕೆ ಮಿತಿಯೇ ಇರಲಿಲ್ಲ.


ಅಲ್ಲಿ ನನಗೆ ಪಾಠ ಹೇಳಿದ್ದ ಲೆಕ್ಚರರ್‌ಗಳೂ ಥ್ರಿಲ್ ಆದರು. "ಪುಟ್ಟಸ್ವಾಮಿ ನಮ್ಮ ಇನ್‌ಸ್ಟಿಟ್ಯೂಟಿನ ಹುಡುಗ ಎಂಬ ಹೇಳಲು, ಕನ್ನಡ ಚಿತ್ರರಂಗಕ್ಕೆ ಈ ಹುಡುಗ ನಮ್ಮ ಕಾಲೇಜಿನ ಕೊಡುಗೆ ಎಂದು ಹೇಳಲು ಹೆಮ್ಮೆ ಆಗುತ್ತಿದೆ" ಎಂದು ಅವರೆಲ್ಲ ನನ್ನನ್ನು ಅಭಿನಂದಿಸಿದರು.

ಕರ್ನಾಟಕದ ಜನರ ಪ್ರೀತಿ, ಮಾಧ್ಯಮದವರ ಪ್ರಶಂಸೆ ಗಳಿಸಿದ್ದ ನಾನು ತಮಿಳ್ನಾಡಿನಲ್ಲೂ ನನ್ನ ಗೆಳೆಯರ, ಗುರುಗಳ, ಪರಿಚಿತರ ಮೆಚ್ಚುಗೆ ಗಳಿಸಿದೆ. ನಾನು ಅಲ್ಲೇ ಹುಟ್ಟಿ ಬೆಳೆದಿದ್ದರೂ ನಾನೊಬ್ಬ ಕನ್ನಡಿಗ ಎಂಬುದನ್ನು ನಾನು ಆಗಾಗ್ಗೆ ಗೆಳೆಯರಿಗೆ ಹೇಳುತ್ತಿದ್ದೆ. ಭಾರತ ಕ್ರಿಕೆಟ್ ತಂಡದಲ್ಲಂತೂ ಹೆಚ್ಚಾಗಿ ಕರ್ನಾಟಕದ ಆಟಗಾರರಿದ್ದದ್ದು ನನಗೆ ಹೆಮ್ಮೆಯ ವಿಷಯವಾಗಿತ್ತು. ಆದರೆ ನಮ್ಮ ನಡುವೆ ಭಾಷೆ ಯಾವತ್ತೂ ಒಂದು ತೊಡಕಾಗಲೇ ಇಲ್ಲ. ಅವರೆಲ್ಲ 'ಆನಂದ್' ಚಿತ್ರವನ್ನು ಎಂಜಾಯ್ ಮಾಡಿದರು.

ಆ ಸಂದರ್ಭದಲ್ಲೇ ನಾವು ಮದ್ರಾಸ್‌ನಲ್ಲಿ ಒಂದು ಫುಟ್ಬಾಲ್ ಟೂರ್ನಮೆಂಟನ್ನು ಏರ್ಪಡಿಸಿದ್ದೆವು. ತಮಿಳ್ನಾಡಿನ ಪ್ರಖ್ಯಾತ ಫುಟ್ಬಾಲ್ ತಂಡಗಳು ಅದರಲ್ಲಿ ಭಾಗವಹಿಸಿದ್ದವು. ಆ ದೊಡ್ಡ ಟೂರ್ನಮೆಂಟ್ ನೋಡಲು ಐದು ಸಾವಿರಕ್ಕೂ ಹೆಚ್ಚು ಜನ ಸೇರಿದ್ದರು. ನನಗಿನ್ನೂ ನೆನಪಿದೆ; ಈ ಪಂದ್ಯದ ಉದ್ಘಾಟನೆ ಆಗಿದ್ದು ಆಗಸ್ಟ್ 15 ರಂದು. ಎರಡು ಕಾರಣಕ್ಕಾಗಿ ನಾನು ಆ ದಿನವನ್ನು ಮರೆಯಲು ಸಾಧ್ಯವಿಲ್ಲ. ಮೊದಲನೆಯದು ಆ ದಿನ ನಮ್ಮ ದೇಶಕ್ಕೆ ಸ್ವಾತಂತ್ರ್ಯ ದಿನಾಚರಣೆ, ಎರಡನೆಯದು ಆದಿನವೇ ನನ್ನ ಮುದ್ದಿನ ಸಹೋದರ ರಾಘವೇಂದ್ರ ರಾಜ್‌ಕುಮಾರನ ಹುಟ್ಟಿದ ಹಬ್ಬ. ಅಂದು ನನ್ನೊಂದಿಗೆ ರಾಘಣ್ಣ ಕೂಡಾ ಟೂರ್ನಮೆಂಟಿನ ಉದ್ದಕ್ಕೂ ಇದ್ದ. ಅವತ್ತು ಲೋಕಲ್ ಶಾಸಕರನ್ನು ಮತ್ತು ಅನೇಕ ಗಣ್ಯರನ್ನು ಆಹ್ವಾನಿಸಿದ್ದೆವು.

ನಮ್ಮ ಸಂಸ್ಥೆಯಿಂದಲೇ ಏರ್ಪಡಿಸಿದ್ದ ಆ ಪಂದ್ಯದಲ್ಲಿ ಪ್ರಶಸ್ತಿ ವಿಜೇತರಿಗೆ ನಮ್ಮ ಸಂಸ್ಥೆಯಿಂದಲೇ ಟ್ರೋಫಿ ಮತ್ತು ನಗದು ಹಣವನ್ನು ನೀಡಿದ್ದೆವು. ನಾನು ಮೂಲತಃ ಅದೇ ಕ್ರೀಡಾಂಗಣದಲ್ಲಿ ಹತ್ತಾರು ವರ್ಷಗಳ ಕಾಲ ಆಡಿದ್ದರಿಂದ, ಇದೆಲ್ಲ ನನಗೆ ಹೆಮ್ಮೆ ನೀಡಿತ್ತು. ಆದರೆ, ಅಷ್ಟೊತ್ತಿಗೆಲ್ಲಾ ನನ್ನ 'ಆನಂದ್' ಚಿತ್ರ ಭರ್ಜರಿ ಯಶಸ್ಸು ಕಂಡು ನಾನೊಬ್ಬ 'ಸ್ಟಾರ್' ಆಗಿದ್ದೆ. ನಾನು ಆ ಸ್ಟಾರ್‌ಗಿರಿಯನ್ನು ಮರೆತು ಪುಟ್ಟಸ್ವಾಮಿಯಾಗಿಯೇ ಓಡಾಡುತ್ತಿದ್ದರೂ ಅಲ್ಲಿ ನೆರೆದಿದ್ದವರು ನನ್ನನ್ನು 'ಶಿವರಾಜ್‌ಕುಮಾರ್' ಎಂದೇ ಗುರುತಿಸಿ, ಹುರಿದುಂಬಿಸುತ್ತಿದ್ದರು. ಆದ್ದರಿಂದ ಆ ಟೂರ್ನಮೆಂಟ್ ನನಗೆ ಮಿಕ್ಸೆಡ್ ಅನುಭವಗಳನ್ನು ನೀಡಿತು.

ಒಂದು ಚಿಂತೆ, ಸಮಸ್ಯೆ ನಮ್ಮನ್ನು ಕಾಡಲಾರಂಭಿಸಿತು. ಈ ಸಂದರ್ಭದಲ್ಲಿ ಅತ್ಯಂತ ಸೂಕ್ತವಾದ ನಿರ್ಣಯ ಅಗತ್ಯವಿತ್ತು. ಸ್ವಲ್ಪ ಎಡವಿದರೂ ನನ್ನ ವೃತ್ತಿ ಜೀವನಕ್ಕೆ ದೊಡ್ಡ ಹೊಡೆತ ಬೀಳುತ್ತಿತ್ತು! ಆ ಸಮಸ್ಯೆಯನ್ನು ನನ್ನ ಅಮ್ಮ ಹೇಗೆ ಎದುರಿಸಿದರು ಎಂಬುದು ಮಾತ್ರ ತುಂಬಾ ಕುತೂಹಲಕಾರಿಯಾಗಿದೆ.....




ಯಶಸ್ಸು ತಂದ ಚಿಂತೆ

ಮದ್ರಾಸ್ ಪ್ರವಾಸ ನನ್ನ ಪಾಲಿಗೆ ಒಂದು ಮರೆಯಲಾಗದ ಅನುಭವ. ಯಾಕೆಂದರೆ ನಾನು ಅಲ್ಲಿ ಹೋದಾಗ, ಆ ಬಾಲ್ಯದ ದಿನಗಳು, ಗೆಳೆಯರ ಜೊತೆ ಹರಟೆ ಹೊಡೆಯುತ್ತಿದ್ದ 'ಅಡ್ಡೆ'ಗಳು, ನನ್ನ ಸ್ನೇಹಿತರೆಲ್ಲಾ ನೆನಪಾದರು. ಎಷ್ಟಾದರೂ ಹಳೆಯ ನೆನಪುಗಳು ಸವಿನೆನಪು; ಮಧುರ ನೆನಪು ತಾನೇ? ಆದರೆ ಒಂದೇ ಒಂದು ಚಿತ್ರ ನನ್ನ ವ್ಯಕ್ತಿತ್ವವನ್ನೇ ಬದಲಾಯಿಸಿಬಿಟ್ಟಿತು. ನನಗೆ ಅತ್ಯಂತ ನೋವಾಗಿದ್ದು ಯಾವಾಗ ಗೊತ್ತಾ? ನನ್ನ ಆತ್ಮೀಯ ಸ್ನೇಹಿತರು ಕೂಡಾ ನನ್ನನ್ನು ಒಬ್ಬ ನಟನಂತೆ ಮಾತನಾಡಿಸಿದಾಗ!

ನಾನು ಮದರಾಸಿಗೆ ಹೋದ ಕೆಲವು ದಿನಗಳ ನಂತರ ನಾನು ಬೆಂಗಳೂರಿಗೆ ಬರಬೇಕೆಂದು ಮನೆಯಿಂದ 'ಬುಲಾವ್' ಬಂತು. ಯಾಕೆಂದರೆ ಅಷ್ಟೊತ್ತಿಗೆಲ್ಲಾ ನನ್ನ ಎರಡನೇ ಚಿತ್ರದ ತಯ್ಯಾರಿ ಆರಂಭವಾಗಿತ್ತು. ಮದ್ರಾಸ್‌ನ ತನ್ನ ಸ್ನೇಹಿತರಿಗೆ ಗುಡ್‌ಬೈ ಹೇಳಿ ವಾಪಾಸ್ ಬೆಂಗಳೂರಿಗೆ ಬಂದಾಗ ಇಲ್ಲಿ ನನ್ನ ಅಮ್ಮ 'ರಥಸಪ್ತಮಿ' ಎಂಬ ಕಾದಂಬರಿಯನ್ನು ಎರಡನೇ ಚಿತ್ರಕ್ಕಾಗಿ ಸೆಲೆಕ್ಟ್ ಮಾಡಿದ್ದರು. ಅದು ಬಹುಶಃ ಆಗಸ್ಟ್ ತಿಂಗಳ ಕೊನೆ ವಾರ. ಆದರೆ ಜೂನ್ ಹತ್ತೊಂಬತ್ತರಂದು ಒಳ್ಳೆಯ ಮುಹೂರ್ತ ಇದೆ ಎಂಬ ಕಾರಣಕ್ಕೆ ಚಿತ್ರದ ರೀ ಕಾರ್ಡಿಂಗ್ ಮುಹೂರ್ತ ಮುಗಿಸಿಬಿಟ್ಟಿದ್ದರು.

ನಿರೂಪಣೆ: ಸದಾಶಿವ ಶೆಣೈ

28



ಹ್ಯಾಟ್ರಿಕ್ ಹೀರೋನ ಹಾರ್ಟ್ ಬೀಟ್!

'ರಥಸಪ್ತಮಿ' ಪೊಲೀಸ್ ಅಧಿಕಾರಿಯಾಗಿದ್ದ ವಿಜಯ ಸಾಸನೂರು ಬರೆದ ಕಾದಂಬರಿಯಾಗಿತ್ತು. ಅಮ್ಮ ಮೊದಲೇ ಇದನ್ನು ಓದಿದ್ದರು. ಅಪ್ಪಾಜಿಗೂ, ವರದಪ್ಪನವರಿಗೂ ಇಷ್ಟವಾಗಿತ್ತು. ನನ್ನ ಅಭಿಪ್ರಾಯ ಕೇಳಿದಾಗ, "ನಿಮ್ಮ ಅಭಿಪ್ರಾಯವೇ ನನ್ನ ಅಭಿಪ್ರಾಯ, ನಿಮ್ಮ ನಿರ್ಣಯಕ್ಕೆ ನಾನು ಬದ್ಧ" ಎಂದೆ.

ಮೊದಲ ಚಿತ್ರದಲ್ಲಿ 'ಟುವ್ವಿ ಟುವ್ವಿ' ಹಾಡು ಸೂಪರ್‌ಹಿಟ್ ಆಗಿದ್ದರಿಂದ ನಾನು ಡ್ಯಾನ್ಸ್‌ಗೆ ಮಹತ್ವ ಇರುವ ಚಿತ್ರದಲ್ಲಿ ನಟಿಸಬೇಕೆಂದು ಕೆಲವರು ಸಲಹೆ ನೀಡಿದ್ದರು. ಮತ್ತೆ ಕೆಲವರು ಆಕ್ಷನ್ ದೃಶ್ಯಗಳಲ್ಲಿ ಅದ್ಭುತವಾಗಿ ನಟಿಸಿದ್ದರಿಂದ ಮಾರಾಮಾರಿ ಚಿತ್ರದಲ್ಲಿ ನಟಿಸಿದರೆ ಎರಡನೇ ಚಿತ್ರವೂ ಸೂಪರ್‌ಹಿಟ್ ಆಗುವುದು ಗ್ಯಾರಂಟಿ ಎಂದಿದ್ದರು. ಆದರೆ ನಾನು ಇದ್ಯಾವುದನ್ನೂ ತಲೆಗೆ ಹಾಕಿಕೊಂಡಿರಲಿಲ್ಲ. ನಮ್ಮ ಅಮ್ಮ-ಅಪ್ಪಾಜಿಯ ಆಯ್ಕೆ ಖಂಡಿತವಾಗಿಯೂ ಅತ್ಯುತ್ತಮವಾಗಿರುತ್ತದೆ ಎಂದು ನಂಬಿದ್ದೆ.

ಹೀಗಾಗಿ ನನ್ನ ಎರಡನೇ ಚಿತ್ರವೂ ಕಾದಂಬರಿ ಆಧಾರಿತ ಚಿತ್ರವಾಯಿತು. ಇದರಲ್ಲೂ ಮೊದಲ ಚಿತ್ರದಂತೆ ಸಂಗೀತಕ್ಕೆ ಸಾಕಷ್ಟು ಪ್ರಾಮುಖ್ಯತೆ ಇತ್ತು. ಪಾತ್ರ ಸ್ವಲ್ಪ ವಿಭಿನ್ನವಾಗಿತ್ತು. ಈ ಚಿತ್ರದಲ್ಲಿ ನನಗೊಬ್ಬಳು ತಂಗಿ ಇದ್ದಿದ್ದರಿಂದ ನನ್ನ ಪಾತ್ರಕ್ಕೆ ಹೆಚ್ಚು ಜವಾಬ್ದಾರಿ ಇತ್ತು. ಅಂದರೆ ಟೋಟಲ್ ಕಾಲೇಜ್ ಲವ್‌ಸ್ಟೋರಿ ಆಗಿರಲಿಲ್ಲ.


ಚಿ. ಉದಯಶಂಕರ್ ಇದರ ಚಿತ್ರಕಥೆ ಮತ್ತು ಸಂಭಾಷಣೆಯ ಜವಾಬ್ದಾರಿ ವಹಿಸಿಕೊಂಡರು. ಅವರು ಈ ಪ್ರಾಜೆಕ್ಟನ್ನು ದೊಡ್ಡ ಚಾಲೆಂಜ್ ಆಗಿ ಸ್ವೀಕರಿಸಿ ಮೊದಲ ಚಿತ್ರದಂತೆ ಇದೂ ಸೂಪರ್ ಹಿಟ್ ಆಗಲೇಬೇಕೆಂದು ಹಠ ತೊಟ್ಟಿದ್ದರು. ಮೊದಲ ಚಿತ್ರಕ್ಕೆ ಶಂಕರ್-ಗಣೇಶ್ ಸಂಗೀತ ನೀಡಿದ್ದರೆ ಈ ಬಾರಿ ಉಪೇಂದ್ರಕುಮಾರ್ ಅವರನ್ನು ಆಯ್ಕೆ ಮಾಡಿದರು. ಯಾಕೆಂದರೆ ನನ್ನ ಅಪ್ಪಾಜಿಯ ಅನೇಕ ಚಿತ್ರಗಳಿಗೆ ಉಪೇಂದ್ರಕುಮಾರ್ ಸೂಪರ್‌ಹಿಟ್ ಟ್ಯೂನ್‌ಗಳನ್ನು ನೀಡಿದ್ದರು. ಛಾಯಾಗ್ರಾಹಕರಾಗಿ ಕಣ್ಣನ್ ಅವರನ್ನು ಆಯ್ಕೆ ಮಾಡಿದರು. ಎಂ.ಎಸ್. ರಾಜಶೇಖರ್ ಈ ಚಿತ್ರವನ್ನು ನಿರ್ದೇಶಿಸುವುದು ಎಂದು ಫಿಕ್ಸ್ ಆಯಿತು.

ಅಷ್ಟೊತ್ತಿಗೆಲ್ಲಾ 'ಆನಂದ್' ಕರ್ನಾಟಕದ ಮೂಲೆ ಮೂಲೆಗಳಲ್ಲಿ ಜಯಭೇರಿ ಬಾರಿಸಿದ್ದರಿಂದ ಗಾಂಧಿನಗರದ ಅನೇಕ ನಿರ್ಮಾಪಕರು ನನ್ನ ಕಾಲ್‌ಶೀಟ್ ಕೇಳುತ್ತಾ ಮನೆಗೆ ಬರಲು ಶುರು ಮಾಡಿದ್ದರು.

ಆಗ ಒಂದು ಚಿಂತೆ, ಸಮಸ್ಯೆ ನಮ್ಮನ್ನು ಕಾಡಲಾರಂಭಿಸಿತು. ಈ ಸಂದರ್ಭದಲ್ಲಿ ಅತ್ಯಂತ ಸೂಕ್ತವಾದ ನಿರ್ಣಯ ಅಗತ್ಯವಿತ್ತು. ಸ್ವಲ್ಪ ಎಡವಿದರೂ ನನ್ನ ವೃತ್ತಿ ಜೀವನಕ್ಕೆ ದೊಡ್ಡ ಹೊಡೆತ ಬೀಳುತ್ತಿತ್ತು! ಆ ಸಮಸ್ಯೆಯನ್ನು ನನ್ನ ಅಮ್ಮ ಹೇಗೆ ಎದುರಿಸಿದರು ಎಂಬುದು ಮಾತ್ರ ತುಂಬಾ ಕುತೂಹಲಕಾರಿಯಾಗಿದೆ.....

(ಮುಂದುವರೆಯುತ್ತದೆ)

ಶ್ವೇತವಸ್ತ್ರಧಾರಿ ಸ್ವಾಮಿಯ ಹಾಡು.....



ಮಾಜಿ ಸ್ವಾಮಿಗಳು, ಹಾಲಿ ಸುಗಮ ಸಂಗೀತ ಗಾಯಕರೂ ಆದ ವಿದ್ಯಾಭೂಷಣ ಅವರು ಅಮೆರಿಕದ ಬಾಲ್ಟಿಮೋರದಲ್ಲಿ ನಡೆದ ನಾಲ್ಕನೆಯ ವಿಶ್ವ ಕನ್ನಡ ಸಮ್ಮೇಳನದಲ್ಲಿ ಪ್ರಮುಖ ಆಕರ್ಷಣೆಯಾಗಿದ್ದರು. ಇದಕ್ಕೆ ಕಾರಣ ಅವರು ಸನ್ಯಾಸತ್ವವನ್ನು ಧಿಕ್ಕರಿಸಿ ಗೃಹಸ್ಥಾಶ್ರಮಕ್ಕೆ ಕಾಲಿರಿಸಿದ್ದು ಎಂದು ನೀವು ಭಾವಿಸಿದರೆ ನಿಮ್ಮ ಊಹೆ ತಪ್ಪಾಗುತ್ತದೆ. ಆ ವಿಷಯ ಭಾರತದಲ್ಲಿ ಮಾತ್ರ ದೊಡ್ಡ ರಾದ್ಧಾಂತವಾಯಿತು. ಆದರೆ ಈ ಬಗ್ಗೆ ಅಮೆರಿಕದಲ್ಲಿ ಅವರನ್ನು ಯಾರೂ ಏನೂ ಕೇಳಲೇ ಇಲ್ಲ.

ವಿದ್ಯಾಭೂಷಣರೂ ಅಷ್ಟೇ.... ಅವರು ಖಾವಿ ಬಟ್ಟೆಯನ್ನು ಬಿಟ್ಟು ಶ್ವೇತ ವಸ್ತ್ರದಲ್ಲಿ ಕಾಣಿಸಿಕೊಂಡದ್ದು ಬಿಟ್ಟರೆ ಬೇರೆ ಅವರಲ್ಲಿ ಯಾವುದೇ ಬದಲಾವಣೆಗಳು ಕಾಣಿಸಲಿಲ್ಲ. ಅದೇ ಗಾಂಭೀರ್ಯ, ಅದೇ ಮುಗ್ಧತೆ, ಅದೇ ನಡಿಗೆ....

ಬಾಲ್ಟಿಮೋರ್‌ನ ಸಭಾಂಗಣದಲ್ಲಿ ಅವರು ಪೂಜೆಗೆ ಕುಳಿತಂತೆ ಕುಳಿತುಕೊಂಡು ಹಾಡಲು ಶುರು ಮಾಡಿದಾಕ್ಷಣ ಸಭಾಂಗಣ ತುಂಬಿಹೋಯಿತು. ಇಡೀ ಸಭಾಂಗಣ ಕಿಕ್ಕಿರಿದಿದ್ದರೂ ಸೂಜಿ ಬಿದ್ದರೂ ಕೇಳಿಸುವಷ್ಟು ಮೌನ ಅಲ್ಲಿ ಆವರಿಸಿತ್ತು. ಅದಕ್ಕಿಂತಲೂ ವಿಶೇಷವೆಂದರೆ ತಡವಾಗಿ ಬಂದವರು ಕುಳಿತುಕೊಳ್ಳಲು ಕುರ್ಚಿ ಸಿಗದಿದ್ದಾಗ ನೆಲದ ಮೇಲೆ ಕುಳಿತು ಹಾಡುಗಳನ್ನು ತನ್ಮಯತೆಯಿಂದ ಆಲಿಸಿದರು. ಹೀಗೆ ನೆಲದಲ್ಲಿ ಕುಳಿತುಕೊಂಡು ಬೇರೆ ಯಾವುದೇ ಸಮಾರಂಭವನ್ನು ಅಮೆರಿಕನ್ನಡಿಗರು ಭಾಗವಹಿಸಿದ ಉದಾಹರಣೆಯೇ ಇಲ್ಲ.

ಹಾಡಲು ಕುಳಿತಾಕ್ಷಣ ತಮ್ಮ ಬತ್ತಳಿಕೆಯಿಂದ ಒಂದೊಂದೇ ದಾಸರಪದಗಳನ್ನು ವಿದ್ಯಾಭೂಷಣರು ಹಾಡುತ್ತಾ ಬಂದರು. ಹಾಡುವಾಗ ಕಣ್ಣುಮುಚ್ಚಿ, ಕೆಲವೊಮ್ಮೆ ಶೂನ್ಯದತ್ತ ದೃಷ್ಟಿಹರಿಸುವ ವಿದ್ಯಾಭೂಷಣರು ಒಮ್ಮೆಯೂ ಪ್ರೇಕ್ಷಕರತ್ತ ಪ್ರತಿಕ್ರಿಯೆಗಾಗಿ ಕಣ್ಣು ಹಾಯಿಸಲೇ ಇಲ್ಲ. ಅಂದು ಅವರ ಹಾಡುಗಳಿಗೆ ಪ್ರೇಕ್ಷಕರು ಭಕ್ತಿಯಿಂದ, ಶ್ರದ್ಧೆಯಿಂದ ತಲೆ ಅಲ್ಲಾಡಿಸುತ್ತಿದ್ದುದನ್ನು ನೋಡಿದಾಗ ನಾವು ಅಮೆರಿಕದಲ್ಲಿದ್ದೇವೋ? ಅಥವಾ ಯಾವುದೋ ದೇವಸ್ಥಾನದ ಅಂಗಳದಲ್ಲಿದ್ದೇವೋ ಎಂಬ ಸಂಶಯ ಬರುವಂತಿತ್ತು.

ಅವರು ಹಾಡಿದ್ದೆಲ್ಲವೂ ಸೂಪರ್ ಹಿಟ್ ಆದವು. 'ನಮ್ಮಮ್ಮ ಶಾರದೆ ಉಮಾ ಮಹೇಶ್ವರಿ.....', 'ಪಿಳ್ಳಂಗೋವಿಯ ಚೆಲುವಾ ಕೃಷ್ಣನಾ ಎಲ್ಲಿ ನೋಡಿದಿರಿ.....?' 'ಅಲ್ಲಿದೆ ನಮ್ಮನೆ ಇಲ್ಲಿ ಬಂದೆ ಸುಮ್ಮನೆ...', 'ಹೂವ ತರುವವರ ಮನೆಗೆ... ಹುಲ್ಲು ತರುವಾ'.... ಮೊದಲಾದ ಹಾಡುಗಳನ್ನು ವಿದ್ಯಾಭೂಷಣರು ಹಾಡಿದಾಗ ಇಡೀ ಸಭಾಂಗಣ ಸ್ತಂಭೀಭೂತವಾಗಿತ್ತು.

ಶೆಣೈ

ಇದು ವಿದ್ಯಾಭೂಷಣರ ಹಾಡುಗಾರಿಕೆಗೆ ಇದ್ದ ಶಕ್ತಿಯನ್ನು ತೋರಿಸುತ್ತದೆ. ಅಮೆರಿಕದ ವೈಭವ ಅಥವಾ ಅಲ್ಲಿಯ ಪಾಶ್ಚಾತ್ಯ ಸಂಸ್ಕೃತಿ ಇದ್ಯಾವುದೂ ಅವರ ಮೇಲೆ ಪ್ರಭಾವ ಬೀರಿದಂತೆ ಕಾಣಿಸಲಿಲ್ಲ. ಹಾಡುಗಾರಿಕೆ ಮುಗಿದ ನಂತರವೂ ಅವರು ತಮ್ಮಷ್ಟಕ್ಕೆ ತಾವು ದೂರ ಹೋಗಿ ಒಬ್ಬರೇ ಕುಳಿತುಕೊಳ್ಳುತ್ತಿದ್ದರು. ಯಾರಾದರೂ ಮಾತನಾಡಿಸಿದರೆ ಮಾತ್ರ ಎರಡು ಮಾತನ್ನು ಆಡುತ್ತಿದ್ದರು. ಅಮೆರಿಕಕ್ಕೆ ಬಂದ ಉಳಿದ ಸುಗಮ ಸಂಗೀತ ಗಾಯಕರ ವರ್ತನೆಗೂ ಇವರ ವರ್ತನೆಗೂ ಅಜಗಜಾಂತರ ವ್ಯತ್ಯಾಸವಿತ್ತು.

ಕರ್ನಾಟಕ ಸರ್ಕಾರ ಕಳುಹಿಸಿದ ಸಾಂಸ್ಕೃತಿಕ ರಾಯಭಾರಿಗಳಲ್ಲಿ ವಿದ್ಯಾಭೂಷಣರೂ ಒಬ್ಬರು. ಆದರೆ ಇದು ಇವರ ಮೊದಲ ಪ್ರವಾಸವೇನೂ ಅಲ್ಲ, ಈ ಹಿಂದೆಯೂ ಅವರು ಅಮೆರಿಕಕ್ಕೆ ಹೋಗಿದ್ದರು. ಅಂತೂ ಹಾಡುವ ಸ್ವಾಮಿ ಅಮೆರಿಕದಲ್ಲಿ ಎಲ್ಲರನ್ನು ರಂಜಿಸಿದರು.

ಬ್ಲಾಕ್ ಟಿಕೆಟಿನವ್ರಿಗೂ ಏಟು!



ಈ ವಾರ ಬಿಡುಗಡೆಯಾಗಿರುವ 'ಪಾಂಡವರು' ಚಿತ್ರ ಹೊಸ ದಾಖಲೆ ಬರೆದಿದೆ. ಅದೇನಪ್ಪಾ ಅಂದ್ರೆ ಮೊದಲನೆ ದಿನ, ಮೊದಲನೆ ಶೋನಲ್ಲೇ ಬ್ಲಾಕ್ ಟಿಕೆಟ್ ಮಾರುವವರು ಹಣೆ ಚಚ್ಚಿಕೊಳ್ಳುತ್ತಿದ್ದಾರಂತೆ.

ಅಂಬಿ, ಅಭಿಜಿತ್, ದೇವರಾಜ್, ರಾಮ್‌ಕುಮಾರು, ಜಗ್ಗೇಶು.. ವಾಟ್ ಎ ಕಾಂಬಿನೇಷನ್! ಜಗ್ಗೇಶ್ ಬಿಟ್ಟರೆ ಉಳಿದವರಿಗೆಲ್ಲ ಕಟ್, ಶಾಟ್, ಪ್ಯಾಕಪ್ ಎಂಬ ಪದಗಳೇ ಮರೆತುಹೋಗಿ ಯಾವ ದಿನವಾಯ್ತು? ಸವೆದು ಹೋದ ನಾಣ್ಯಗಳನ್ನು ಚಲಾವಣೆಗೆ ತರಲು ಹೋದ ಪೂರ್ಣಿಮಾ ರಾಮ್‌ಕುಮಾರ್ ಧೈರ್ಯ ಮೆಚ್ಚಲೇಬೇಕು. ಮಲಯಾಳಿ ಸಿನಿಮಾ 'ಗಾಡ್‌ಫಾದರ್' ಹಿಂದಿಯಲ್ಲಿ 'ಹಲ್‌ಚಲ್' ಆಗಿ ಇಲ್ಲಿಗೆ ಸಪ್ಪೆ ಅಂದ್ರೆ ಸಪ್ಪೆ ಮುಖಗಳನ್ನು ಹೊತ್ತುಕೊಂಡು ಬಂದಿದೆ. ಬಂದೇಟಿಗೆ ಗೊಟಕ್ ಅಂದಿದೆ. ಕೆ.ವಿ. ರಾಜು ಸಹ ಈಗ ಔಟ್‌ಡೇಟೆಡ್ಡೆ ಅಲ್ಲವೆ? ಐಶ್ವರ್ಯವಂತನಾಗುವ ಭಾಗ್ಯವಿಲ್ಲದ ಎಸ್. ಕುಮಾರ್ ಅದೇನು ನೋಡಿ ಡಿಸ್ಟ್ರಿಬ್ಯೂಷನ್ ತೆಗೆದುಕೊಂಡರೊ? 'ಪಾಂಡವರು' ಚಿತ್ರದಲ್ಲಿ ಬರೀ ಕೌರವರೇ ನಟಿಸಿಬಿಟ್ಟಿದ್ದಾರೆ.

ಪ್ರೇಕ್ಷಕನ ರಿಯಾಕ್ಷನ್ ಹೇಗಿದೆ ಎಂದರೆ ಪ್ರೊಡ್ಯುಸರ್, ವಿತರಕ ಇಬ್ಬರೂ ಅಜ್ಞಾತವಾಸಕ್ಕೆ ಹೋಗುವುದು ಗ್ಯಾರಂಟಿ. ಐದೈದು ಹೆವಿವೇಟ್‌ಗಲು... ಗಾತ್ರದಲ್ಲಷ್ಟೇ...... ಜೊತೆಗೆ ಇದಕ್ಕೆಲ್ಲ ಕಳಸವಿಟ್ಟಂತೆ ಗೆಸ್ಟ್‌ರೋಲ್‌ನಲ್ಲಿ ವೇಸ್ಟ್‌ಬಾಡಿಯೊಂದು ಎಂಟ್ರಿ ಹೊಡೆಯುತ್ತೆ, ಅದು ಶಶಿಕುಮಾರ್.... 'ಪಾಂಡವರು' ಅಂತ ಟೈಟಲ್ ಇಟ್ರೆ ಯಾರು ಬರ್‍ತಾರೆ? ಪ್ರೇಕ್ಷಕರೆಲ್ಲಾ ಕೌರವರಾಗಿಬಿಟ್ಟಿದ್ದಾರೇನೋ?

'ಪಾಂಡವರು' ಪೋಸ್ಟರು, ಪ್ರೆಸೆಂಟೇಷನ್ನು ಎಲ್ಲಾ ಹತ್ತು ವರ್ಷದ ಹಿಂದಿನಂತಿದೆ.

ಕನ್ನಡ ನಿರ್ಮಾಪಕರು ನಾವಿನ್ನು ಸಿನಿಮಾ ಮಾಡೋಲ್ಲ ಎಂದಾಗ ಪ್ರೇಕ್ಷಕರು ಒಳ್ಳೆದಾಯ್ತು ಬಿಡಿ ಎನ್ನದೇ ಇನ್ನೇನು ಹೇಳ್ತಾರೆ?



'ಜಯಂತ್, ನಮಸ್ಕಾರ...."

ಕನ್ನಡದ ಯುವ ಬರಹಗಾರರಲ್ಲಿ ಪ್ರಮುಖರಾಗಿರುವ ಜಯಂತ್ ಕಾಯ್ಕಿಣಿ ಈಟಿವಿ ಮೂಲಕ ಮತ್ತೆ ನಮ್ಮೊಂದಿಗೆಲ್ಲ ಮಾತಾಡುತ್ತಿದ್ದಾರೆ.

ಇವತ್ತಿನಿಂದ ಅವರ 'ನಟಸಾರ್ವಭೌಮನಿಗೆ ನಮಸ್ಕಾರ' (ಮುಂಜಾನೆ 8ಕ್ಕೆ) ಶುರುವಾಗಿದೆ. ಡಾ. ರಾಜ್‌ಗೆ ಆಪ್ತರಾಗಿದ್ದವರನ್ನೆಲ್ಲ ಮಾತಾಡಿಸುತ್ತ, ಪ್ರತಿವಾರ ಅಣ್ಣಾವ್ರನ್ನು ನಿಮ್ಮ ಮುಂದೆ ತರುತ್ತಿದ್ದಾರೆ.

ಕುವೆಂಪು, ಕಾರಂತ, ಬೇಂದ್ರೆಯವರ ಸಂಬಂಧಿಕರು, ಪರಿಚಿತರನ್ನೆಲ್ಲ ಸಂದರ್ಶಿಸಿ ಜಯಂತ್ ಮಾಡಿದ್ದ ಮೂರು ಧಾರಾವಾಹಿಗಳು ಸಾಹಿತ್ಯಾಸಕ್ತರನ್ನಷ್ಟೇ ಅಲ್ಲದೇ ಜನಸಾಮಾನ್ಯರನ್ನು ಆಕರ್ಷಿಸಿದ್ದವು.

ಶಿಸ್ತಿನ ಅಧ್ಯಯನ, ಸತ್ಯಕ್ಕೆ ಗೌರವ ಇಟ್ಟುಕೊಂಡು ಕಾರ್ಯಕ್ರಮ ರೂಪಿಸುವ ಜಯಂತ್‌ರ ಈ ಹೊಸ ಕಾರ್ಯಕ್ರಮವನ್ನು ತಪ್ಪಿಸಿಕೊಳ್ಳದಿರಿ.

ಅನ್ನದಾತನೇ ದ್ವಾರಕೀಶ್?



ಕನ್ನಡ ಚಿತ್ರೋದ್ಯಮದಲ್ಲಿ ಅತ್ಯಂತ ಪ್ರತಿಗಾಮಿ ಮನಸ್ಥಿತಿ ಎಷ್ಟು ಮ ನಿಂತಿದೆ ಎಂಬುದಕ್ಕೆ ಮೊನ್ನೆ ನಟ-ನಿರ್ಮಾಪಕ ದ್ವಾರಕೀಶ್ ಸಿನಿಮಾ ಉದ್ಯಮದ ಕಾ ಬಗ್ಗೆ ಕಾರಿಕೊಂಡಿರುವ ಅಸಹನೆಯೇ ಸಾಕ್ಷಿ. ಇನ್ನು ಮುಂದೆ ಈ ಮಹಾಶ ನಿರ್ಮಾಪಕರನ್ನು ಅನ್ನದಾತರೆಂದು ಭಾವಿಸಿ ಹಾಗೆಂದು ರಾಜ್‌ಕುಮಾರ್ ಸಮ ಮುಂದೆ ಪ್ರತಿಜ್ಞೆ ಮಾಡುವ ಕಾರ್ಮಿಕರನ್ನು ಮಾತ್ರ ಕೆಲಸಕ್ಕೆ ತೆಗೆದುಕೊಳ್ಳುತ ಏಕೆಂದರೆ ನಿರ್ಮಾಪಕ ಹಣ ಹೂಡುವುದರಿಂದ ಮಾತ್ರ ಕಾರ್ಮಿಕರಿಗೆ ಸಿಗುತ್ತಿದೆಯಂತೆ.

ಪ್ರಾಯಶಃ ಸಾವಿರಾರು ಕೆಲಸಗಾರರಿಗೆ ಉದ್ಯೋಗ ನೀಡುವ ಉದ್ಯಮಪ ಸಹ ಈ ಮಾತನ್ನು ಆಡುವ ದಾರ್ಷ್ಟ್ಯವನ್ನು ಈವರೆಗೆ ತೋರಿಲ್ಲ. ದ್ವಾರಕೀಶರ ಆಕ ಅವರ ತಿಳಿವಳಿಕೆ ಮತ್ತು ನೈತಿಕಪ್ರಜ್ಞೆಯೂ ಕುಬ್ಜವಾಗಿರುವುದನ್ನಷ್ಟೇ ಇದು ತೋರಿ ನಿರ್ಮಾಪಕರು ಹಣಹೂಡದೆ ಚಿತ್ರವಾಗುವುದಿಲ್ಲ ಸರಿ. ಆದರೆ ಅದೇ ರೀತಿ ನಟಿಸದೆಯೂ ಚಿತ್ರವಾಗುವುದಿಲ್ಲ, ಅದೇ ರೀತಿ ತಂತ್ರಜ್ಞರು ಮತ್ತು ಕಾ ದುಡಿಯದೆ ಬರೀ ಹಣ ಮತ್ತು ನಟರಿದ್ದ ಮಾತ್ರಕ್ಕೆ ಚಿತ್ರ ನಿರ್ಮಾಣವಾಗುವು

ಇವರೆಲ್ಲರ ಸಾಮೂಹಿಕ ಪ್ರಯತ್ನದಿಂದ ಮಾತ್ರ ಚಿತ್ರ ನಿರ್ಮಾಣವಾದರೂ ನಿ ಮುಂಚೆ ನಟರು ಲಾಭ ಪಡೆದಿರುತ್ತಾರೆ. ಚಿತ್ರ ರಿಲೀಸ್ ಆದ ಮೇಲೆ ನಿರ್ಮಾಪಕ ಪಡೆಯುತ್ತಾನೆ. ಚಿತ್ರ ತೋಪು ಹೊಡೆದರೆ ಲಾಸ್ ಮಾಡಿಕೊಳ್ಳುತ್ತಾನೆ. ಆದ ಲಾಸ್ ಬಗ್ಗೆ ಕಾರ್ಮಿಕರಿಗೆ ಕಾಳಜಿ ಇರಬೇಕೆಂದು ಹೇಳುವ ನಿರ್ಮಾಪಕ ಲಾಭ ಅದನ್ನೇನು ಕಾರ್ಮಿಕರ ಜೊತೆ ಹಂಚಿಕೊಳ್ಳುವುದಿಲ್ಲ.

ಅದೆಲ್ಲ ಒತ್ತಟ್ಟಿಗಿರಲಿ. ಹಲವಾರು ಸಾರಿ ಕಾರ್ಮಿಕ ಪೂರ್ತಿ ಕೆಲಸ ಮಾಡಿ ನಿರ್ಮಾಪಕ ಮಾತ್ರ ಪೂರ್ತಿ ಸಂಬಳವನ್ನೇನೂ ಕೊಟ್ಟಿರುವುದಿಲ್ಲ. ಪರಿಸ್ಥಿತಿ ಹೀಗಿ ಯಾರು ಯಾರಿಗೆ ಅನ್ನದಾತರು? ಈ ದಾನಿ-ದಾತ ಸಂಬಂಧಗಳು ರಾಜರ ಮೌಲ್ಯಗಳು. ಒಂದು ಪ್ರಜಾಪ್ರಭುತ್ವದಲ್ಲಿ ಚಿತ್ರೋದ್ಯಮವೂ ಸೇರಿದಂತೆ ಯಾ ಉದ್ಯಮವು ಒಂದು ಸಾಮೂಹಿಕ ಪ್ರಯತ್ನವೇ ಆಗಿರುತ್ತದೆ.

ಅಲ್ಲಿ ಭಾಗೀದಾರರ ಸಂಬಂಧಗಳು ಒಂದು ಪರಸ್ಪರ ಚೌಕಟ್ಟಿಗೆ ಒಳ ಕಾಂಟ್ರಾಕ್ಟ್ ಆಗಿರುತ್ತದೆಯೇ ವಿನಃ ಯಾರು ಯಾರಿಗೂ ಅನ್ನದಾತರೂ ಯಾರೂ ಅನ್ನಕ್ಕಾಗಿ ಗತಿಯಿಲ್ಲದೆ ಋಣಕ್ಕೆ ಕೆಲಸ ಮಾಡುವ ಜೀತಗಾರರೂ ಅಲ್ಲ ಕನಿಷ್ಠ ಒಂದು ಬಂಡವಾಳಶಾಹಿ ವ್ಯವಸ್ಥೆಯ ಸೂತ್ರ. ನಮ್ಮ ಚಿತ್ರೋದ್ಯಮ ಇನ ಹಂತಕ್ಕೂ ತಲುಪದ ರಾಜರ ಕಾಲದಲ್ಲೇ ಇದೆ ಎಂಬುದಕ್ಕೆ ದ್ವಾರಕೀಶ್ ಹೇ ಸಾಕ್ಷಿ!

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 2667642
Fax : 25604536, E-mail :lankesh79@rediffmail.com, Printed at Rajhans Enterprises, # 134, 4th Main, Industrial E